


ಸಮಾಜವಾದದ
ಸಾಲುದೀಪಗಳು

ಸಂಪಾದಕ
ಡಿ ಎಸ್ ನಾಗಭೂಷಣ



ಚಿಕ್ಕಗೌಡ್ರ ನಾಗನಗೌಡ-ಶಿವಮ್ಮ ದತ್ತಿ-ಹದಿನೆಂಟನೇ ಪ್ರಕಟಣೆ

ಸಮಾಜವಾದದ ಸಾಲುದೀಪಗಳು

ಸಂಪಾದಕ

ಡಿ.ಎಸ್.ನಾಗಭೂಷಣ

ಲೋಹಿಯಾ ಪ್ರಕಾಶನ

ಬಳ್ಳಾರಿ

SAMAJAVADADA SALU DEEPAGALU

(A collection of article on Indian Socialist leaders)

Edited by: D.S. Nagabhushana, Vinoba Nagar, Shivamogga-577 204,
Cell: 94492 42294

Published by
Lohiya Prakashana
'Kshitija', Kappagallu Road
Ballari 583 103
Phone: 08392 257412
Cell: 99007 50549

First Impression	:	2020
Copy right	:	Author
Size	:	Demy 1/8
Paper Used	:	80GSM NS Maplitho
Pages	:	xii+104,
Price	:	Rs.51/-
ISBN	:	978-81-87731-61-0
Cover Design	:	Sudhakar Darbe

ಸಮಾಜವಾದದ ಸಾಲುದೀಪಗಳು
ಡಿ.ಎಸ್.ನಾಗಭೂಷಣ

ಪ್ರಕಾಶಕರು	:	**ಲೋಹಿಯಾ ಪ್ರಕಾಶನ** 'ಕ್ಷಿತಿಜ', ಕಪ್ಪಗಲ್ಲು ರಸ್ತೆ ಬಳ್ಳಾರಿ ೫೮೩ ೧೦೩ ದೂ: 08392–257412, ಮೊ: 99007 50549
ಮುದ್ರಣ	:	**ಎಲ್.ಕೆ.ಪ್ರೆಸ್ ಇಂಕ್, ಬೆಂಗಳೂರು** **ಮೊ: 87629 66760**
ಪುಟವಿನ್ಯಾಸ	:	ಎಸ್.ಎಸ್.ಗ್ರಾಫಿಕ್ಸ್, ನೃಪತುಂಗನಗರ ೫೮೩ ೨೭೬ ಸಂಚಾರಿ 94481 66990

ಪ್ರತಿಗಳು ದೊರೆಯುವ ಸ್ಥಳ
ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನ
'ನುಡಿ', ಕಲ್ಲಹಳ್ಳಿ ಬಡಾವಣೆ, ಶಿವಮೊಗ್ಗ 577 204
ಮೊ: 94492 42284

ಸಂಪಾದಕರು

'ಸಮಾಜವಾದದ ಸಾಲುದೀಪಗಳು' ಸಮಾಜವಾದಿ ಚಳುವಳಿಯ ನಾಯಕರನ್ನು ಪರಿಚಯ ಮಾಡಿಕೊಡುತ್ತಿರುವ, ನಾನು ಸಂಪಾದಿಸಿರುವ ಎರಡನೇ ಪುಸ್ತಕ. ೨೦೧೫ರಲ್ಲೇ ಕರ್ನಾಟಕದ ಸಮಾಜವಾದಿ ನಾಯಕರನ್ನು ಪರಿಚಯಿಸುವ ನಮ್ಮ ಸಮಾಜವಾದಿಗಳು; ಚಾಮರಾಜನಗರದ ಸಮತ ಪ್ರಕಾಶನದಿಂದ ೨೦೧೫ರಲ್ಲಿ ಪ್ರಕಟವಾಗಿತ್ತು. ಈಗ ಪ್ರಕಟವಾಗುತ್ತಿರುವ ಪುಸ್ತಕ ರಾಷ್ಟ್ರಮಟ್ಟದಲ್ಲಿ ಹೆಸರಾದ ಕೆಲ ಪ್ರಮುಖ ನಾಯಕರ ಪರಿಚಯ, ಲೇಖನ ಮತ್ತು ಭಾವಚಿತ್ರಗಳನ್ನೊಳಗೊಂಡ ಪುಸ್ತಕವಾಗಿದೆ.

ಬಹುತೇಕ ಒಂದು ರಾಜ್ಯಕ್ಕಷ್ಟೇ ಸೀಮಿತವಾದ ಸಮಾಜವಾದಿ ಪಕ್ಷವೆಂಬುದು ಇಂದು ಹರುಕು ಮುರುಕಾಗಿ ಅಸ್ತಿತ್ವದಲ್ಲಿ ಇದೆಯಾದರೂ, ಸಮಾಜವಾದಿ ಜನಪರಿಷದ್ ಎಂಬ ಅಷ್ಟೇನೂ ಪರಿಚಯವಿಲ್ಲದ ಅಖಿಲ ಭಾರತ ಸಂಘಟನೆಯೊಂದರ ಕೆಲ ಸೀಮಿತ ಚಟುವಟಿಕೆಗಳ ಹೊರತಾಗಿ ಸಮಾಜವಾದಿ ಆಂದೋಲನವೆಂಬುದು ಇಂದು ಹೆಚ್ಚೂ ಕಡಿಮೆ ಇಲ್ಲವಾಗಿದೆ. ಆದರೂ ತಮ್ಮನ್ನು ಸಮಾಜವಾದಿಗಳೆಂದು ಹೆಮ್ಮೆಯಿಂದ ಗುರುತಿಸಿಕೊಳ್ಳಬಯಸುವ ರಾಜಕಾರಣಿಗಳಿಗೇನೂ ಇಂದಿನ ರಾಜಕಾರಣದಲ್ಲಿ ಕೊರತೆ ಇಲ್ಲ. ಇದಕ್ಕೆ ಕಾರಣ, ಭಾರತದ ರಾಜಕಾರಣದಲ್ಲಿನ ಸಮಾಜವಾದಿ ಆಂದೋಲನದ ಉಜ್ವಲ ಚರಿತ್ರೆ. ಅಷ್ಟೇ ಉಜ್ವಲವೆನ್ನಿಸುವ ಅದರ ನಾಯಕ ಗಣ. ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಭಾರತ ಈ ಎರಡರಲ್ಲೂ ಚಿಂತನೆ ಮತ್ತು ಹೋರಾಟಗಳೆರಡರಲ್ಲೂ ಅನನ್ಯ ಪಾತ್ರ ವಹಿಸಿದ ನಾಯಕರು ಅನೇಕ. ಇವರಲ್ಲಿ ಕೆಲವರು ಭಾರತದಲ್ಲಿ ಸಮಾಜವಾದಿ ತತ್ವ, ಆಂದೋಲನ ಮತ್ತು ಪಕ್ಷಗಳ ಸ್ಥಾಪಕರು.

ಇಂತಹ ಉಜ್ವಲ ಇತಿಹಾಸವನ್ನು ಹೊಂದಿರುವ ವ್ಯಕ್ತಿತ್ವಗಳ ಒಂದು ಸಾಲು ದೀಪವನ್ನು ಪ್ರಸ್ತುತಪಡಿಸುವ ಮೂಲಕ ಸಂಕ್ಷಿಪ್ತವಾಗಿಯಾದರೂ ಆ ವ್ಯಕ್ತಿತ್ವಗಳ ಪರಿಚಯಗಳನ್ನು ನಿರೂಪಿಸುವ ಪ್ರಯತ್ನವಾಗಿ ಈ ಪುಸ್ತಕವನ್ನು ರೂಪಿಸಲಾಗಿದೆ. ಇಲ್ಲಿ ಪರಿಚಿತವಾಗಿರುವ ವ್ಯಕ್ತಿತ್ವಗಳ ವೈಖರಿಗಳೇ ಸಮಾಜವಾದಿ ಆಂದೋಲನದ

ತಾತ್ವಿಕತೆ, ಹೋರಾಟ ಮತ್ತು ರಾಜಕಾರಣಗಳ ಸಂಕೀರ್ಣತೆಯನ್ನು ಸೂಚಿಸುವಂತಿದೆ. ಸಮಾಜವಾದಿ ಆಂದೋಲನದ ವಿಘಟನೆಗೆ ಮುಖ್ಯ ಕಾರಣವಾದ ಅತಿಯಾದ ತಾತ್ವಿಕ ನೆಲೆಯ ತಿಕ್ಕಾಟ ಮತ್ತು ವ್ಯಕ್ತಿವಾದ ಸೃಷ್ಟಿಸಿದ ಅದರ ವಿವಿಧ ತಾತ್ವಿಕ ಧಾರೆಗಳನ್ನು ಆಯಾ ಧಾರೆಗಳ ನಾಯಕರ ಪರಿಚಯದೊಂದಿಗೆ ಇಲ್ಲಿ ಪರಿಚಯಿಸಲಾಗಿದೆ. ಹಾಗೆ, ಯಾವ ಧಾರೆಯನ್ನೂ ಇಲ್ಲಿ ನಿರ್ಲಕ್ಷಿಸದಂತೆ ಎಚ್ಚರ ವಹಿಸಲಾಗಿದೆ. ಆದರೂ ಹೆಚ್ಚು ಮಾಹಿತಿ ಲಭ್ಯವಿಲ್ಲದ ಅನೇಕ ನಾಯಕರನ್ನು ಕೈಬಿಡುವ ಅಸಹಾಯಕತೆಯನ್ನೂ ವಿಷಾದವನ್ನೂ ಸಂಪಾದಕ ಎದುರಿಸಬೇಕಾಗಿದೆ.

ಉದಾಹರಣೆಗೆ ಪ್ರೇಮ್ ಭಾಸಿನ್, ಎಚ್.ವಿ.ಕಾಮತ್, ರಾಮ್‌ಧಾರಿ ಸಿಂಗ್, ಮಣಿರಾಂ ಬಾಗಡಿ, ಲಾಡ್ಲಿ ಮೋಹನ ನಿಗಂ, ರಾಮ್‌ಸೇವಕ ಯಾದವ್, ನಿಹಾಲ್ ಅಹಮದ್ ಮುಂತಾದವರ ಬಗ್ಗೆ ಇಲ್ಲಿ ಲೇಖನಗಳಿಲ್ಲದಿದ್ದರೆ ಅದಕ್ಕೆ ಕಾರಣ ಇವರ ಬಗ್ಗೆ ಬರೆಯಬಲ್ಲ ಜನರ ಕೊರತೆ. ಹಾಗೆ ನೋಡಿದರೆ, ಈ ಪುಸ್ತಕದಲ್ಲಿರುವ ಲೇಖನಗಳನ್ನಾದರೂ ಬರೆದವರು ಕೆಲವೇ ಕೆಲವರು. ಪದೇ ಪದೇ ಅವರನ್ನವಲಂಬಿಸುವ ಸ್ಥಿತಿ ಈ ಲೇಖನಗಳನ್ನು ಮೊದಲು ಪ್ರಕಟಿಸಿದ 'ಹೊಸ ಮನುಷ್ಯ' ಸಮಾಜವಾದಿ ಮಾಸಿಕದ ಸಂಪಾದಕನಾದ ನನಗೆ ಎಷ್ಟು ಮುಜುಗರದ ಸಂಗತಿಯಾಗಿತ್ತೆಂದರೆ ಅದನ್ನು ಇಲ್ಲಿ ಹೇಳುವುದು ಉಚಿತವಾಗಲಾರದು. ಕೆಲವರ ಮೇಲೆ ಸ್ನೇಹದ ಒತ್ತಾಯ ಬೀರಿ, ಆಕರ ಗ್ರಂಥಗಳನ್ನು ನೀಡಿ ಲೇಖನಗಳನ್ನು ಬರೆಸಿದ್ದೂ ಉಂಟು. ಇಂತಹ ಪರಿಸ್ಥಿತಿಯಲ್ಲಿ ಇಲ್ಲಿನ ಲೇಖನಗಳನ್ನು ಬರೆದುಕೊಟ್ಟು ಸಹಕರಿಸಿದ ಎಲ್ಲ ಲೇಖಕರಿಗೂ ನಾನು ನಿಜವಾಗಿ ಆಭಾರಿಯಾಗಿದ್ದೇನೆ. ಹಾಗೇ ಅನುಬಂಧಗಳಲ್ಲಿನ ಎರಡು ಲೇಖನಗಳ ಅನುವಾದಕರಾದ ಗೆಳೆಯ ಬಿ.ವಿ.ಸುರೇಂದ್ರ, ಪುಸ್ತಕದ ಕೊನೆಯಲ್ಲಿ ನೀಡಲಾಗಿರುವ ಮೂರೂ ಅನುಬಂಧ ಲೇಖನಗಳು ಪುಸ್ತಕದ ಒಟ್ಟಾರೆ ಉದ್ದೇಶಕ್ಕೆ ಪೂರಕ ಮಾಹಿತಿಯನ್ನು ಒದಗಿಸುತ್ತವೆಂಬುದನ್ನು ಓದುಗರೇ ತಿಳಿಯಬಹುದು. ಜೊತೆಗೆ ಪುಸ್ತಕದ ಕೊನೆಯಲ್ಲಿರುವ ಚಿತ್ರಸಂಪುಟ ರಾಷ್ಟ್ರದ ಪ್ರಮುಖ ಸಮಾಜವಾದಿ ನಾಯಕರ ಮುಖಪರಿಚಯವನ್ನು ಮಾಡಿಕೊಡಬಹುದು. ಹೀಗೆ ಈ ಪುಸ್ತಕದ ಬಿಡಿ ಲೇಖನಗಳು, ಅನುಬಂಧಗಳು ಮತ್ತು ಚಿತ್ರಸಂಪುಟ ಸೇರಿ ಒಟ್ಟಾಗಿ ಭಾರತೀಯ ಸಮಾಜವಾದಿ ಆಂದೋಲನದ ಒಂದು ಸ್ಥೂಲ ಚಿತ್ರವನ್ನಾದರೂ ಕಟ್ಟಿಕೊಡುತ್ತವೆ ಎಂದು ನಾನು ಆಶಿಸಿದ್ದೇನೆ.

ಇನ್ನು ಈ ಪುಸ್ತಕವನ್ನು ನಮ್ಮ ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನದ ದಶಮಾನೋತ್ಸವ ಸಂದರ್ಭದಲ್ಲಿ ಬೆಳಕು ಕಾಣಿಸಬೇಕೆಂಬ ಇಚ್ಛೆಯಿಂದ ಸಮಾಜವಾದಿ ಸಾಹಿತ್ಯವನ್ನು ಕನ್ನಡದಲ್ಲಿ ವಿಪುಲವಾಗಿ ಪ್ರಕಟಿಸಿರುವ ಬಳ್ಳಾರಿಯ ಲೋಹಿಯಾ ಪ್ರಕಾಶನದ ಸಿ. ಚೆನ್ನಬಸವಣ್ಣನವರಲ್ಲಿ ವ್ಯಕ್ತಪಡಿಸಿದಾಗ, ಹಲವು ವರ್ಷಗಳ ಹಿಂದೆಯೇ ತಮ್ಮ ಪ್ರಕಾಶನ ಚಟುವಟಿಕೆಗಳನ್ನು ಸ್ಥಗಿತಗೊಳಿಸಿದ್ದರೂ, ಸಮಾಜವಾದದ ಮೇಲಿನ

ಪ್ರೇಮದಿಂದ ಮತ್ತು ನನ್ನನ್ನು ಕುರಿತ ವಿಶ್ವಾಸದಿಂದ ಈ ಕೃತಿಯನ್ನು ತಮ್ಮ ತಂದೆ-ತಾಯಿಯವರ ನೆನಪಿನ ದತ್ತಿ ಮಾಲೆಯಲ್ಲಿ ಪ್ರಕಾಶಿಸಲು ಕೂಡಲೇ ಒಪ್ಪಿದರು. ಅವರ ಪ್ರೀತಿಗೆ ನಾನು ಮತ್ತು ನಮ್ಮ ಪ್ರತಿಷ್ಠಾನದ ಇತರ ಸದಸ್ಯರು ಋಣಿಯಾಗಿದ್ದಾರೆ.

ಶ್ರೀಮತಿ ಬಿ.ರಶ್ಮಿ ಅವರು ಈ ಪುಸ್ತಕದ ಪುಟ ವಿನ್ಯಾಸ ಮಾಡಿದ್ದಾರೆ. ಶ್ರೀಮತಿ ಸವಿತಾ ನಾಗಭೂಷಣ ಕರಡು ತಿದ್ದಿದ್ದಾರೆ. ಸುಧಾಕರ ದರ್ಬೆಯವರು ಮುಖಪುಟ ರಚನೆ ಮಾಡಿದ್ದಾರೆ. ಎಲ್.ಕೆ.ಪ್ರೆಸ್ ಇಂಕ್‌ನ ಎಸ್.ಬಿ.ಲಕ್ಷ್ಮೀಕಾಂತ ಅವರು ತಮ್ಮ ಮುದ್ರಣಾಲಯದಲ್ಲಿ ಅಚ್ಚುಕಟ್ಟಾಗಿ ಮುದ್ರಿಸಿ ಕೊಟ್ಟಿದ್ದಾರೆ. ಇವರೆಲ್ಲರಿಗೂ ನಮ್ಮ ಪ್ರತಿಷ್ಠಾನ ಕೃತಜ್ಞವಾಗಿದೆ.

ಓದುಗರು ನಾನು ಬರೆದ ಮತ್ತು ಸಂಪಾದಿಸಿದ ಸಮಾಜವಾದಿ ಸಾಹಿತ್ಯ ಕೃತಿಗಳನ್ನು ಕೊಂಡು ಓದಿ ಪ್ರೋತ್ಸಾಹಿಸಿದಂತೆ ಈ ಪುಸ್ತಕವನ್ನೂ ಪ್ರೋತ್ಸಾಹಿಸುವರು ಎಂದು ಭಾವಿಸುತ್ತೇನೆ

೧೫.೩.೨೦೨೦ **ಡಿ.ಎಸ್.ನಾಗಭೂಷಣ**

ಪ್ರಕಾಶಕರ ಮಾತು

೨೦೦೨ರಲ್ಲಿ ನಮ್ಮ ತಾಯಿ ನಿಧನವಾದಾಗ ನಮ್ಮ ತಂದೆ-ತಾಯಿಯವರ ಹೆಸರಿನಲ್ಲಿ ದತ್ತಿಯೊಂದನ್ನು ಸ್ಥಾಪಿಸಿ, ಆ ದತ್ತಿಯ ನೆರವಿನಿಂದ ಲೋಹಿಯಾ ಪ್ರಕಾಶನದಿಂದ ಪ್ರತಿವರ್ಷವೂ ಒಂದು ಕೃತಿಯನ್ನು ಪ್ರಕಟಿಸಿ, ಆ ಕೃತಿಗೆ ಅತಿ ಕಡಿಮೆ ಬೆಲೆ ನಿಗದಿಪಡಿಸಿ, ವ್ಯಾಪಕವಾಗಿ ಓದುಗರಿಗೆ ತಲುಪಿಸಬೇಕೆಂದು ನಿರ್ಧರಿಸಿದೆವು. ನಮ್ಮ ತಂದೆ-ತಾಯಿ ಪುಣ್ಯದಂತೆ ಬಂದು, ಜ್ಞಾನದಂತೆ ಇದ್ದು, ಮುಕ್ತಿಯಂತೆ ಹೋದ ಸಾಮಾನ್ಯರಲ್ಲಿ ಸಾಮಾನ್ಯರು. ಕಾಯಕದ ಮೂಲಕ ಎಲ್ಲ ಕಷ್ಟ ಕಾರ್ಪಣ್ಯಗಳನ್ನು ಎದುರಿಸುತ್ತಾ ನಮ್ಮನ್ನು ಬೆಳೆಸಿ ಲೋಕವನ್ನು ಗೆದ್ದು ಹೋದವರು. ಸುಗ್ಗಿ, ಸಂಕಟಗಳನ್ನು ಸಮಚಿತ್ತದಿಂದ ಸ್ವೀಕರಿಸಲು ಕಲಿಸಿದವರು. ಇತಿಮಿತಿಗಳಲ್ಲೆ ಜೀವನವನ್ನು ತೃಪ್ತಿಯಿಂದ ಅನುಭವಿಸಲು ತಿಳಿಸಿದವರು. ಭೋಗದ ಹಸಿವನ್ನೇ ಮುಖ್ಯ ಮಾಡಿಕೊಂಡಿರುವ ಇಂದಿನ ಪೀಳಿಗೆಯನ್ನು ನೋಡಿದಾಗ ಅವರು ಕೊಟ್ಟ ಸಂಸ್ಕಾರದ ಅರ್ಥ ಈಗ ನಮಗೆ ಅಕ್ಷರಶಃ ಆಗುತ್ತಿದೆ.

'ಪುಸ್ತಕ-ಸಂಸ್ಕೃತಿಯ ಪ್ರತೀಕ' ಎಂದು ಭಾವಿಸಿರುವ ಲೋಹಿಯಾ ಪ್ರಕಾಶನ ಪುಸ್ತಕವನ್ನು ಉದ್ಯಮವೆಂದು ಒಪ್ಪಿ ಅರಗಿಸಿಕೊಳ್ಳಲು ಆಗುತ್ತಿಲ್ಲ. ಪ್ರಾರಂಭದಲ್ಲಿ ನಮ್ಮ ಪ್ರಕಾಶನ ಒಂದು ಓಯಸಿಸ್ ಆಗಿ ಪರಿಣಮಿಸಬಹುದೆಂದು ನಮಗೆ ಅನಿಸಿರಲಿಲ್ಲ. ಅಷ್ಟಕ್ಕೂ ಆ ಓಯಸಿಸ್‌ಗೆ ಲೋಹಿಯಾರ ಚಿಂತನೆ ಹಾಗೂ ಆಶಯಗಳೆ ಬತ್ತದ ಸೆಲೆಗಳಾಗಿದ್ದವು. ಕಳೆದ ಮೂರು ದಶಕಗಳಲ್ಲಿ ಉದಾರೀಕರಣ-ಗೋಳೀಕರಣದ ಪ್ರಭಾವದಿಂದಾಗಿ ಸೇವಾ ವಲಯವೇ ಮಾಯವಾಗಿ, ಶಿಕ್ಷಣೋದ್ಯಮ, ಆರೋಗ್ಯೋದ್ಯಮ, ಮಾಧ್ಯಮೋದ್ಯಮ, ಅಷ್ಟೇ ಏಕೆ ಧರ್ಮವೂ ಕೂಡ ಧರ್ಮೋದ್ಯಮವಾಗಿ ವಿಜೃಂಭಿಸುತ್ತಿದೆ.

೧೯೯೦ರಲ್ಲಿ ಪ್ರಾರಂಭವಾದ ಲೋಹಿಯಾ ಪ್ರಕಾಶನ ೨೦೧೫ರವರೆಗೆ ೧೮೦ ಕೃತಿಗಳನ್ನು ಹೊರತಂದಿದೆ. ಈಗಿನ ಉದ್ಯಮದ ದೃಷ್ಟಿಯಲ್ಲಿ ಅದೇನೂ ದೊಡ್ಡ ಸಂಖ್ಯೆಯಲ್ಲ. ಒಂದು ವರ್ಷದಲ್ಲೆ ನೂರಾರು ಕೃತಿಗಳನ್ನು ಹೊರತರುವ ಉದ್ಯಮಿಗಳು

ಹಲವರಿದ್ದಾರೆ. ಲೋಹಿಯಾ ಪ್ರಕಾಶನದ ಕೃತಿಗಳು ಪ್ರತಿವರ್ಷ ಲೋಹಿಯಾರ ಜನ್ಮದಿನ ಮಾರ್ಚ್ ೨೩ರಂದು ನಾಡಿನ ೮-೧೦ ಕೇಂದ್ರಗಳಲ್ಲಿ ಏಕಕಾಲದಲ್ಲಿ ಬಿಡುಗಡೆಗೊಂಡು ಬೆಳಗಾಗುವುದರೊಳಗೆ ಸಮಾನ ಮನಸ್ಕ ಗೆಳೆಯರ ಮೂಲಕ ೧೫-೨೦ ಜಿಲ್ಲೆಗಳ ಓದುಗರಿಗೆ ತಲುಪಿದ್ದವು. ಪ್ರಕಾಶನದ ಶ್ರೇಯಸ್ಸು ಮತ್ತು ಯಶಸ್ಸು ಈ ಸಮಾನ ಮನಸ್ಕ ಗೆಳೆಯರಿಗೆ ಸಲ್ಲುತ್ತದೆ. ಈ ಸಮಷ್ಠಿ ಪ್ರಜ್ಞೆಯಿಂದ ಕೆಲಸ ಮಾಡುತ್ತಿದ್ದ ಪ್ರಕಾಶನ ಹಲವು ಕಾರಣಗಳಿಂದಾಗಿ ಕಳೆದ ಐದು ವರ್ಷಗಳಿಂದ ಸ್ಥಗಿತಗೊಂಡಿದೆ. ಆದರೂ ದತ್ತಿಯ ಮೂರು ಕೃತಿಗಳು ನಾಡೋಜ ಕೋ.ಚೆನ್ನಬಸಪ್ಪನವರ ಅರವಿಂದ ಪ್ರಕಾಶನದಿಂದ ಹೊರಬಂದವು. ಕಳೆದ ವರ್ಷ ಆ ಹಿರಿಯರೂ ಕಾಲವಾದ ಕಾರಣ ಕೃತಿ ಹೊರಬರಲಿಲ್ಲ. ಕಳೆದ ಇಪ್ಪತ್ತು ದಿನಗಳ ಹಿಂದೆ ಗೆಳೆಯ ಡಿ.ಎಸ್.ನಾಗಭೂಷಣ ಅವರು 'ರಸಿಕ ರುದ್ರತಪಸ್ವಿ ಲೋಹಿಯಾ' ಹಾಗೂ 'ಸಮಾಜವಾದದ ಸಾಲುದೀಪಗಳು' ಕೃತಿಗಳನ್ನು ಪ್ರಕಟಿಸಲು ಸಲಹೆ ಇತ್ತಾಗ, ಸಂತೋಷದಿಂದ ಪ್ರಕಾಶನಕ್ಕೆ ಮತ್ತೆ ಚಾಲನೆ ಕೊಟ್ಟು, ಪ್ರತಿವರ್ಷ ಕನಿಷ್ಠ ಒಂದು ಪ್ರಕಟಣೆಯನ್ನಾದರೂ ದತ್ತಿಯಿಂದ ಹೊರತರೋಣ ಎಂದು ನಿರ್ಧರಿಸಿದೆವು. ಏಕೆಂದರೆ ಈವರೆವಿಗೆ ದತ್ತಿಯ ಹದಿನಾರು ಪ್ರಕಟಣೆಗಳ ಸುಮಾರು ಒಂದೂವರೆ ಲಕ್ಷ ಪ್ರತಿಗಳು ನಾಡಿನ(ವಿಶ್ವದ)ಮನ-ಮನೆಗಳಿಗೆ ತಲುಪಿದ ಹೆಮ್ಮೆ ಪ್ರಕಾಶನಕ್ಕಿದೆ.

ಈ ಎರಡು ಕೃತಿಗಳನ್ನು ಸಂಪಾದಿಸಿ ಕೊಟ್ಟ ಗೆಳೆಯ ಡಿ.ಎಸ್.ನಾಗಭೂಷಣ ಅವರಿಗೆ, ಎಂದಿನಂತೆ ಅರ್ಥಪೂರ್ಣ ಮುಖಪುಟ ವಿನ್ಯಾಸ ಮಾಡಿಕೊಟ್ಟ ಕಲಾವಿದ ಸುಧಾಕರ ದರ್ಬೆ ಅವರಿಗೆ ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟ ಎಲ್.ಕೆ.ಪ್ರೆಸ್ ಇಂಕ್‌ನ ಎಸ್.ಬಿ.ಲಕ್ಷ್ಮೀಕಾಂತ್ ಅವರಿಗೆ ಪ್ರಕಾಶನ ಋಣಿಯಾಗಿದೆ. ಕನ್ನಡದ ಓದುಗರು ಎಂದಿನಂತೆ ಈ ಕೃತಿಗಳನ್ನು ಸ್ವೀಕರಿಸುತ್ತಾರೆಂದು ನಂಬಿದ್ದೇವೆ.

ಮಾರ್ಚ್ ೧೬, ೨೦೨೦ — **ಸಿ.ಚನ್ನಬಸವಣ್ಣ**
ಬಳ್ಳಾರಿ — ಪ್ರಕಾಶನದ ಪರವಾಗಿ

ಪರಿವಿಡಿ

೧

ಭಾರತೀಯ ಸಮಾಜವಾದದ ಭೀಷ್ಮ ಆಚಾರ್ಯ ನರೇಂದ್ರ ದೇವ

ಪ್ರೊ. ಹನುಮಂತ

ಭಾರತದ ಸಮಾಜವಾದಿ ಆಂದೋಲನದ ಭೀಷ್ಮ ಪಿತಾಮಹರಾದ ಆಚಾರ್ಯ ನರೇಂದ್ರ ದೇವ ಕೊನೆವರೆಗೂ ಪರಿಪಕ್ವ ಮಾರ್ಕ್ಸ್‌ವಾದಿ ಮತ್ತು ಜನತಾಂತ್ರಿಕ ಸಮಾಜವಾದಿಯಾಗಿದ್ದರು. ಅವರು ಉತ್ತರ ಪ್ರದೇಶದ ಸಿತಾಪುರದಲ್ಲಿ ೩೧-೧೦-೧೮೮೯ರಲ್ಲಿ ಜನಿಸಿದರು. ಅವರ ತಂದೆ ಬಲದೇವ ಪ್ರಸಾದ, ತಾಯಿ ಜವಾಹರದೇವಿ. ಅವರು ಅಲಹಾಬಾದಿನ ಮ್ಯೂಯಿರ್ ಸೆಂಟ್ರಲ್ ಕಾಲೇಜಿನಿಂದ ಸಂಸ್ಕೃತದಲ್ಲಿ ಸ್ನಾತಕೋತ್ತರ ಪದವಿಯನ್ನು ಮತ್ತು ಬನಾರಸ್‌ನ ಕ್ವೀನ್ಸ್ ಕಾಲೇಜಿನಿಂದ ಕಾನೂನು ಪದವಿಯನ್ನು ಪಡೆದು ಫೈಜಾಬಾದಿನಲ್ಲಿ ವಕೀಲರಾಗಿದ್ದರು.

ನರೇಂದ್ರದೇವ ಅವರಿಗೆ ಜೀವನದಲ್ಲಿ ಓದು-ಬರಹ ಮತ್ತು ರಾಜಕಾರಣ ಎಂಬ ಎರಡು ತೀವ್ರ ಆಸಕ್ತಿಗಳಿದ್ದವು. ಅವರು ಚಿಕ್ಕಂದಿನಲ್ಲಿಯೇ ರಾಮಾಯಣ, ಮಹಾಭಾರತ, ರಘು ಕೌಮುದಿ, ಅಮರಕೋಶ, ಭಗವದ್ಗೀತೆಗಳನ್ನು ಓದಿ ಕರಗತಮಾಡಿಕೊಂಡಿದ್ದರು. ಅವರು ಪಾಲಿ, ಸಂಸ್ಕೃತ, ಹಿಂದಿ, ಉರ್ದು, ಪರ್ಷಿಯನ್, ಫ್ರೆಂಚ್, ಜರ್ಮನ್, ಪ್ರಾಕೃತ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಪ್ರಭುತ್ವ ಪಡೆದಿದ್ದರು. ಅವರು ಪ್ರಾಚೀನ ಶೋಧನಶಾಸ್ತ್ರದಲ್ಲಿ ಸಂಶೋಧಕ ನಾಗಬೇಕೆಂದು ಪ್ರಾಚೀನ ಲಿಪಿಶಾಸ್ತ್ರ, ಶಾಸನ ಶಾಸ್ತ್ರ, ಮತ್ತು ನಾಣ್ಯಶಾಸ್ತ್ರಗಳಲ್ಲಿ ವಿಶೇಷ ಅಧ್ಯಯನ ನಡೆಸಿದ್ದರು. ಜೊತೆಗೆ ಅವರು ಕ್ರಾಂತಿಕಾರಿ ವಿಚಾರಗಳ ಹಲವಾರು ಪುಸ್ತಕಗಳನ್ನು ಅಧ್ಯಯನ ಮಾಡಿದ್ದರು.

ಮಾರ್ಕ್ಸ್‌ವಾದ ಮತ್ತು ಬೌದ್ಧ ತತ್ವಗಳಲ್ಲಿ ವಿಶೇಷ ಆಸಕ್ತಿ ಇದ್ದ ಅವರು ಇವೆರಡರ ತುಲನಾತ್ಮಕ ಅಧ್ಯಯನದ ಪ್ರಯತ್ನವನ್ನೂ ಮಾಡಿದ್ದರು.

ಆಚಾರ್ಯರ ರಾಜಕೀಯ ಗುರು ಬಾಲಗಂಗಾಧರ ತಿಲಕರು. ಅವರು ತಿಲಕರ ರಾಜಕೀಯ ತೀವ್ರಗಾಮಿತ್ವವನ್ನು ಮಾತ್ರ ಸ್ವೀಕರಿಸಿ, ಅವರ ಸಾಮಾಜಿಕ ಪ್ರತಿಗಾಮಿತನ ವನ್ನು ನಿರಾಕರಿಸಿದರು. ಗಾಂಧೀಜಿ ಅವರು ಬ್ರಿಟಿಷರ ವಿರುದ್ಧ ಅಸಹಕಾರ ಚಳುವಳಿಯನ್ನು ಪ್ರಾರಂಭಿಸಿದಾಗ ಆಚಾರ್ಯರು ವಕೀಲ ವೃತ್ತಿ ಬಿಟ್ಟು ಆಂದೋಲನದಲ್ಲಿ ಧುಮುಕಿದರು ಮತ್ತು ೧೯೩೨ರಲ್ಲಿ ವಾರಣಾಸಿಯಲ್ಲಿ ಜೈಲುವಾಸ ಅನುಭವಿಸಿದರು. ನಂತರ ಅವರು ಕಾಶಿ ವಿದ್ಯಾಪೀಠದಲ್ಲಿ ಅಧ್ಯಾಪಕರಾಗಿ ಸೇರಿ, ಅಲ್ಲಿಯೆ ಪ್ರಾಚಾರ್ಯರಾಗಿ ೧೯೩೬ರವರೆಗೆ ಸೇವೆಸಲ್ಲಿಸಿದರು.

ಅಸಹಕಾರ ಚಳುವಳಿಯ ಪರಿಣಾಮವಾಗಿ ೧೯೩೪ರಲ್ಲಿ ನಾಸಿಕ್ ಜೈಲಿನಲ್ಲಿದ್ದ ಜಯಪ್ರಕಾಶ್ ನಾರಾಯಣ, ಮಿನೂ ಮಸಾನಿ, ಅಶೋಕ ಮೆಹ್ತಾ ಮುಂತಾದವರು ಸ್ವಾತಂತ್ರ್ಯ ಹೋರಾಟ ಹಿಡಿದಿದ್ದ ಗಾಂಧಿಯವರ ಮಾರ್ಗದಿಂದ ಅತೃಪ್ತರಾಗಿ ಕಾಂಗ್ರಸ್‌ನೊಳಗೇ ಎಡಪಂಥೀಯ ಗುಂಪೊಂದನ್ನು ಕಟ್ಟಲು ನಿರ್ಧರಿಸಿದಾಗ ರೂಪುಗೊಂಡ ಕಾಂಗ್ರೆಸ್ ಸಮಾಜವಾದಿ ಪಕ್ಷದ ಮಾರ್ಗ ದರ್ಶಕರಾಗಿ ಒದಗಿದ ಇಬ್ಬರು ಹಿರಿಯರಲ್ಲಿ ಒಬ್ಬರು ಆಚಾರ್ಯ ನರೇಂದ್ರ ದೇವ ಅವರು. ಇನ್ನೊಬ್ಬರು ಡಾ. ಸಂಪೂರ್ಣಾನಂದರು. ಪಟ್ನಾದಲ್ಲಿ ೧೯೩೪ರ ಮೇ ೧೭ರಂದು ಕಾಂಗ್ರೆಸ್ ಸಮಾಜವಾದಿ ಪಕ್ಷದ ಸಂಸ್ಥಾಪನಾ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ನರೇಂದ್ರ ದೇವ ಅವರು ಅದಕ್ಕೊಂದು ತಾತ್ವಿಕ ನಿರ್ದೇಶನ ಒದಗಿಸಿದರು. ಮಾರ್ಕ್ಸ್‌ವಾದದ ವರ್ಗ ಹೋರಾಟವನ್ನೂ, ಗಾಂಧೀಜಿಯ ಅಹಿಂಸೆಯನ್ನು ಅದರಲ್ಲಿ ಸಂಯೋಜಿಸಿದ್ದರು.

೧೯೪೨ರಲ್ಲಿ 'ಭಾರತ ಬಿಟ್ಟು ತೊಲಗಿ' ಚಳುವಳಿಯು ಜೆಪಿ, ಲೋಹಿಯಾ, ಅಚ್ಯುತ ಪಟವರ್ಧನ್ ಮುಂತಾದ ಕಾಂಗ್ರೆಸ್ ಸಮಾಜವಾದಿಗಳ ನೇತೃತ್ವದಲ್ಲಿ ವಿಧ್ವಂಸಕ ಭೂಗತ ಹೋರಾಟವಾಗಿ ಮಾರ್ಪಾಡಾದಾಗ ಆಚಾರ್ಯರು ಈ ಚಳುವಳಿಯಲ್ಲಿ ಭಾಗವಹಿಸಿದ್ದಕ್ಕೆ ಅವರನ್ನು ಅಹಮದನಗರ ಕೋಟೆಯಲ್ಲಿ ಬಂಧಿಸಿ ಇಡಲಾಗಿತ್ತು. ಇದರ ಫಲವಾಗಿ ಅವರು ಅಲ್ಲಿ ಫ್ರೆಂಚ್ ಭಾಷೆಯಲ್ಲಿದ್ದ 'ಅಭಿಧರ್ಮಕೋಶ' ಎಂಬ ಬೌದ್ಧಗ್ರಂಥವನ್ನು ಹಿಂದಿ ಭಾಷೆಗೆ ಅನುವಾದಿಸಿದರು. ಅವರು ೧೯೪೨ರಿಂದ ೧೯೪೫ರ ವರೆಗೆ ಇಲ್ಲಿಯೆ ಜೈಲುವಾಸ ಅನುಭವಿಸಿದರು.

ರಾಜಕೀಯದಲ್ಲಿ ನೈತಿಕತೆ ಮತ್ತು ಶಿಸ್ತನ್ನು ಪರಿಪಾಲಿಸುವುದು ವಿರಳ, ಆದರೆ ಆಚಾರ್ಯರು ತಮ್ಮ ಜೀವನದ ಉದ್ದಕ್ಕೂ ಈ ಎರಡು ಮೌಲ್ಯಗಳನ್ನು ಪರಿಪಾಲಿಸಿದರು. ಅವರು ೧೯೩೬ರಲ್ಲಿ ಅಖಿಲಭಾರತ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದರು ಮತ್ತು ಆಗಿನ ಉತ್ತರಪ್ರದೇಶದ ಕಾಂಗ್ರೆಸ್ಸಿನ ರಾಜ್ಯಾಧ್ಯಕ್ಷರಾಗಿದ್ದರು. ಜೊತೆಗೆ ಅವರು ೧೯೩೭ರಿಂದ ೧೯೪೬ರವರೆಗೆ ಆಗಿನ ಉತ್ತರಪ್ರದೇಶದ ವಿಧಾನ

ಸಭೆಯ ಸದಸ್ಯರಾಗಿದ್ದರು. ವಿಧಾನಸಭೆಯು ಅವರನ್ನು ಸರ್ವಾನುಮತದಿಂದ ಮುಖ್ಯಮಂತ್ರಿ ಸ್ಥಾನಕ್ಕೆ ಆಯ್ಕೆ ಮಾಡಿತ್ತು. ಆದರೆ ಕಾಂಗ್ರೆಸ್ ಸಮಾಜವಾದಿ ಪಕ್ಷವು ಸಂವಿಧಾನದ ೧೯೩೫ರ ಕಾಯ್ದೆಯಡಿಯಲ್ಲಿ ಅಧಿಕಾರವನ್ನು ಸ್ವೀಕರಿಸಬಾರದೆಂದು ನಿರ್ಧರಿಸಿತ್ತು. ಅವರು ಪಕ್ಷದ ಶಿಸ್ತು ಮತ್ತು ನೈತಿಕತೆಗೆ ಬದ್ಧರಾಗಿ ಮುಖ್ಯಮಂತ್ರಿ ಸ್ಥಾನವನ್ನು ನಿರಾಕರಿಸಿದರು. ಹಾಗೆಯೇ ೧೯೪೮ರಲ್ಲಿ ಉತ್ತರಪ್ರದೇಶದ ವಿಧಾನಸಭೆಯ ಸದಸ್ಯರಾಗಿದ್ದ ಆಚಾರ್ಯರು ರಾಷ್ಟ್ರೀಯ ಕಾಂಗ್ರೆಸ್ಸಿನಿಂದ ಕಾಂಗ್ರೆಸ್ ಸಮಾಜವಾದಿ ಪಕ್ಷ ಹೊರಬಂದಾಗ ತನ್ನ ಪಕ್ಷದ ೧೨ ವಿಧಾನ ಸಭೆಯ ಸದಸ್ಯರೊಂದಿಗೆ ಚರ್ಚಿಸಿ ಎಲ್ಲರೂ ಸಾಮೂಹಿಕವಾಗಿ ಸದಸ್ಯತ್ವಕ್ಕೆ ರಾಜೀನಾಮೆ ನೀಡಿ ರಾಜಕಾರಣದಲ್ಲಿ ನೈತಿಕತೆಯನ್ನು ಎತ್ತಿಹಿಡಿದು ಆದರ್ಶ ಮೇಲ್ಪಂಕ್ತಿಯನ್ನು ಹಾಕಿದರು.

ಆಚಾರ್ಯರು ಜಾತಿವ್ಯವಸ್ಥೆಯನ್ನು ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ದೃಷ್ಟಿಕೋನದಿಂದ ವಿಶ್ಲೇಷಿಸಿ, ಜಾತಿಗಳನ್ನು ಆರ್ಥಿಕ ದೃಷ್ಟಿಕೋನದಿಂದ ಸಂಘಟಿಸ ಬೇಕೆಂದು ಹೇಳಿದರು. ಉದಾಹರಣೆಗೆ, ಹೆಚ್ಚು ಕೂಲಿಕೊಡಬೇಕೆಂಬ ಬೇಡಿಕೆಯಿಟ್ಟು ಬಡ ಒಕ್ಕಲಿಗ, ಲಿಂಗಾಯತ, ಕುರುಬ, ದಲಿತ, ಗಿರಿಜನರನ್ನು ಸಂಘಟಿಸುವುದು ಬಹು ಸುಲಭ. ಆದರೆ ಕೆಳಜಾತಿಗಳು ಮೇಲು ಜಾತಿಗಳ ವಿರುದ್ಧ ಹೋರಾಟ ಮಾಡಬೇಕೆಂದು ಹೇಳಿದಾಗ ಬಡ ಒಕ್ಕಲಿಗರು, ಲಿಂಗಾಯತರು, ಕುರುಬರು ಒಟ್ಟಿಗೆ ಸೇರುವುದಿಲ್ಲ. ಹೀಗೆ ಅವರು ಜಾತಿ ವ್ಯವಸ್ಥೆಯನ್ನು ಮಾರ್ಕ್ಸ್‌ವಾದಿ ದೃಷ್ಟಿ ಕೋನದಿಂದ ವಿಶ್ಲೇಷಿಸಿದ್ದರು.

ಮಾರ್ಕ್ಸ್‌ವಾದಿಯಾದ ಆಚಾರ್ಯರು ವಿಶ್ವದಲ್ಲಿ ಮೊಟ್ಟ ಮೊದಲಿಗೆ ರೈತಾಪಿವರ್ಗದ ಕ್ರಾಂತಿಕಾರಿತನವನ್ನು ಗುರುತಿಸಿದರು. ನಂತರ ಮಾವೊ, ದಿಮಿತ್ರೋವ್ ಅವರು ರೈತಾಪಿವರ್ಗದ ಕ್ರಾಂತಿಕಾರಿತನವನ್ನು ಬಳಸಿಕೊಂಡರು. ಆದ್ದರಿಂದ ಆಚಾರ್ಯರು ಭಾರತದಲ್ಲಿ ಕಳೆದ ಮೂವತ್ತರ ದಶಕದಲ್ಲಿ ಅಖಿಲಭಾರತ ಕಿಸಾನ್ ಸಭಾವನ್ನು ಕಟ್ಟಿ ಉತ್ತರಪ್ರದೇಶ ಮತ್ತು ಬಿಹಾರಗಳಲ್ಲಿ ರೈತಾಪಿವರ್ಗವನ್ನು ಸಂಘಟಿಸಿದ್ದರು. ಅವರು ರೈತರಿಗೆ ಶಿಕ್ಷಣ ನೀಡಿ, ಸಹಕಾರಿ ಕೃಷಿ ಪದ್ಧತಿಯನ್ನು ಜಾರಿಗೆ ತಂದು, ಕೃಷಿ ಉತ್ಪನ್ನ ಗಳನ್ನು ಸಮಾನವಾಗಿ ಹಂಚಿಕೊಳ್ಳಬೇಕೆಂಬುದು ಅವರ ಚಿಂತನೆಯಾಗಿತ್ತು.

ಆಚಾರ್ಯರು ಸಮಾಜವಾದಿ ಪಕ್ಷದಲ್ಲಿ ಹುದ್ದೆಗಳನ್ನು ಬಯಸಿದವರಲ್ಲ. ಹುದ್ದೆಗಳೇ ಅವರನ್ನು ಹುಡುಕಿಕೊಂಡು ಹೋದವು. ೧೯೫೦ರಲ್ಲಿ ಮದ್ರಾಸಿನಲ್ಲಿ ನಡೆದ ಸಮಾಜವಾದಿ ಪಕ್ಷದ ೮ನೇ ರಾಷ್ಟ್ರೀಯ ಸಮ್ಮೇಳನದಲ್ಲಿ ಆಚಾರ್ಯರನ್ನು ಪಕ್ಷದ ರಾಷ್ಟ್ರೀಯ ಅಧ್ಯಕ್ಷರನ್ನಾಗಿ ಆಯ್ಕೆಮಾಡಲಾಯಿತು. ಅವರು ೧೯೫೦ರಿಂದ ೧೯೫೨ರ ವರೆಗೆ ಸಮಾಜವಾದಿ ಪಕ್ಷದ ಅಧ್ಯಕ್ಷರಾಗಿದ್ದರು. ಈ ಮಧ್ಯೆ ಪ್ರಜಾಸಮಾಜವಾದಿ ಪಕ್ಷವು ಒಡೆದು ಪ್ರಜಾ ಸಮಾಜವಾದಿ ಪಕ್ಷ ಮತ್ತು ಸಮಾಜವಾದಿ ಪಕ್ಷ (ಲೋಹಿಯಾ

ಬಣ)ಗಳಾದವು. ಅವರು ೧೯೫೪ರಿಂದ ೧೯೫೬ರವರೆಗೆ ಪ್ರಜಾಸಮಾಜವಾದಿ ಪಕ್ಷದ ಅಧ್ಯಕ್ಷರಾಗಿದ್ದರು.

ಸಮಾಜವಾದಿ ಪಕ್ಷವು ತನ್ನ ಬಲದ ಮೇಲೆ ಹಿರಿಯರಾದ ಆಚಾರ್ಯರನ್ನು ಸಂಸತ್ತಿನ ರಾಜ್ಯಸಭೆಗೆ ಆಯ್ಕೆ ಮಾಡಿ ಕಳುಹಿಸಿತು. ಅವರು ೩-೪-೧೯೫೨ರಿಂದ ೨-೪-೧೯೫೪ರವರೆಗೆ ರಾಜ್ಯಸಭೆಯ ಸದಸ್ಯರಾಗಿದ್ದರು. ಮತ್ತೆ ಪ್ರಜಾಸಮಾಜವಾದಿ ಪಕ್ಷವು ರಾಜ್ಯಸಭೆಗೆ ಅವರನ್ನು ಆಯ್ಕೆ ಮಾಡಿ ಕಳುಹಿಸಿತು. ಅವರು ೩-೪-೧೯೫೪ರಿಂದ ತಾವು ಬದುಕಿರುವವರೆಗೆ ರಾಜ್ಯಸಭೆಯ ಸದಸ್ಯರಾಗಿದ್ದರು. ಅವರು ಏಕಕಾಲದಲ್ಲಿ ತಮ್ಮ ಅಸ್ತಮಾ ರೋಗದೊಂದಿಗೆ ಹಾಗೂ ಒಡಕಿನ ಸಮಾಜವಾದಿ ಪಕ್ಷಗಳ ಐಕ್ಯತೆಗೆ ಹೋರಾಡಿ ತಮಿಳ್ನಾಡಿನ ಈರೋಡ್‌ನಲ್ಲಿ ೧೮-೨-೧೯೫೬ರಲ್ಲಿ ಸಾವನ್ನಪ್ಪಿದರು.

◆◆

೨

ಸಂಪೂರ್ಣ ಕ್ರಾಂತಿಗೆ ಹಂಬಲಿಸಿದ ಜಯಪ್ರಕಾಶ್ ನಾರಾಯಣ

ಅಪೂರ್ವ ಡಿ'ಸಿಲ್ವ

ಎಪ್ಪತ್ತರ ದಶಕದ ಮೊದಲರ್ಧ ನಿರುದ್ಯೋಗ, ಬೆಲೆ ಏರಿಕೆ ಮತ್ತು ಭ್ರಷ್ಟಚಾರಗಳಿಂದ ರೋಸಿ ಹೋದ ಯುವಜನತೆ ವ್ಯವಸ್ಥೆಯ ವಿರುದ್ಧ ಬಂಡೆದ್ದಾಗ ಅದಕ್ಕೊಂದು ದಿಕ್ಕು ದೆಸೆ ನೀಡಿ ಆ ಬಂಡಾಯವನ್ನು ಒಂದು 'ಸಂಪೂರ್ಣ ಕ್ರಾಂತಿ' ಎಂಬ ರಚನಾತ್ಮಕ ಚಳುವಳಿಯಾಗಿ ರೂಪಿಸಿದವರು ಜೆಪಿ ಎಂದೇ ಪ್ರಸಿದ್ಧರಾಗಿರುವ ಜಯಪ್ರಕಾಶ್ ನಾರಾಯಣರು. ಆ ಚಳುವಳಿಯನ್ನು ಆಗ ದೇಶದ ಪ್ರಧಾನಿಯಾಗಿದ್ದ ಇಂದಿರಾಗಾಂಧಿಯವರ ನೇತೃತ್ವದ ಕಾಂಗ್ರೆಸ್ ಸರ್ಕಾರ ದಮನಮಾಡಲು ತುರ್ತು ಪರಿಸ್ಥಿತಿ ಘೋಷಿಸಿ ಸರ್ವಾಧಿಕಾರಿಯಾದಾಗ ಅದರ ವಿರುದ್ಧ ರಾಷ್ಟ್ರದ ಪ್ರಮುಖ ವಿರೋಧ ಪಕ್ಷಗಳನ್ನು ಒಗ್ಗೂಡಿಸಿ ಕೇಂದ್ರದಲ್ಲಿ ಮೊದಲ ಕಾಂಗ್ರೆಸ್ಸೇತರ ಸರ್ಕಾರ ಆಡಳಿತಕ್ಕೆ ಬರಲು ಕಾರಣರಾದವರು ಅವರು. ಈ ಮೊದಲು ಪಕ್ಷ ರಾಜಕಾರಣ ತೊರೆದು ಭೂದಾನ–ಸರ್ವೋದಯ ಚಳುವಳಿಯನ್ನು ಸೇರಿ ವಿನೋಬಾರ ಶಿಷ್ಯರಾಗಿದ್ದರಾದರೂ, ಸ್ವಾತಂತ್ರ್ಯ ಹೋರಾಟದ ವೀರ ಸೇನಾನಿಯೊಬ್ಬರಾಗಿದ್ದ ಅವರು ದೇಶದ ಹಿತದೃಷ್ಟಿಯಿಂದ ಮತ್ತೆ ಪಕ್ಷ ರಾಜಕಾರಣದತ್ತ ಧಾವಿಸಿ ಜನತಾ ಪಕ್ಷವೆಂಬ ಹೊಸ ರಾಜಕೀಯ ಪಕ್ಷವನ್ನು ರೂಪಿಸಿ ಅದಕ್ಕೆ ಗಾಂಧಿ ಸಮಾಜವಾದದ ದೀಕ್ಷೆ ನೀಡುವ ಮೂಲಕ ಸಮಾಜವಾದವನ್ನು ಕುರಿತ ತಮ್ಮ ಬದ್ಧತೆಯನ್ನು ಪುನರುಚ್ಚರಿಸಿದರು.

ಬಿಹಾರದ ಉತ್ತರ ಭಾಗದ ಪುಟ್ಟಗ್ರಾಮ ಸಿತಾಬ್ದಿಯಾರದಲ್ಲಿ ಹರ್ಷದಾಯಾಳ್ ಬಾಬು ಮತ್ತು ಪೂಲ್‌ರಾಣಿ ದಂಪತಿಗಳ ಮಗುವಾಗಿ ೧೯೦೨ ಅಕ್ಟೋಬರ್ ೧೧ರಂದು ಜನಿಸಿದ ಜಯಪ್ರಕಾಶ್ ನಾರಾಯಣರು ಪಟ್ನಾದಲ್ಲಿನ ತಮ್ಮ ಪ್ರೌಢ ಶಾಲಾ ಶಿಕ್ಷಣದ ಸಂದರ್ಭದಲ್ಲೇ ಗಾಂಧೀಜಿ ಮತ್ತಿತರ ರಾಷ್ಟ್ರೀಯ ನಾಯಕರ ಭಾಷಣಗಳನ್ನು ಕೇಳಿ ಸ್ವಾತಂತ್ರ್ಯ ಹೋರಾಟದ ಪ್ರಭಾವಕ್ಕೆ ಸಿಲುಕಿದರು. ತಮ್ಮ ಊರಿನ ಆಸುಪಾಸಿನಲ್ಲೇ ನಡೆದ ಚಂಪಾರಣ್ಯ ಸತ್ಯಾಗ್ರಹ ಅವರನ್ನು ಪೂರ್ತಿಯಾಗಿ ಯುವ ಸ್ವಾತಂತ್ರ್ಯಯೋಧರನ್ನಾಗಿ ಪರಿವರ್ತಿಸಿತು. ಜಲಿಯನ್ ವಾಲಾಬಾಗ್ ಹತ್ಯಾಕಾಂಡದ ಪರಿಣಾಮವಾಗಿ ಗಾಂಧೀಜಿ ಕರೆ ನೀಡಿದ್ದ ನಾಗರಿಕ ಅಸಹಕಾರ ಚಳುವಳಿ, ನಂತರದ ಸ್ವದೇಶಿ ಸತ್ಯಾಗ್ರಹಗಳು ಅವರ ಶಿಕ್ಷಣವನ್ನು ಅಸ್ತವ್ಯಸ್ತಗೊಳಿಸಿತಾದರೂ, ಇಂಟರ್ ಪರೀಕ್ಷೆಯ ನಂತರ ಅವರ ಹಿರಿಯರ ಸಲಹೆಯ ಮೇರೆಗೆ ಮುಂದಿನ ವಿದ್ಯಾಭ್ಯಾಸಕ್ಕೆ ದುಡಿಮೆಯ ಮೂಲಕವೇ ಶಿಕ್ಷಣ ಮುಂದುವರಿಸಲು ೧೯೨೨ ಅಕ್ಟೋಬರ್ ೮ರಂದು ಅಮೇರಿಕಾಕ್ಕೆ ಪ್ರಯಾಣ ಬೆಳೆಸುತ್ತಾರೆ. ಆ ಹೊತ್ತಿಗೆ ಅವರಿಗೆ ಚಂಪಾರಣ್ಯ ಸತ್ಯಾಗ್ರಹದ ಸಂಘಟಕರಲ್ಲೊಬ್ಬರಾಗಿದ್ದ ಬ್ರಿಜ್‌ಕಿಶೋರ್‌ಬಾಬು ಅವರ ಮಗಳು ಪ್ರಭಾವತಿ ದೇವಿಯವರೊಂದಿಗೆ ವಿವಾಹವೂ ಆಗಿರುತ್ತದೆ.

ಅಮೆರಿಕೆಗೆ ಹೋಗಿ ಅಲ್ಲಿ ದುಡಿದು ಓದುವ ಸಂದರ್ಭದಲ್ಲಿ ಪ್ರಖರ ಮಾರ್ಕ್ಸ್‌ವಾದಿಯಾಗಿ ಮಾರ್ಪಟ್ಟು ೧೯೨೯ರಲ್ಲಿ ಸ್ನಾತಕೋತ್ತರ ಪದವೀಧರರಾಗಿ ಭಾರತಕ್ಕೆ ವಾಪಸಾದ ಜಯಪ್ರಕಾಶರು ಕಮ್ಯೂನಿಸ್ಟ್ ಪಕ್ಷ ಸೇರದೆ ಗಾಂಧಿ ಕುರಿತ ಗೌರವದಿಂದಾಗಿ ಕಾಂಗ್ರೆಸ್‌ನೊಳಗೆ ಪ್ರಗತಿಪರ ರಾಜಕಾರಣದಲ್ಲಿ ತೊಡಗಿ ೧೯೩೪ರಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷವನ್ನು ಸ್ಥಾಪಿಸಿದ್ದು ಈಗ ಇತಿಹಾಸ. ಕಾಂಗ್ರೆಸ್ ಚಳುವಳಿಗಳಲ್ಲಿ ಭಾಗವಹಿಸುತ್ತಾ ಕಾಂಗ್ರೆಸ್ ಸಮಾಜವಾದಿ ಪಕ್ಷವನ್ನು ಕಟ್ಟತೊಡಗಿರುವಾಗಲೇ ಹಲವು ಬಾರಿ ದೀರ್ಘಕಾಲಿಕ ಮತ್ತು ಕ್ರೂರ ದೈಹಿಕ ಶಿಕ್ಷೆಗಳ ಸೆರೆಮನೆವಾಸಗಳಿಗೆ ತುತ್ತಾದ ಜೆಪಿ, ೧೯೪೨ರಲ್ಲಿ ಗಾಂಧೀಜಿಯ 'ಭಾರತಬಿಟ್ಟು ತೊಲಗಿ' ಚಳುವಳಿಯ 'ಮಾಡು ಇಲ್ಲವೆ ಮಡಿ' ಎಂಬ ಘೋಷಣೆಯ ಸುದ್ದಿ ಕೇಳಿ ಆಗ ತಾವು ಬಂಧಿತರಾಗಿದ್ದ ಹಜಾರಿಬಾಗ್ ಸೆರೆಮನೆಯ ಕೋಟೆಯಿಂದ ತಪ್ಪಿಸಿಕೊಂಡು ಬಂದು ತಮ್ಮ ಸಮಾಜ ವಾದಿ ಮಿತ್ರರ ಜೊತೆಗೂಡಿ ಬ್ರಿಟಿಷ್ ವಿರೋಧಿ ಭೂಗತ ಚಟುವಟಿಕೆಗಳಲ್ಲಿ ತೊಡಗಿದ ಮತ್ತು ಮತ್ತೆ ಸೆರೆಯಾಗಿ ಲಾಹೋರ್ ಕೋಟೆಯ ಸೆರೆಮನೆಯಲ್ಲಿ ಅನುಭವಿಸಬೇಕಾಗಿ ಬಂದ ಚಿತ್ರಹಿಂಸೆಯ ಕಥಾನಕಗಳು ಅವರನ್ನು ರಾಷ್ಟ್ರದ 'ಯುವ ಕಣ್ಮಣಿ'ಯನ್ನಾಗಿ ಮಾಡಿದವು.

ಎರಡನೇ ಮಹಾಯುದ್ಧ ಕೊನೆಗೊಂಡು ಬ್ರಿಟಿಷರು ಭಾರತಕ್ಕೆ ಸ್ವಾತಂತ್ರ್ಯ ನೀಡುವ ಪ್ರಕ್ರಿಯೆಗಳು ಆರಂಭವಾದಾಗ ಅದರ ಭಾಗವಾಗಿ ಸೆರೆಮನೆಯಿಂದ ಬಿಡುಗಡೆಯಾದ ಜೆಪಿ, ಸೆರೆಮನೆಯಲ್ಲಿ ತಮ್ಮ ಆದರ್ಶ ರಾಜ್ಯವಾಗಿದ್ದ ಸೋವಿಯತ್ ಯೂನಿಯನ್

ನೊಳಗಿನ ಸರ್ವಾಧಿಕಾರಿ ವಿದ್ಯಮಾನಗಳನ್ನು ಕುರಿತ ಪುಸ್ತಕಗಳನ್ನು ಓದಿ ಮತ್ತು ಆ ಹೊತ್ತಿಗೆ ಆ ದೇಶದ ಪ್ರವಾಸ ಮಾಡಿ ಬಂದಿದ್ದ ಮಿನೂ ಮಸಾನಿ ಯವರಂತಹ ತಮ್ಮ ಗೆಳೆಯರಿಂದ ಆ ಬಗ್ಗೆ ಕೇಳಿ ಮಾರ್ಕ್ಸ್‌ವಾದದ ಬಗ್ಗೆ ಪುನರಾಲೋಚನೆ ಆರಂಭಿಸಿದ್ದರು. ಗಾಂಧಿ ಮಾರ್ಗವನ್ನು ಕುರಿತ ಅವರ ಭಿನ್ನಮತ ಕ್ರಮೇಣ ಕರಗತೊಡಗಿತ್ತು. ಇತರ ಸಮಾಜವಾದಿಗಳಂತೆಯೇ ಭಾರತ ಸಂಪೂರ್ಣ ಸ್ವಾತಂತ್ರ್ಯಕ್ಕೆ ಇನ್ನೂ ಸಿದ್ಧವಾಗಿಲ್ಲ ಎಂದು ಭಾವಿಸಿದ್ದ ಜೆಪಿ ರಾಷ್ಟ್ರ ವಿಭಜನೆಯ ರಾಜಕಾರಣ ತಮ್ಮ ಈ ಭಾವನೆಯ ಪ್ರತೀಕವೆಂದು ನಂಬಿದ್ದರು. ಹಾಗಾಗಿಯೇ ಅವರು ಗಾಂಧೀಜಿಯ ಆಗ್ರಹದ ಹೊರತಾಗಿಯೂ ಕಾಂಗ್ರೆಸ್ ಸಮಾಜವಾದಿ ಪಕ್ಷವನ್ನು ಮಧ್ಯಂತರ ಸರ್ಕಾರ ಮತ್ತು ಸಂವಿಧಾನ ಸಭೆಯ ರಚನೆಯಲ್ಲಿ ಪಾಲ್ಗೊಳ್ಳದಂತೆ ತಡೆದರು. ಆದರೆ ಈ ಮಧ್ಯೆ ಗಾಂಧಿ ಹತ್ಯೆಯಾದಾಗ ಅವರು ಅನಾಥ ಭಾವನೆಗೆ ಒಳಗಾದರು. ನಂತರದಲ್ಲೇ ಕಾಂಗ್ರೆಸ್ ಸಮಾಜವಾದಿಗಳು ಕಾಂಗ್ರೆಸ್‌ನಿಂದ ಹೊರ ದೂಡಲ್ಪಡುವ ಸಂದರ್ಭ ಬಂದಾಗ ಧೃತಿಗೆಡದ ಜೆಪಿ ಸಮಾಜವಾದಿ ಪಕ್ಷವನ್ನು ಸ್ವತಂತ್ರವಾಗಿ ಕಟ್ಟುವ ಕೆಲಸದಲ್ಲಿ ತೊಡಗಿದರು.

೧೯೫೨ರ ಮೊದಲ ಮಹಾಚುನಾವಣೆಯಲ್ಲಿ ಪಕ್ಷದ ದೊಡ್ಡ ಸೋಲು ಅದರ ನೇತೃತ್ವ ವಹಿಸಿದ್ದ ಜೆಪಿ ಮತ್ತು ಅವರ ಗೆಳೆಯರನ್ನು ಧೃತಿಗೆಡಿಸಿತೆಂದೇ ಹೇಳಬೇಕು. ನಂತರ ಪಕ್ಷದಲ್ಲಿ ಉಂಟಾದ ಹೊಸ ಬೆಳವಣಿಗೆಗಳು ಮತ್ತು ಹೆಚ್ಚಿದ ತಾತ್ವಿಕ ಮತ್ತು ವೈಯಕ್ತಿಕ ಭಿನ್ನಾಭಿಪ್ರಾಯಗಳ ಮಧ್ಯೆ ಜೆಪಿ ಮಾರ್ಕ್ಸ್‌ವಾದಕ್ಕೆ ಆಧಾರವಾಗಿರುವ 'ದ್ವಂದ್ವಾತ್ಮಕ ಭೌತವಾದದಲ್ಲಿ ಮನುಷ್ಯ ಒಳ್ಳೆಯವನಾಗಲು ಯಾವ ಪ್ರೇರಣೆಯೂ ಇಲ್ಲ' ಎಂದು ಹೇಳಿ ಗಾಂಧಿವಾದದ ದೀಕ್ಷೆ ಪಡೆದರು. ಈ ಮಧ್ಯೆ ಅವರ ಪ್ರಿಯ ಮಿತ್ರ ಡಾ. ರಾಮಮನೋಹರ ಲೋಹಿಯಾ ಪಕ್ಷ ಬಿಟ್ಟು ತಮ್ಮದೇ ಸಮಾಜವಾದಿ ಪಕ್ಷ ಸ್ಥಾಪಿಸಿಕೊಂಡರು. ಇದರ ಮುಂದಿನ ಪರಿಣಾಮವಾಗಿ ಜೆಪಿ ನಿಧಾನವಾಗಿ ಪಕ್ಷ ರಾಜಕಾರಣವನ್ನೇ ತೊರೆದು ೧೯೫೪ರ ಹೊತ್ತಿಗೆ ವಿನೋಬಾ ಭಾವೆಯವರ ಭೂದಾನ ಚಳುವಳಿಗೆ ಸೇರಿದರು.

ಇಲ್ಲಿಂದ ಜೆಪಿಯವರ ಬದುಕಿನಲ್ಲಿ ಹೊಸ ಘಟ್ಟವೇ ಆರಂಭವಾಯಿತೆಂದು ಹೇಳಬೇಕು. ವಿನೋಬಾರೊಂದಿಗೆ ಅವರು ರಾಷ್ಟ್ರಾದ್ಯಂತ ಪ್ರವಾಸ ಮಾಡಿ ಭೂ ಒಡೆಯರಿಂದ ಸಾವಿರಾರು ಎಕರೆ ಭೂಮಿಯನ್ನು ದಾನವಾಗಿ ಪಡೆದು ಭೂರಹಿತರಿಗೆ ಹಂಚುವ ಕಾರ್ಯಕ್ರಮಗಳಲ್ಲಿ ತೊಡಗಿಕೊಂಡರು. ವಿನೋಬಾರ 'ಸರ್ವೋದಯ' ಚಳುವಳಿಯ ನೇತಾರರಾಗಿ ಬಿಹಾರದ ಸಖೋದೇವ್ರಾ ಎಂಬಲ್ಲಿ ಆಶ್ರಮವೊಂದನ್ನು ಸ್ಥಾಪಿಸಿ ಗಾಂಧಿಯವರ 'ಗ್ರಾಮ ಸ್ವರಾಜ್ಯ'ದ ಕನಸನ್ನು ನನಸು ಮಾಡುವಂತಹ ಗ್ರಾಮ ಕೈಗಾರಿಕೆ, ಪಂಚಾಯತ್‌ರಾಜ್ ಸ್ಥಾಪನೆಯ ಪ್ರಯತ್ನ-ಪ್ರಯೋಗಗಳಲ್ಲಿ ತೊಡಗಿಕೊಂಡರು. ಬಿಹಾರದಲ್ಲಿ ಭೀಕರ ಕ್ಷಾಮ ತಲೆದೋರಿದಾಗ ಅತ್ಯಂತ ವ್ಯವಸ್ಥಿತ

ಪರಿಹಾರ ಕಾರ್ಯಕ್ರಮಗಳನ್ನು ಸಂಘಟಿಸಿ ಬಿಹಾರದ ಜನರ ಮನಗೆದ್ದರು. ಹಾಗೇ ಅಂತಾರಾಷ್ಟ್ರೀಯ ವಲಯದಲ್ಲೂ ಅನೇಕ ವಿವಾದ-ಬಿಕ್ಕಟ್ಟುಗಳ ಪರಿಹಾರ ಪ್ರಯತ್ನಗಳಲ್ಲಿ ಪಾತ್ರ ವಹಿಸಿ, ಅದಕ್ಕಾಗಿ ಶಾಂತಿಸೇನೆಯೊಂದನ್ನೂ ಸ್ಥಾಪಿಸಿದ ಹೆಗ್ಗಳಿಕೆ ಜೆಪಿಯದ್ದು. ಕಾಶ್ಮೀರ ಸಮಸ್ಯೆ, ನಾಗಾಬಂಡುಕೋರರ ಸಮಸ್ಯೆ, ಟಿಬೆಟ್ ಸಮಸ್ಯೆಗಳನ್ನು ಒಂದು ತಹಬಂದಿಗೆ ತರುವಲ್ಲಿ ಕೇಂದ್ರ ಸರ್ಕಾರದೊಂದಿಗೆ ಸಹಕರಿಸಿದ ಜೆಪಿಯವರ ಬದುಕಿನಲ್ಲಿ ೧೯೭೨ರಲ್ಲಿ ಚಂಬಲ್ ಕಣಿವೆಯ ಡಕಾಯಿತರನ್ನು ತಮಗೆ ಶರಣಾಗತರಾಗುವಂತೆ ಮನಃಪರಿವರ್ತಿಸಿದ್ದು ಗಾಂಧಿ ಮಾರ್ಗದಲ್ಲಿನ ಅವರ ಮಹತ್ಸಾಧನೆ ಎನಿಸಿ, ಅವರು 'ಲೋಕನಾಯಕ'ರೆಂದೇ ಜನಮನ್ನಣೆ ಗಳಿಸಿದರು. ಈ ಹೊತ್ತಿಗೆ ತಮ್ಮ ಪತ್ನಿಯನ್ನು ಕಳೆದುಕೊಂಡಿದ್ದ ಜೆಪಿ ಮುಂದಿನ ತಮ್ಮ ಜೀವನವನ್ನು ಸಂಪೂರ್ಣವಾಗಿ ಸಾರ್ವಜನಿಕ ಉದ್ದೇಶಗಳಿಗೇ ಮುಡಿಪಾಗಿಟ್ಟರು.

ಎಪ್ಪತ್ತರ ದಶಕದ ಆರಂಭದಲ್ಲಿ ರಾಷ್ಟ್ರಾದ್ಯಂತ ಕಂಡುಬಂದ ಸಾರ್ವಜನಿಕ ಅಶಾಂತಿ ಗುಜರಾತ್ ಮತ್ತು ಬಿಹಾರಗಳಲ್ಲಿನ ವಿದ್ಯಾರ್ಥಿ ಚಳುವಳಿಗಳ ಮೂಲಕ ಸ್ಫೋಟಗೊಳ್ಳತೊಡಗಿದಾಗ ಜೆಪಿ, ವಿದ್ಯಾರ್ಥಿಗಳು ಮತ್ತು ಕೇಂದ್ರ ಸರ್ಕಾರದ ನಡುವೆ ಸಂಧಾನಗಳ ಪ್ರಯತ್ನ ಮಾಡಿದರು. ಆದರೆ ಪ್ರಧಾನಿ ಇಂದಿರಾ ಗಾಂಧಿ ತಮ್ಮ ಸರ್ಕಾರದ ದಮನ ನೀತಿ ಮತ್ತು ಭ್ರಷ್ಟಾಚಾರ ಪ್ರಕರಣಗಳನ್ನು ನಿಯಂತ್ರಿಸದಾದಾಗ ಜೆಪಿಯವರೇ ವಿದ್ಯಾರ್ಥಿ ಚಳುವಳಿಯ ಮಾರ್ಗದರ್ಶಕರಾಗಿ ರಾಷ್ಟ್ರಾದ್ಯಂತ ಪ್ರವಾಸ ಕೈಗೊಂಡು ಅದನ್ನೊಂದು ಸಾರ್ವತ್ರಿಕ ಚಳುವಳಿಯನ್ನಾಗಿ ರೂಪಿಸಿದರು. ಜನತೆಗೆ 'ಸಂಪೂರ್ಣ ಕ್ರಾಂತಿಯ ಕರೆ ನೀಡಿದರು. ಸಾರ್ವಜನಿಕ ಜೀವನದ ಎಲ್ಲ ಕ್ಷೇತ್ರಗಳಲ್ಲಿ ಮೌಲ್ಯಪತನವಾಗಿದ್ದು ಆ ಎಲ್ಲ ಕ್ಷೇತ್ರಗಳಲ್ಲೂ-ರಾಜಕಾರಣ, ಧರ್ಮ, ಸಮಾಜ, ಶಿಕ್ಷಣ, ಸಂಸ್ಕೃತಿ ಇತ್ಯಾದಿ-ಗಾಂಧಿಯವರ ಸರ್ವೋದಯ ಪರಿಕಲ್ಪನೆಯನುಸಾರ ಮೂಲಭೂತ ಬದಲಾವಣೆ ಅಗತ್ಯ ಎಂದು ಅವರು ಪ್ರತಿಪಾದಿಸಿದರು.

ತಮ್ಮ ಬದುಕಿನಲ್ಲಿ ಎರಡನೇ ಸಾರ್ವಜನಿಕ ಹೋರಾಟದ ನೇತೃತ್ವ ವಹಿಸಬೇಕಾಗಿ ಬಂದಿದ್ದ ಸ್ವಾತಂತ್ರ್ಯ ಸೇನಾನಿ ಜೆಪಿ, ಈ ಹೋರಾಟದ ಭಾಗವಾಗಿ ಸ್ವತಂತ್ರ ಭಾರತದ ಸರ್ಕಾರದಿಂದಲೇ ೧೯೭೫ರಲ್ಲಿ ಬಂಧಿತರಾಗಿ ಸೆರೆಮನೆ ಸೇರಬೇಕಾಯಿತು. ಇಂದಿರಾ ಗಾಂಧಿಯವರು ಚುನಾವಣಾ ಭ್ರಷ್ಟಾಚಾರದ ಪ್ರಕರಣವೊಂದರಲ್ಲಿ ಅಪರಾಧಿ ಎಂದು ನ್ಯಾಯಾಲಯವೊಂದು ತೀರ್ಪು ನೀಡಿದಾಗ ಜೆಪಿ ಪ್ರಧಾನಿಯ ರಾಜೀನಾಮೆಗೆ ಆಗ್ರಹಿಸಿದ್ದೇ ನೆಪವಾಗಿ ಕೇಂದ್ರ ಸರ್ಕಾರ ತುರ್ತು ಪರಿಸ್ಥಿತಿ ಘೋಷಿಸಿ ಪ್ರಜೆಗಳ ಎಲ್ಲ ಮೂಲಭೂತ ಸ್ವಾತಂತ್ರ್ಯಗಳನ್ನೂ ಅಮಾನತ್ತಿನಲ್ಲಿಟ್ಟು ಸರ್ವಾಧಿಕಾರಿ ಪ್ರಭುತ್ವದ ಸ್ಥಾಪನೆಯಾಯಿತು. ಸೆರೆಮನೆಯಲ್ಲಿ ಜೆಪಿಯವರ ಆರೋಗ್ಯ ಹದಗೆಡಲಾರಂಭಿಸಿದಾಗ ಸರ್ಕಾರ ಅವರನ್ನು ಬಿಡುಗಡೆ ಮಾಡಿತು. ೧೯೭೭ರ ಹೊತ್ತಿಗೆ ಅಂತಾರಾಷ್ಟ್ರೀಯ ಒತ್ತಡಕ್ಕೆ ಸಿಕ್ಕಿ ಇಂದಿರಾ ಗಾಂಧಿಯವರು ತುರ್ತು ಪರಿಸ್ಥಿತಿಯ ಆಜ್ಞೆಯನ್ನು ಭಾಗಶಃ

ವಾಪಸ್ ಪಡೆದು ಸಾರ್ವತ್ರಿಕ ಚುನಾವಣೆಗಳನ್ನು ಘೋಷಿಸಿದಾಗ ಜೆಪಿ ರಾಷ್ಟ್ರದ ಪ್ರಮುಖ ವಿರೋಧ ಪಕ್ಷಗಳೆನಿಸಿದ್ದ ಭಾರತೀಯ ಲೋಕದಳ, ಭಾರತೀಯ ಜನಸಂಘ, ಸಮಾಜವಾದಿ ಪಕ್ಷ ಮತ್ತು ಸಂಸ್ಥಾ ಕಾಂಗ್ರೆಸ್‌ಗಳನ್ನು ಒಟ್ಟುಗೂಡಿಸಿ ಗಾಂಧಿ ಸಮಾಜವಾದದ ರಾಜಕೀಯ ಪ್ರಣಾಳಿಕೆಯೊಂದಿಗೆ ಜನತಾ ಪಕ್ಷವೆಂಬ ಹೊಸ ಪಕ್ಷವನ್ನು ಸ್ಥಾಪಿಸಿ ತಮ್ಮ ಹದಗೆಟ್ಟ ಆರೋಗ್ಯದ ನಡುವೆಯೂ ಚುನಾವಣಾ ಪ್ರಚಾರದ ನೇತೃತ್ವವನ್ನು ತಾವೇ ವಹಿಸಿಕೊಂಡು ರಾಷ್ಟ್ರಾದ್ಯಂತ ಬಿರುಗಾಳಿ ಪ್ರವಾಸ ಮಾಡಿದರು.

ಜನತಾ ಪಕ್ಷ ಅಭೂತಪೂರ್ವ ಜಯಗಳಿಸಿತು. ಆದರೆ ಈ ಜಯ ಹುಟ್ಟಿಸಿದ್ದ ಆಸೆ ಬಹಳ ಕಾಲ ಉಳಿಯಲಿಲ್ಲ. ಜನತಾ ಪಕ್ಷ ಸರ್ಕಾರದಲ್ಲಿ ಅಧಿಕಾರ ಕಿತ್ತಾಟಗಳು ಶುರುವಾಗಿ ಅದು ಅನಾರೋಗ್ಯಪೀಡಿತ ಜೆಪಿಯವರ ಹತೋಟಿಯನ್ನು ಮೀರಿ ಬೆಳೆದು ೧೯೭೯ರ ಅಕ್ಟೋಬರ್ ೮ರಂದು ಅವರು ಕೊನೆಯುಸಿರು ಎಳೆಯುವ ವೇಳೆಗೆ ಆ ಸರ್ಕಾರವೂ ಕೊನೆಯುಸಿರೆಳೆಯಲು ಸಿದ್ಧವಾಗಿತ್ತು.

ಜೆಪಿ ನೇತೃತ್ವ ವಹಿಸಿದ್ದ ಎರಡು ಕ್ರಾಂತಿಗಳು ಪರಿಕಲ್ಪನೆಯಲ್ಲಿ ಸಂಪೂರ್ಣವಾಗಿದ್ದರೂ ಅನುಷ್ಠಾನದಲ್ಲಿ ಅಪೂರ್ಣ ಕ್ರಾಂತಿಗಳೇ ಆದುದು ಇತಿಹಾಸದ ಕ್ರೂರ ಸತ್ಯ. ಏಕೆಂದು ಚಿಂತಿಸುವುದು ಇಂದಿನ ತಲೆಮಾರಿನ ಸಮಾಜವಾದಿಗಳ ಜವಾಬ್ದಾರಿಯಾಗಿದೆ.

(ಆಧಾರ: ಡಿ.ಎಸ್. ನಾಗಭೂಷಣ ಅವರ **'ಜೆಪಿ ಕೈಪಿಡಿ')**

◆◆

೩

ಉಜ್ವಲ ಪ್ರತಿಭೆಯ ದಣಿವರಿಯದ ಹೋರಾಟಗಾರ ಲೋಹಿಯಾ

ಡಿ.ಎಸ್.ನಾಗಭೂಷಣ

ಭಾರತೀಯ ಸಮಾಜವಾದಿ ಇತಿಹಾಸದ ಉಜ್ವಲ ತಾರೆಗಳಲ್ಲೊಬ್ಬರಾದ ರಾಮಮನೋಹರ ಲೋಹಿಯಾ ಹುಟ್ಟಿದ್ದು ಈಗಿನ ಉತ್ತರ ಪ್ರದೇಶದ ಅಯೋಧ್ಯೆ ಬಳಿಯ ಅಕ್ಬರ್‌ಪುರ ಎಂಬಲ್ಲಿ. ೧೯೧೦ರ ಮಾರ್ಚ್ ೨೩ರಂದು. ಅವರದ್ದು ಲೋಹಿಯಾ ಎಂಬ ಕುಟುಂಬದ ಹೆಸರಿಗೆ ಕಾರಣವಾದ ಕಬ್ಬಿಣದ ವ್ಯಾಪಾರ ಮಾಡುತ್ತಿದ್ದ ಮಾರ್ವಾಡಿ ಕುಟುಂಬವಾಗಿದ್ದರೂ, ರಾಮಮನೋಹರ ಹುಟ್ಟುವ ವೇಳೆಗೆ ಅದು ವ್ಯಾಪಾರವನ್ನು ತ್ಯಜಿಸಿತ್ತು. ಅವರ ತಂದೆ ಹೀರಾಲಾಲ್ ಗಾಂಧಿ ವಿಚಾರಗಳಿಂದ ಆಕರ್ಷಿತರಾಗಿ ಹಿಂದಿ ಮತ್ತು ಖಾದಿ ಪ್ರಚಾರಾಂದೋಲನದ ಕಾರ್ಯಕರ್ತರಾಗಿ ದೇಶಾದ್ಯಂತ ಪ್ರವಾಸ ಮಾಡುತ್ತಿದ್ದರು. ಹೀಗಾಗಿ, ಚಿಕ್ಕ ಮಗುವಾಗಿದ್ದಾಗಲೇ ತಾಯಿಯನ್ನು ಕಳೆದುಕೊಂಡಿದ್ದ ರಾಮಮನೋಹರ ಬೆಳೆದದ್ದು ನೆರೆಹೊರೆಯ ಅನ್ಯ ಕುಲಗಳ ತಾಯಂದಿರ ಪೋಷಣೆಯಲ್ಲೇ.

ಹೀರಾಲಾಲ್ ಹೆಚ್ಚು ಕಾಲ ಮಗನನ್ನು ಅನ್ಯರ ಸುಪರ್ದಿಯಲ್ಲಿ ಬಿಡಲಾಗದೆ, ಶಾಲಾ ಶಿಕ್ಷಣಕ್ಕಾಗಿ ಲೋಹಿಯಾರನ್ನು ತಾವಿದ್ದ ಮುಂಬೈಗೆ ಕರೆದೊಯ್ದು ಶಾಲೆಗೆ ಸೇರಿಸಿದರು. ಅಲ್ಲಿಯೇ ಮೊದಲ ಬಾರಿಗೆ ಲೋಹಿಯಾ ತಂದೆಯೊಂದಿಗೆ ಗಾಂಧಿಯನ್ನು ಕಂಡದ್ದು; ಆಶೀರ್ವಾದ ಪಡೆದದ್ದು. ನಂತರ ಹೀರಾಲಾಲ್ ತಮ್ಮ ಕೆಲಸಕ್ಕಾಗಿ ಕಲ್ಕತ್ತಾಗೆ ಹೋಗಿ ನೆಲೆಸಬೇಕಾಗಿ ಬಂದದ್ದರಿಂದ ಅವರ ಕಾಲೇಜು ವಿದ್ಯಾಭ್ಯಾಸ

ನಡೆದದ್ದು ಆಗ ಧಾರ್ಮಿಕ-ಸಾಂಸ್ಕೃತಿಕ-ರಾಜಕೀಯ ನವೋದಯದ ಕೇಂದ್ರವಾಗಿದ್ದ ಆ ನಗರದಲ್ಲೇ. ಹಾಗೆ ನೋಡಿದರೆ ಅವರ ವ್ಯಕ್ತಿತ್ವದ ಸತ್ವ ರೂಪುಗೊಂಡದ್ದೂ ಅಲ್ಲಿಯೇ ಎಂದೂ ಹೇಳಬಹುದು. ೧೯೨೮ರಲ್ಲಿ ಅಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದ ಸಿದ್ಧತೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ ರಾಮಮನೋಹರರು ತಮ್ಮ ಸಂಘಟನಾ ಸಾಮರ್ಥ್ಯ ಮತ್ತು ಬುದ್ಧಿಮತ್ತೆಯಿಂದ ನೆಹ್ರೂ ಮತ್ತು ಸುಭಾಷರ ಗಮನ ಸೆಳೆದರು.

೧೯೨೯ರಲ್ಲಿ ಉನ್ನತ ವಿದ್ಯಾಭ್ಯಾಸಕ್ಕಾಗಿ ಮಾರ್ವಾಡಿ ಪೋಷಕರ ಸಂಘದಿಂದ ಲೋಹಿಯಾರನ್ನು ಲಂಡನ್‌ಗೆ ಕಳಿಸಲಾಯಿತಾದರೂ, ಅಲ್ಲಿ ಗುಲಾಮಿ ದೇಶದ ಪ್ರಜೆಯಾಗಿ ಇರಲು ನಿರಾಕರಿಸಿ ಅಲ್ಲಿಂದ ಜರ್ಮನಿಗೆ ಹೋದರು. ಬರ್ಲಿನ್ ವಿಶ್ವವಿದ್ಯಾಲಯದಲ್ಲಿ 'ಉಪ್ಪು ಮತ್ತು ಸತ್ಯಾಗ್ರಹ' ಎಂಬ ವಿಷಯವಾಗಿ ಖ್ಯಾತ ಅರ್ಥಶಾಸ್ತ್ರಜ್ಞ ಪ್ರೊ. ಜೆಂಬಾರ್ಟ್ ಅವರ ಮಾರ್ಗದರ್ಶನದಲ್ಲಿ ಡಾಕ್ಟೋರೇಟ್‌ಗಾಗಿ ವಿಶೇಷ ಅಧ್ಯಯನ ಕೈಗೊಂಡರು. ಆಗ ಜರ್ಮನಿಯ ರಾಜಕೀಯ ದಿಗಂತದಲ್ಲಿ ಕ್ರಿಯಾಶೀಲವಾಗಿದ್ದ ಬಂಡವಾಳವಾದ, ಸಮತಾವಾದ, ಫ್ಯಾಸಿಸಂ ಇತ್ಯಾದಿ ವಿವಿಧ ರಾಜಕೀಯ ಅಲೆಗಳಬ್ಬರದ ನಡುವೆ ಯೂರೋಪಿನ ಹೊಸ ರಾಜಕಾರಣ ಮೂಡುತ್ತಿದ್ದ ಬಗೆಯನ್ನು ಗಮನಿಸುತ್ತಿದ್ದ ಲೋಹಿಯಾರ ಆಸಕ್ತಿ ತಮ್ಮ ಅಧ್ಯಾಪಕರ ಪ್ರಭಾವದಲ್ಲಿ ಸಮಾಜವಾದದ ಕಡೆ ಹೊರಳಲಾರಂಭಿಸಿತ್ತು.

ಎರಡನೇ ಮಹಾಯುದ್ಧದ ಕಾರ್ಮೋಡಗಳು ಯೂರೋಪಿನ ನೆತ್ತಿಯ ಮೇಲೆ ಕವಿಯತೊಡಗಿದಾಗ ೧೯೩೨ರಲ್ಲಿ ಜರ್ಮನಿಯನ್ನು ತೊರೆದು ಭಾರತಕ್ಕೆ ವಾಪಸಾದ ಲೋಹಿಯಾ ಯಾವ ಉದ್ಯೋಗವನ್ನೂ ಅರಸದೆ ಕಲ್ಕತ್ತಾದಲ್ಲಿ ಸಮಾನ ಮನಸ್ಕ ಗೆಳೆಯರ ಗುಂಪೊಂದನ್ನು ಸಂಘಟಿಸಿ ಕಾಂಗ್ರೆಸ್ಸಿನಲ್ಲಿ ಸಮಾಜವಾದಿ ಆದರ್ಶಗಳನ್ನು ಬಿತ್ತುವ ಬಗ್ಗೆ ಚರ್ಚೆಗಳನ್ನು ನಡೆಸುತ್ತಾ 'ಕಾಂಗ್ರೆಸ್ ಸೋಶಲಿಸ್ಟ್' ಎಂಬ ಪತ್ರಿಕೆಯನ್ನೂ ಆರಂಭಿಸಿದರು. ೧೯೩೪ರ ಹೊತ್ತಿಗೆ ಜಯಪ್ರಕಾಶ ನಾರಾಯಣ ಮತ್ತವರ ಗೆಳೆಯರು ಮುಂಬೈನಲ್ಲಿ ಕಾಂಗ್ರೆಸ್ ಸೋಶಲಿಸ್ಟ್ ಪಕ್ಷ ಸ್ಥಾಪಿಸುವ ಚರ್ಚೆ ಆರಂಭಿಸಿದಾಗ ಲೋಹಿಯಾ ಕೂಡ ಅದರಲ್ಲಿ ಸೇರಿ ಪಕ್ಷದ ಸ್ಥಾಪಕ ಸದಸ್ಯರಲ್ಲೊಬ್ಬರಾದರು. ಅವರ ಸಂಪಾದಕತ್ವದ 'ಕಾಂಗ್ರೆಸ್ ಸೋಶಲಿಸ್ಟ್' ಹೊಸ ಪಕ್ಷದ ಮುಖವಾಣಿಯಾಯಿತು. ಈ ಪತ್ರಿಕೆಯಲ್ಲಿನ ವಿವಾದಾತ್ಮಕ ಮತ್ತು ಚುರುಕಾದ ಲೇಖನಗಳ ಮೂಲಕ ಲೋಹಿಯಾ ಗಾಂಧಿಯವರ ಗಮನ ಸೆಳೆದು ಮುಂದೆ ಅವರ ವಿಶಿಷ್ಟ ಶಿಷ್ಯರಾಗಿ ಬೆಳೆದು, ಅದು ಸಮಾಜವಾದಕ್ಕೆ ಒಂದು ಹೊಸ ಆಯಾಮವೇ ಒದಗಲು ಕಾರಣವಾಯಿತು.

ನೆಹ್ರೂ ಕಾಂಗ್ರೆಸ್ ಅಧ್ಯಕ್ಷರಾಗಿದ್ದಾಗ ಅವರ ಆಪ್ತ ಗೆಳೆಯರಾಗಿದ್ದ ಲೋಹಿಯಾ ಕಾಂಗ್ರೆಸ್ಸಿನ ವಿದೇಶ ವ್ಯವಹಾರ ವಿಭಾಗದ ಸೂತ್ರಧಾರರಾಗಿ ಇಂದಿಗೂ ಭಾರತದ ವಿದೇಶಾಂಗ ನೀತಿ ಸಂಹಿತೆಯಾಗಿ ಉಳಿದಿರುವ ಅನೇಕ ಪರಿಕಲ್ಪನೆಗಳನ್ನು ರೂಪಿಸಿದರು ಎಂದು ಹೇಳಲಾಗುತ್ತಿದೆ. ಅಲ್ಲದೆ, ಯುದ್ಧಕಾಲದ ಆ ಸಂದರ್ಭದಲ್ಲಿ ಗಾಂಧಿ

ಜೊತೆಗೆ ನಡೆಸಿದ ಅನೇಕ ಸಂವಾದಗಳು, ನಿಶ್ಶಸ್ತ್ರೀಕರಣ, ಅಹಿಂಸೆ ಮತ್ತು ನಾಗರಿಕ ಅಸಹಕಾರ ಕುರಿತ ಹೊಸ ಚರ್ಚೆಗಳಿಗೆ ಕಾರಣವಾದವು. ೧೯೪೨ರಲ್ಲಿ ಗಾಂಧಿ ಬ್ರಿಟಿಷರಿಗೆ ನೀಡಿದ 'ಭಾರತ ಬಿಟ್ಟು ತೊಲಗಿ' ಕಡೆಯ ಚಳುವಳಿಯ ಸಂದರ್ಭದಲ್ಲಿ ಭೂಗತರಾಗಿ ತಮ್ಮ ಸಹ ಸಮಾಜವಾದಿಗಳೊಂದಿಗೆ ಲೋಹಿಯಾ ಬ್ರಿಟಿಷ್ ಪ್ರಭುತ್ವದ ವಿರುದ್ಧ ನಡೆಸಿದ ಬುಡಮೇಲು ಕೃತ್ಯಗಳು ಮತ್ತು ಅದರ ಪರಿಣಾಮವಾಗಿ ದಸ್ತಗಿರಿಯಾಗಿ ಲಾಹೋರ್ ಕೋಟೆಯ ಸೆರೆಮನೆಯಲ್ಲಿ ಅನುಭವಿಸಬೇಕಾಗಿ ಬಂದ ಚಿತ್ರಹಿಂಸೆ, ೧೯೪೬ರಲ್ಲಿ ಸ್ವಾತಂತ್ರೋದಯದ ಹಿನ್ನೆಲೆಯಲ್ಲಿ ಬಿಡುಗಡೆಯಾದ ನಂತರ ಅವರನ್ನು ರಾಷ್ಟ್ರದ ಹೆಮ್ಮೆಯ ಯುವನಾಯಕರಲ್ಲೊಬ್ಬರನ್ನಾಗಿ ಮಾಡಿತು. ತದನಂತರದಲ್ಲೇ ಪೋರ್ಚುಗೀಸರ ವಶದಲ್ಲಿದ್ದ ಗೋವಾಗೆ ತೆರಳಿದ ಲೋಹಿಯಾ ಅಲ್ಲಿಯೂ ಸ್ವಾತಂತ್ರ್ಯದ ಕಿಚ್ಚನ್ನು ಹೊತ್ತಿಸಿ ಬಂದರು.

ಪ್ರತಿಭೆ ಮತ್ತು ಸಾಹಸಗಳ ಅಪೂರ್ವ ಸಂಗಮವೆನಿಸಿದ್ದ ಲೋಹಿಯಾ ಗಾಂಧಿಯ ಅಚ್ಚುಮೆಚ್ಚಿನ ಶಿಷ್ಯರಾಗಿದ್ದರು. ಲೋಹಿಯಾರನ್ನು ಅವರು 'ಅಪರೂಪದ ಶೀಲವಂತ ವ್ಯಕ್ತಿತ್ವ' ಎಂದು ಗುರುತಿಸಿದ್ದರು. ಗಾಂಧಿಯೊಡನೆ, ಅನೇಕ ಕಾಂಗ್ರೆಸ್ ಸಮಾಜವಾದಿಗಳಂತೆಯೇ ರಾಷ್ಟ್ರ ವಿಭಜನೆಯನ್ನು ವಿರೋಧಿಸಿದ ಲೋಹಿಯಾ ರಾಷ್ಟವಿಭಜನೆಯ ಬೆನ್ನಲ್ಲೇ ಹಬ್ಬಿದ ಕೋಮು ಗಲಭೆಗಳ ಹೊತ್ತಿನಲ್ಲಿ ಪರಿಹಾರ ಕಾರ್ಯಕ್ರಮಗಳಿಗಾಗಿ ಗಾಂಧಿ ಜೊತೆಯಲ್ಲಿ ಸಂಚರಿಸಿದರು. ತಾವು ಕೊಲೆಯಾಗುವ ಎರಡು ಮೂರು ದಿನ ಮುನ್ನ ಗಾಂಧಿ ದೇಶವನ್ನು ಮುನ್ನಡೆಸಲು ಆರಂಭಿಸಬೇಕಾದ ಹೊಸ ರಾಜಕಾರಣ ಮತ್ತು ಕಟ್ಟಬೇಕಾದ ಹೊಸ ನಾಯಕತ್ವದ ಬಗೆಯ ಬಗ್ಗೆ ವಿಶೇಷವಾಗಿ ಲೋಹಿಯಾರೊಂದಿಗೆ ಆಪ್ತ ಮಾತುಕತೆ ನಡೆಸಿದ್ದರು. ಆ ಮಾತುಕತೆ ಪೂರ್ಣವಾಗುವ ಮುನ್ನವೇ ಗಾಂಧಿ ಕೊಲೆಯಾಯಿತು.

ಗಾಂಧಿಯ ಅಗಲಿಕೆ ಲೋಹಿಯಾರನ್ನು ಕಂಗೆಡಿಸಿತು. ಇದರ ಜೊತೆಗೆ ಕಾಂಗ್ರೆಸ್ಸಿನೊಳಗಿನ ಬಲಪಂಥೀಯರ ರಾಜಕಾರಣದಿಂದಾಗಿ ಕಾಂಗ್ರೆಸ್ ಸಮಾಜವಾದಿಗಳು ಕಾಂಗ್ರೆಸ್ ಪಕ್ಷವನ್ನು ತೊರೆದು ತಮ್ಮದೇ (ಪ್ರಜಾ) ಸಮಾಜವಾದಿ ಪಕ್ಷವನ್ನು ಕಟ್ಟಿಕೊಳ್ಳುವ ಅನಿವಾರ್ಯತೆ ಉಂಟಾಯಿತು. ೧೯೫೨ರ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಈ ಹೊಸ ಪಕ್ಷ ಭಾರಿ ಸೋಲನ್ನು ಅನುಭವಿಸಿದಾಗ ಅದರ ನಾಯಕರೆಲ್ಲ ದಿಕ್ಕೆಟ್ಟಂತಾದರು. ಚುನಾವಣಾ ಸೋಲನ್ನು ವಿಶ್ಲೇಷಿಸಲು ಮಧ್ಯಪ್ರದೇಶದ ಪಂಚಮಡಿಯಲ್ಲಿ ಸೇರಿದ ಪಕ್ಷದ ಸಮಾವೇಶದಲ್ಲಿ ಮುಖ್ಯ ಭಾಷಣ ಮಾಡಿದ ಲೋಹಿಯಾ ಸಮಾಜವಾದ ಕುರಿತಂತೆ ಆವರೆಗೆ ತಾವು ಮಾಡಿದ್ದ ಹೊಸ ಆಲೋಚನೆಗಳನ್ನು ತೆರೆದಿಟ್ಟರು.

ಮುಂದೆ 'ಭಾರತೀಯ ಸಮಾಜವಾದದ ತಾತ್ವಿಕ ಅಡಿಗಲ್ಲು ಎಂದೇ ಹೆಸರಾದ ಆ ಭಾಷಣ, ಆವರೆಗೆ ಮೂಲತಃ ಮಾರ್ಕ್ಸ್‌ವಾದಿಯಾಗಿದ್ದ ಭಾರತೀಯ ಸಮಾಜವಾದಕ್ಕೆ

ಗಾಂಧಿವಾದದ ದೀಕ್ಷೆ ನೀಡಿತು. ತಂತ್ರಜ್ಞಾನದ ಕ್ರಾಂತಿಕಾರತೆಯನ್ನು ನಂಬಿದ ಆಧುನಿಕ ಬದುಕಿನ ಸದಾ ಏರುತ್ತಾ ಹೋಗುವ ಜೀವನ ಮಟ್ಟದ ಆಕಾಂಕ್ಷೆಯನ್ನು, ಅದು ಜಗತ್ತಿನಲ್ಲಿ ಶೋಷಣೆ ಮತ್ತು ಯುದ್ಧಗಳನ್ನಷ್ಟೇ ಉಂಟು ಮಾಡಬಲ್ಲುದು ಎಂದು ವಿಶ್ಲೇಷಿಸಿದ ಲೋಹಿಯಾ; ಅದರ ಜಾಗದಲ್ಲಿ ಮನುಷ್ಯ ಕಳೆದುಹೋಗದಂತಹ ಮಧ್ಯಮ ತಂತ್ರಜ್ಞಾನವನ್ನು ಆಧರಿಸಿದ ಒಂದು ಸರಳ ಸಭ್ಯ ಜೀವನ ಮಟ್ಟದ ಆಕಾಂಕ್ಷೆಯನ್ನು ಪ್ರತಿಪಾದಿಸಿದರು. ಕಮ್ಯೂನಿಸಂನ ವರ್ಗ ಸಂಘರ್ಷಕ್ಕೆ ಬದಲಾಗಿ ನಾಗರಿಕ ಅಸಹಕಾರ ಸತ್ಯಾಗ್ರಹವನ್ನು ಪ್ರತಿಪಾದಿಸಿದರು.

ಇತಿಹಾಸವನ್ನು ಗ್ರಹಿಸುವ ಹೊಸ ಕ್ರಮವೊಂದನ್ನು ಪ್ರತಿಪಾದಿಸುವ ಮೂಲಕ ಮಾರ್ಕ್ಸ್‌ವಾದದ ತಾತ್ವಿಕ ತಳಹದಿಯನ್ನೇ ಪ್ರಶ್ನಿಸಿದ ಅವರು ಭಾರತೀಯ ಸಮಾಜವಾದ ಐರೋಪ್ಯ ಅನುಭವದ ತಾತ್ವಿಕತೆಯಿಂದ ಕಳಚಿಕೊಂಡು ತನ್ನದೇ ಹೊಸ ಲಂಗರುಗಳನ್ನು ಕಂಡುಕೊಳ್ಳಬೇಕಾದ ಅಗತ್ಯವನ್ನು ಒತ್ತಿಹೇಳಿದರು.

ಈ ಮಾತುಗಳು ಪಕ್ಷದಲ್ಲಿ ಚರ್ಚೆಯಲ್ಲಿರುವಾಗಲೇ ಪಕ್ಷದ ಕೆಲವರು ಪ್ರಧಾನಿ ನೆಹ್ರೂರಿಂದ ಬಂದ ಸಹಕಾರದ ಕರೆಗೆ ಓಗೊಟ್ಟು ಮಾತುಕತೆಗಳನ್ನು ಆರಂಭಿಸಿದರು. ಇದು ನೆಹ್ರೂ ಸರ್ಕಾರ ಜಾರಿಗೆ ತರುತ್ತಿದ್ದ ಸಮಾಜವಾದಕ್ಕಿಂತ ಭಿನ್ನವೂ, ಕ್ರಾಂತಿಕಾರಿಯೂ ಆದ ಸಮಾಜವಾದವನ್ನು ಕಟ್ಟುವ ಉಮೇದಿನಲ್ಲಿದ್ದ ಲೋಹಿಯಾರನ್ನು ಸಿಟ್ಟಿಗೆಬ್ಬಿಸಿತು. ಇದೇ ಸಂದರ್ಭದಲ್ಲಿ ಆಗಿನ ಕೊಚ್ಚಿನ್-ತಿರುವಾಂಕೂರು ರಾಜ್ಯದಲ್ಲಿ ಕಾಂಗ್ರೆಸ್ ಬೆಂಬಲದೊಂದಿಗೆ ಸಮಾಜವಾದಿಗಳು ರಚಿಸಿಕೊಂಡಿದ್ದ ಸರ್ಕಾರ ತನ್ನ ಪ್ರಜೆಗಳ ಮೇಲೇ ಗೋಲೀಬಾರ್ ನಡೆಸಿದಾಗ ಅದರ ರಾಜೀನಾಮೆಗಾಗಿ ಆಗ್ರಹಿಸಿದರು. ಇದಕ್ಕೆ ಸ್ವಲ್ಪ ಮುನ್ನ ಉತ್ತರ ಪ್ರದೇಶದ ಕಾಂಗ್ರೆಸ್ ಸರ್ಕಾರ ಜನರ ಮೇಲೆ ಗೋಲಿಬಾರ್ ಮಾಡಿದ ಸಂದರ್ಭದಲ್ಲಿ ಅದರ ರಾಜೀನಾಮೆಗೆ ಆಗ್ರಹಿಸಿದ್ದ(ಪ್ರಜಾ)ಸಮಾಜವಾದಿ ಪಕ್ಷ ಲೋಹಿಯಾರ ಆಗ್ರಹವನ್ನು ಆಶಿಸ್ತು ಎಂದು ಪರಿಗಣಿಸಿತು. ಈ ವಿವಾದ ತಾರಕಕ್ಕೇರಿ ಲೋಹಿಯಾ ತಮ್ಮ ಬೆಂಬಲಿಗರೊಂದಿಗೆ ಪಕ್ಷವನ್ನು ತೊರೆದು ೧೯೫೫ರಲ್ಲಿ ತಮ್ಮದೇ ಸಮಾಜವಾದಿ ಪಕ್ಷವನ್ನು ರಚಿಸಿಕೊಳ್ಳುವ ಅನಿವಾರ್ಯತೆ ಉಂಟಾಯಿತು.

ತುಂಬ ಮಹತ್ವಾಕಾಂಕ್ಷೆಯಿಂದ ಆರಂಭವಾದ ಈ ಪಕ್ಷ ಸ್ವಾತಂತ್ರ್ಯ ತಂದುಕೊಟ್ಟವರ ಪಕ್ಷವೆಂಬ ನಂಬಿಕೆ ಜನರಲ್ಲಿ ಬೇರೂರಿದ್ದ ಕಾಂಗ್ರೆಸ್‌ನ ಬಲಿಷ್ಠ ರಾಜಕಾರಣದ ಎದುರು ಯಶಸ್ವಿಯಾಗಿ ಸೆಣೆಸಲಾಗದಿದ್ದರೂ, ಕಾಲಕ್ರಮೇಣ ಕಾಂಗ್ರೆಸ್ಸಿನ ತತ್ವ, ದಾರಿದ್ರ್ಯ ಮತ್ತು ಭ್ರಷ್ಟಾಚಾರವನ್ನು ಬಯಲಿಗೆಳೆಯುವ ಹೋರಾಟಗಳ ಮೂಲಕ ಪರ್ಯಾಯ ರಾಜಕಾರಣದ ಹೊಸ ಹೊಳಹು ಮತ್ತು ಭರವಸೆಗಳನ್ನು ಸೃಷ್ಟಿಸಿದ್ದಂತೂ ನಿಜ. ಅವರು ಪ್ರತಿಪಾದಿಸಿದ ಕಾಂಗ್ರೆಸ್ಸೇತರವಾದ ಆ ಕಾಲಕ್ಕೆ ಕ್ರಾಂತಿಕಾರಕವೇ ಆಗಿದ್ದು, ೧೯೬೭ರ ಚುನಾವಣೆಗಳ ಹೊತ್ತಿಗೆ ಪಟ್ಟಭದ್ರ ರಾಜಕಾರಣದ ಪ್ರತೀಕವಾಗಿದ್ದ ಕಾಂಗ್ರೆಸ್‌ನ

ಬುಡ ಅಲ್ಲಾಡುವಂತೆ ಮಾಡಿತು ಮತ್ತು ರಾಷ್ಟ್ರದಲ್ಲಿ ಬೇರೂರಿದ್ದ ಏಕಪಕ್ಷೀಯ ಸರ್ಕಾರದ ಪರಂಪರೆಯನ್ನು ಮುರಿಯಿತು.

ಅದೇನೇ ಇರಲಿ, ತಮ್ಮ ಪಕ್ಷದ ಪರವಾಗಿ ಲೋಹಿಯಾ ರೂಪಿಸಿದ ಜಾತಿ ವಿನಾಶ, ಇಂಗ್ಲಿಷ್ ತೊಲಗಿಸಿ, ಸ್ತ್ರೀ ಸಮಾನತೆ, ಚತುಸ್ತಂಭ ರಾಷ್ಟ್ರ, ವಿಶ್ವ ಸರ್ಕಾರ ಇತ್ಯಾದಿ ನೀತಿ–ಕಾರ್ಯಕ್ರಮಗಳು ಅತಿ ನಾವೀನ್ಯತೆಯಿಂದ ಕೂಡಿದ್ದು ಇಂದಿನ ರಾಜಕಾರಣದಲ್ಲಿ ಅವು ಕುರೂಪಿಯಾಗಿ ಕಾಣುತ್ತಿದ್ದರೆ ಅದಕ್ಕೆ ಹೊಸ(ಜಾಗತೀಕರಣದ) ರಾಜಕಾರಣವು ಲೋಹಿಯಾ ತಮ್ಮ ಸಮಾಜವಾದದ ಕೇಂದ್ರ ತತ್ವವಾಗಿ ನಿರೂಪಿಸಿದ್ದ 'ಮಿತಿಗಳುಳ್ಳ ಬದುಕಿ'ನ ಪರಿಕಲ್ಪನೆಗೆ ವಿದಾಯ ಹೇಳಿ ಮಿತಿಯಿಲ್ಲದ ಸುಖಗಳ ಬದುಕನ್ನು ಅಪ್ಪಿಕೊಂಡಿರುವದೇ ಕಾರಣವಾಗಿದೆ. ಪ್ರಗತಿಯ ಬಂಡಿಗೆ ಸಂಪದಭಿವೃದ್ಧಿ ಮತ್ತು ಸಮಾನತೆಯ ಎರಡು ಚಕ್ರಗಳಿಲ್ಲದಿದ್ದರೆ ಬಂಡಿ ಉರುಳಿಬೀಳುವುದು ಖಂಡಿತವೆಂದು ಹೇಳಿದ್ದ ಅವರ ಮಾತು ಎಷ್ಟು ನಿಜ ಎಂಬುದನ್ನು ಇಂದು 'ಬಲಿಷ್ಠ ಭಾರತ'ದ ನಿರ್ಮಾಣದ ಕೂಗಿನೊಂದಿಗೆ ನಡೆದಿರುವ ಅಭಿವೃದ್ಧಿಯ ಭರಾಟೆ ಸೃಷ್ಟಿಸುತ್ತಿರುವ ನಿಯಂತ್ರಣಕ್ಕೇ ಸಿಕ್ಕದಂತೆ ತೋರುತ್ತಿರುವ ನಿರಂತರ ಹಿಂಸೆ–ಅಶಾಂತಿಯ ಘಟನೆಗಳು ಸೂಚಿಸುತ್ತಿವೆ.

೧೯೬೭ರಲ್ಲಿ ಅನಾರೋಗ್ಯದ ನಿಮಿತ್ತ ಬಡವರು ಹೋಗಬಲ್ಲ ಸರ್ಕಾರಿ ಆಸ್ಪತ್ರೆಯಲ್ಲೇ ಚಿಕಿತ್ಸೆ ಪಡೆಯುವುದಾಗಿ ಹಠ ಹಿಡಿದು ದೆಹಲಿಯ ಸರ್ಕಾರಿ ಆಸ್ಪತ್ರೆಯೊಂದಕ್ಕೆ ಸೇರಿ ಚಿಕಿತ್ಸೆ ಫಲಕಾರಿಯಾಗದೆ ಅಕ್ಟೋಬರ್ ೧೨ರಂದು ಅಸು ನೀಗಿದಾಗ ಮನೆ–ಕುಟುಂಬ, ಬ್ಯಾಂಕ್ ಖಾತೆ ಎಂಬುವುಗಳು ಯಾವೂ ಇಲ್ಲದೆ ಬದುಕಿದ ಈ ಜೋಗಿ ರಾಜಕಾರಣಿಗೆ ಕೇವಲ ೫೭ ವರ್ಷ.

ಲೋಹಿಯಾ ಹೇಳುತ್ತಿದ್ದರು: 'ಜನ ನನ್ನ ಮಾತನ್ನು ಕೇಳುತ್ತಿಲ್ಲ. ಆದರೆ ಒಂದಲ್ಲ ಒಂದು ದಿನ ಕೇಳಿಯೇ ಕೇಳಬೇಕು. ನಾನು ಸತ್ತ ಮೇಲಾದರೂ. ಬಹುಶಃ ನಾನು ಕಾಲದ ಜೊತೆ ಹೆಜ್ಜೆ ಹಾಕುವಾಗ ಒಂದೆರಡು ಹೆಜ್ಜೆ ಮುಂದೆ ಹೋಗಿಬಿಟ್ಟಿದ್ದೇನೇನೋ!'. ನಿಜವಿರಬಹುದಲ್ಲವೆ?

◆◆

೪

ಪ್ರಖರ ಸಿದ್ಧಾಂತಿ, ಪ್ರತಿಭಾ ಸಂಪನ್ನ ಅಶೋಕ ಮೆಹ್ತಾ

ಖಾದ್ರಿ ಎಸ್. ಅಚ್ಯುತನ್

ಭಾರತದಲ್ಲಿ ಸಮಾಜವಾದಿ ಆಂದೋಲನ ಮತ್ತು ಪಕ್ಷದ ಸಂಸ್ಥಾಪಕರಲ್ಲೊಬ್ಬ ರಾದ ಅಶೋಕ ಮೆಹ್ತಾ ಮೂಲತಃ ಅಹಮದಾಬಾದ್‌ನವರು. ಅನುಕೂಲಸ್ಥ ಶಿಕ್ಷಿತ ಕುಟುಂಬವೊಂದರಲ್ಲಿ ೧೯೧೧ರ ಅಕ್ಟೋಬರ್ ೨೪ ಜನನ. ತಂದೆ ಶಿಕ್ಷಣ ತಜ್ಞರಾದರೆ, ತಾತ ಅಹ್ಮದಾಬಾದ್ ನಗರಪಾಲಿಕೆ ಮುಖ್ಯ ಇಂಜನಿಯರ್. ಅಶೋಕ್ ಮೆಹ್ತಾ ಬಾಲ್ಯ ಕಳೆದದ್ದು ಕೈಗಾರಿಕಾ ಕಾರ್ಮಿಕರೊಡನೆ. ಅವರು ೨ ವರ್ಷದವರಾಗಿದ್ದಾಗಿನಿಂದ ಅವರ ಮನೆ ಬಳಿ ರೈಲು ಸಂಚಾರವಿತ್ತು. ಆದುದರಿಂದ ತಾವು ನಗರವಾಸಿ ಎಂಬ ಅಭಿಮಾನ ಅವರಿಗೆ! ಅಶೋಕ್ ಬೆಳೆಯುತ್ತಾ ಅಹ್ಮದಾಬಾದಿನ ಕಾರ್ಖಾನೆಗಳ ಹೊರಗೆ ಹಾದಿ ಬದಿಯಲ್ಲಿ ಕುಳಿತು ಕಾರ್ಮಿಕರೊಡನೆ ಹರಟೆ; ಅವರ ಜತೆ ಚಹಾ ಹೀರುವುದು, ಸಂಘ ಕಟ್ಟಿಕೊಳ್ಳುವಂತೆ ಅವರನ್ನು ಊಟದ ವಿರಾಮ ಸಮಯದಲ್ಲಿ ಪುಸಲಾಯಿಸುವುದು ಅವರ ದಿನಚರಿಯಾಗಿತ್ತು. ಅಷ್ಟೇ ಅಲ್ಲ, ಕೈಗಾರಿಕಾ ವಿವಾದಗಳಿಂದ ಕೆಲಸ ನಿಂತುಹೋದಾಗ ಅಶೋಕ್ ಕಾರ್ಮಿಕರ ಕುಟುಂಬಗಳಿಗೆ ಹಣಕಾಸಿನ ನೆರವಿನ ವ್ಯವಸ್ಥೆಯನ್ನೂ ಮಾಡುತ್ತಿದ್ದರು. ಅಶೋಕ ೧೯೩೧ರಲ್ಲಿ ಮುಂಬೈನ ವಿಲ್ಸನ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಪದವೀಧರರಾದರು. ಆಗಲೇ ಸಮಾಜವಾದಿ ಹಿನ್ನೆಲೆಯ ಯುಸುಫ್ ಮೆಹರಾಲಿ ಪ್ರಭಾವಕ್ಕೆ ಬಂದ ಎಳೆಯ ಅಶೋಕ್ ಮುಂಬೈ ಸ್ಕೂಲ್

ಆಫ್ ಎಕನಾಮಿಕ್ಸ್‌ನಲ್ಲಿ ಅಧ್ಯಾಪಕರಾದರಾದರೂ, ೧೯೩೨ರಲ್ಲಿ ಕೆಲಸ ಬಿಟ್ಟು ಗಾಂಧಿಯವರ ಅಸಹಕಾರ ಚಳವಳಿಗಿಳಿದರು.

ಮುಂಬೈನಲ್ಲಿ ದೇಶ ದ್ರೋಹದ ಆಪಾದನೆ ಮೇಲೆ ಅಶೋಕ ಬಂಧನಕ್ಕೊಳಗಾದಾಗ ಅವರಿಗೆ ೨೧ವರ್ಷ. ನಾಸಿಕ್ ಜೈಲಿನಲ್ಲಿ ಜೆಪಿ, ಮಿನೂ ಮಸಾನಿ, ಅಚ್ಯುತ ಪಟವರ್ಧನ್ ಮುಂತಾದ ಸಮಾನ ಮನಸ್ಕ ಗೆಳೆಯರ ಸಹವಾಸ ಅಶೋಕ ಅವರಿಗೆ ಪಾಶ್ಚಿಮಾತ್ಯ ಜಗತ್ತಿಗೆ ಸಂಬಂಧಿಸಿದ ಹಲವಾರು ಅಮೂಲ್ಯ ಪುಸ್ತಕಗಳನ್ನು ಓದುವಂತೆ ಪ್ರೇರೇಪಿಸಿದರು ಜೆಪಿ. ಜೈಲಿನಲ್ಲಿ ಅಶೋಕರ ಸೂಕ್ಷ್ಮ ದೇಹ ಪ್ರಕೃತಿ ತಪಾಸಣೆ ಮಾಡಿದ ವೈದ್ಯ ಕರ್ನಲ್ ಭಂಡಾರಿ ಅವರು, ಎಂದಿನ ಆಹಾರದ ಜತೆಗೆ ಅವರಿಗೆ ಹಾಲನ್ನೂ ನೀಡುವಂತೆ ಆದೇಶಿಸಿದರು. ಆದರೆ ಸಂಕೋಚ ಪ್ರಕೃತಿಯ ಅಶೋಕ ಮೆಹ್ತಾ ಆ ಹಾಲನ್ನು ತಮ್ಮ ಇತರೆ ಮಿತ್ರರೊಡನೆ ಹಂಚಿಕೊಳ್ಳುತ್ತಿದ್ದರು. ಎರಡೂವರೆ ವರ್ಷ ಜೈಲುಶಿಕ್ಷೆ ಅವರ ಆರೋಗ್ಯ ಸುಧಾರಣೆಗೂ ನೆರವಾಯಿತು. ಹೀಗೆ ಹಲವು ತಿಂಗಳ ಪುಸ್ತಕಗಳ ಓದು, ಚರ್ಚೆ, ವಿಚಾರಗಳನ್ನು ಅರಗಿಸಿಕೊಂಡ ಈ ಗೆಳೆಯರು ದೇಶದಲ್ಲಿ ಹೊಸ ರಾಜಕೀಯ ಪಕ್ಷ ಹುಟ್ಟುಹಾಕುವ ನಿರ್ಧಾರಕ್ಕೆ ಬಂದರು. ಪಕ್ಷ ಸ್ವಾತಂತ್ರ್ಯ ಮತ್ತು ಸಮಾಜವಾದಕ್ಕೆ ಬದ್ಧವಾಗಿರಬೇಕೆಂಬ ಆಶಯ ಅವರದು. ಕಾಂಗ್ರೆಸ್‌ನ ಸದಸ್ಯತ್ವ ಇಟ್ಟುಕೊಂಡೇ ಹೊಸಪಕ್ಷದೊಂದಿಗೆ ಕೆಲಸ ಮಾಡಲು ತೀರ್ಮಾನ. ಈ ರೀತಿ ಕಾಂಗ್ರೆಸ್ ಸೋಷಲಿಸ್ಟ್ ಪಕ್ಷ ಉದಯಿಸಿತು. ಮೇ ೧೭, ೧೯೩೪ರಂದು ಪಾಟ್ನಾದಲ್ಲಿ ಈ ಪಕ್ಷ ಸ್ಥಾಪನೆಯಾಯಿತು.

ಜೆಪಿ, ಮಸಾನಿ, ಪಟವರ್ಧನ್ ಹಾಗೂ ಲೋಹಿಯಾ ಅವರೊಡನೆ ಅಶೋಕ್ ಅವರದು ಏಕ ಸೂತ್ರದಲ್ಲಿ ಹೆಣೆದುಕೊಂಡಿದ್ದ ರಾಜಕೀಯ-ಆರ್ಥಿಕ ವಿಚಾರ ಸಂಕಲ್ಪ. ಆಸೆಬುರುಕುತನ ಹಾಗೂ ಅಮಾನವೀಯ ಲಕ್ಷಣಗಳಿಂದಾಗಿ ಬಂಡವಾಳಶಾಹಿ ಅವರೆಲ್ಲರಿಗೂ ಪರಮ ವೈರಿ. ಇತಿಹಾಸ ಎಂಬುದು ವರ್ಗ ಸಂಘರ್ಷದ ಪ್ರಕ್ರಿಯೆ ಹಾಗೂ ಕಾರ್ಮಿಕ ಕ್ರಾಂತಿ ಅನಿವಾರ್ಯ. ಇದು ಸೋಷಲಿಸ್ಟರು ತಮ್ಮೆಲ್ಲ ಚರ್ಚೆಗಳಲ್ಲಿ ಆಖೈರಾಗಿ ಒಪ್ಪಿಕೊಂಡದ್ದು. ಆದರೆ ತಾವು ಎಂದಿಗೂ ಲೆನಿನ್‌ವಾದಿಯಾಗಲಿಲ್ಲ ಎನ್ನುತ್ತಾರೆ ಅಶೋಕ. ಜನತಾಂತ್ರಿಕ ಸಮಾಜವಾದಿಯಾಗಿಯೇ ಕೊನೆಯತನಕ ಉಳಿದರು ಅಶೋಕ್.

೨೪ ವರ್ಷ ವಯಸ್ಸಿನಲ್ಲೇ 'ಸಮಾಜವಾದ ಮತ್ತು ಗಾಂಧಿವಾದ' ಪುಸ್ತಕ ಬರೆದರು. ೧೯೩೮ರ ಏಪ್ರಿಲ್‌ನಲ್ಲಿ ನಡೆದ ಲಾಹೋರ್ ಸಮ್ಮೇಳನದಲ್ಲಿ ಪಕ್ಷದ ಕಾರ್ಯಕಾರಿಣಿಗೆ ಆಯ್ಕೆ. ೧೯೪೧ರಲ್ಲಿ ಗಾಂಧಿಯವರು ಯೋಜಿಸಿದ ವೈಯಕ್ತಿಕ ಸತ್ಯಾಗ್ರಹದಲ್ಲಿ ಭಾಗವಹಿಸಿ ಒಂದೂವರೆ ವರ್ಷ ಮತ್ತೆ ಜೈಲುವಾಸ. ಆಗ ಅಚ್ಯುತ ಪಟವರ್ಧನ್ ಜತೆ ಕೂಡಿಕೊಂಡು 'ದಿ ಕಮ್ಯೂನಲ್ ಟ್ರಯಾಂಗಲ್' ಪುಸ್ತಕ ಬರೆದರು. ೧೯೪೨ರಲ್ಲಿ 'ಕ್ವಿಟ್ ಇಂಡಿಯಾ' ಚಳವಳಿಯಲ್ಲೂ ಪಾಲ್ಗೊಂಡು ಮತ್ತೆ ಮೂರು ವರ್ಷ ಸೆರೆಮನೆ ವಾಸ. ೧೯೪೭ರಲ್ಲಿ

ಕಾಂಗ್ರೆಸ್ಸಿಗರು ಇತರೆ ರಾಜಕೀಯ ಪಕ್ಷದ ಸದಸ್ಯರಾಗಿರಬಾರದು ಎಂದಾಗ ನರೇಂದ್ರ ದೇವ, ಲೋಹಿಯಾ ಮುಂತಾದವರು ಕಾಂಗ್ರೆಸ್ಸಿನಲ್ಲಿರುವ ಒಲವು ತೋರಿದರೆ ಅದರಿಂದ ಹೊರಬರುವ ನಿಲುಮೆ ತಳೆದವರು ಅಶೋಕ್‌ಮೆಹ್ತಾ. ಅದೇ ವರ್ಷ ಫೆಬ್ರವರಿಯಲ್ಲಿ ಕಾನ್‌ಪುರದಲ್ಲಿ ಸೇರಿದ ಸಭೆ ಪಕ್ಷದ ಹೆಸರಿನಿಂದ ಕಾಂಗ್ರೆಸ್ ಪದ ಬಿಟ್ಟು ಸೋಷಲಿಸ್ಟ್ ಪಾರ್ಟಿ ಆಯಿತು. ಜನತಾಂತ್ರಿಕ ಸಮಾಜವಾದ ಅದರ ಮೂಲ ತತ್ವವಾಯಿತು. ನಿಸ್ಸಂದೇಹವಾಗಿ ಇದು ಅಶೋಕರ ತಾತ್ವಿಕ ಗೆಲವು.

ಕಾರ್ಮಿಕ ಸಂಘಟನೆಯಲ್ಲಿ ಆಸಕ್ತಿ ಹೊಂದಿದ್ದ ಅಶೋಕ ಮೆಹ್ತಾ, 'ಹಿಂದ್ ಮಜದೂರ್ ಸಭಾ' ರಚಿಸಿ ಮುಂಬೈ ಬಟ್ಟೆ ಗಿರಣಿ ಕಾರ್ಮಿಕರ ಮುಷ್ಕರದ ಮುಖಂಡತ್ವ ವಹಿಸಿದ್ದರು. ಗುಜರಾತಿನ ಪರಡಿಯಲ್ಲಿ ರೈತ ಚಳವಳಿಯಲ್ಲಿ ಭಾಗವಹಿಸಿ ಒಂದು ವರ್ಷದ ಜೈಲುಶಿಕ್ಷೆಗೆ ಗುರಿ. ೧೯೫೦ರ ಜುಲೈ ೮ರಿಂದ ೧೨ರವರೆಗೆ ಮದ್ರಾಸಿನಲ್ಲಿ (ಇಂದಿನ ಚೆನ್ನೈ) ಸಮಾಜವಾದಿ ಪಕ್ಷದ ೮ನೇ ಸಮಾವೇಶ. ಅಶೋಕ ಮೆಹತಾ ಅಧ್ಯಕ್ಷ ಭಾಷಣ. ಅಂದಿನ ಕಾಂಗ್ರೆಸ್ ನೇತಾರ ಆಚಾರ್ಯ ಕೃಪಲಾನಿ ಭಾಷಣದ ವಸ್ತುವನ್ನು ಟೀಕಿಸಿದರಾದರೂ ಅಶೋಕ ಅವರ ಕಾವ್ಯಮಯ ಭಾಷೆಯ ಓಘಕ್ಕೆ ಮಾರುಹೋಗಿ, ಅದು ಕವಿ ರವೀಂದ್ರರ ಶೈಲಿಗೆ ಹೋಲುತ್ತದೆ ಎಂದರು.

೧೯೫೨ರ ಮೊದಲ ಸಾರ್ವತ್ರಿಕ ಚುನಾವಣೆಗೆ ಸಿದ್ಧತೆ ಹೊಣೆ ಅಶೋಕ ಅವರ ಪಾಲಿಗೆ. ಸೋಷಲಿಸ್ಟ್ ಪಕ್ಷದ ಚುನಾವಣಾ ಪ್ರಣಾಳಿಕೆಯ ಕರಡನ್ನು ಸಿದ್ಧಪಡಿಸಿದವರು ಅವರೇ. ಜೆಪಿ, ಲೋಹಿಯಾ, ನರೇಂದ್ರದೇವ ಪಕ್ಷದ ಪ್ರಚಾರದಲ್ಲಿ ತೊಡಗಿಸಿಕೊಂಡರು. ಆದರೆ ಮುಂಬೈ ಉತ್ತರ ಕ್ಷೇತ್ರದಿಂದ ಅಶೋಕ ಸ್ಪರ್ಧಿಸಿ ಕೇವಲ ೬೫೭ ಮತಗಳ ಅಂತರದಿಂದ ಕಾಂಗ್ರೆಸ್ ಹುರಿಯಾಳಿಗೆ ಸೋತರು. ಬಹಳ ನಿರೀಕ್ಷೆ ಹೊಂದಿದ್ದ ನಾಯಕರಿಗೆ, ತಮ್ಮ ಪಕ್ಷ ಇಡೀ ದೇಶದಲ್ಲಿ ಅನುಭವಿಸಿದ ದೊಡ್ಡ ಸೋಲಿನಿಂದಾಗಿ ಕಾಂಗ್ರೆಸ್ಸಿಗೆ ಪರ್ಯಾಯವಾಗಿ ಬೆಳೆಯುವ ಆಶೆಯನ್ನು ಡೋಲಾಯಮಾನಗೊಳಿಸಿತು. ಆ ಹೊತ್ತಿಗೆ ಕೃಪಲಾನಿಯವರು ಕಟ್ಟಿಕೊಂಡಿದ್ದ ಕಿಸಾನ್ ಮಜದೂರ್ ಪಕ್ಷವನ್ನು ಸೋಷಲಿಸ್ಟ್ ಪಕ್ಷದೊಡನೆ ವಿಲೀನಗೊಳಿಸಿ ಪ್ರಬಲ ಪ್ರತಿಪಕ್ಷ ಕಟ್ಟುವ ಪ್ರಯತ್ನಕ್ಕೆ ಜೆಪಿ, ಲೋಹಿಯಾ, ಅಶೋಕ ಮುಂದಾದರು. ಪ್ರಜಾ ಸಮಾಜವಾದಿ ಪಕ್ಷ(ಪಿ.ಎಸ್.ಪಿ.)ವೆಂದು ಪಕ್ಷಕ್ಕೆ ಮರುನಾಮಕರಣ. ವಿಲೀನ ವಿರೋಧಿಸಿದ ನರೇಂದ್ರದೇವ ಅವರನ್ನು ಮನವೊಲಿಸುವಲ್ಲಿ ಲೋಹಿಯಾ, ಅಶೋಕ ಯಶ ಕಂಡರು.

ಆದರೆ ಜೆಪಿ ನೆಹರು ನಡುವೆ ಸಹಕಾರ ಕುರಿತ ಮಾತುಕತೆ ಆರಂಭವಾದ ಹಿನ್ನೆಲೆಯಲ್ಲಿ ಪಕ್ಷದ ೧೯೫೩ರ ಜೂನ್ ೧೪–೧೮ರ ಬೇತುಲ್ ವಿಶೇಷ ಅಧಿವೇಶನದಲ್ಲಿ ನಾಯಕರ ನಡುವೆ ಮನಸ್ತಾಪಗಳು ಹುಟ್ಟಿ ಅವು ವಿರಸದ ಹಂತ ತಲುಪಿತು. ಅಶೋಕ ಮೆಹ್ತಾ ತಮ್ಮ 'ಹಿಂದುಳಿದ ಆರ್ಥಿಕತೆಗಳ ಒತ್ತಾಯಗಳು' ಎಂಬ ಸಿದ್ಧಾಂತದಡಿ ಕಾಂಗ್ರೆಸ್ ಜತೆ ಸಹಕರಿಸುವ ಒಲವು ತೋರಿದ್ದು ಪಕ್ಷದಲ್ಲಿ ದೊಡ್ಡ ಕೋಲಾಹಲವನ್ನೇ

ಉಂಟು ಮಾಡಿತು. ಪಕ್ಷದೊಳಗೆ ಕಾಂಗ್ರೆಸ್ ಪರ-ವಿರೋಧಿ ಎಂಬ ಎರಡು ಬಣಗಳು ಸೃಷ್ಟಿಯಾದವು. ಕಾಂಗೆಸ್ಸಿಗೆ ಪಿಎಸ್‌ಪಿ ಪರ್ಯಾಯ ಶಕ್ತಿಯಾಗಿ ಬೆಳೆಯುವುದು ದುಸ್ತರ ಎಂಬ ಅನಿಸಿಕೆ ಅಶೋಕ ಮೆಹ್ತಾ ಅವರಲ್ಲಿ ಮನೆಮಾಡಿ, ನೆಹರು ಅವರತ್ತ ವಾಲಲಾರಂಭಿಸಿದರು. ಇದು ಪಕ್ಷದಲ್ಲಿ ತೀವ್ರ ಚರ್ಚೆಯನ್ನು ಹುಟ್ಟು ಹಾಕಿ, ಮೆಹ್ತಾ ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕಾಯಿತು. ಆದರೆ ಪಕ್ಷ ತ್ಯಜಿಸಲಿಲ್ಲ. ಇದರ ಸುತ್ತಮುತ್ತ ನಡೆದ ಚರ್ಚೆ-ವಾದ-ವಿವಾದಗಳ ಪರಿಣಾಮವಾಗಿ ಲೋಹಿಯಾ ಪಕ್ಷ ತೊರೆದು ತಮ್ಮದೇ ಸಮಾಜವಾದಿ ಪಕ್ಷ ಸ್ಥಾಪಿಸಿಕೊಂಡು ತಮ್ಮ ದಾರಿ ಹಿಡಿದರು.

೧೯೫೭ರ ಹಾಗೂ ೧೯೬೨ರ ಚುನಾವಣೆ ಸೋತರೂ, ನಂತರ ಬಿಹಾರದ ಮುಜಫರ್‌ಪುರದಿಂದ ನಡೆದ ಉಪ ಚುನಾವಣೆಯಲ್ಲಿ ಗೆದ್ದು ಲೋಕಸಭೆಗೆ ಆಯ್ಕೆ ಯಾದ ಆಶೋಕ ಮೆಹ್ತಾ, ೧೯೬೩ರಲ್ಲಿ ವಿಶ್ವ ಸಂಸ್ಥೆ ಜನರಲ್ ಅಸೆಂಬ್ಲಿಗೆ ಭಾರತ ನಿಯೋಗದ ಉಪನಾಯಕನಾಗಲು ಪ್ರಧಾನಿ ನೆಹ್ರೂ ನೀಡಿದ ಆಹ್ವಾನವನ್ನು ಒಪ್ಪಿ ಕೊಂಡರು. ಈ 'ಸಹಕಾರ' ಇಷ್ಟಕ್ಕೇ ಮುಗಿಯದೆ ೧೯೬೩ರ ಅಕ್ಟೋಬರ್‌ನಲ್ಲಿ ನೆಹರು ಅಶೋಕ ಅವರನ್ನು ಯೋಜನಾ ಆಯೋಗದ ಉಪಾಧ್ಯಕ್ಷರನ್ನಾಗಿ ನೇಮಿಸಿದರು. ಯೋಜನಾಬದ್ಧ ಪ್ರಗತಿ ತಮ್ಮ ಆರ್ಥಿಕ ಸಿದ್ಧಾಂತಕ್ಕೆ ಅನುಗುಣವಾಗಿದ್ದು, ಇದು ತ್ವರಿತ ವಿಕಾಸಕ್ಕೆ ಅಗತ್ಯ ಎಂದು ಪ್ರತಿಪಾದಿಸಿದ ಅವರು ಕಾಂಗ್ರೆಸ್ ಸರ್ಕಾರದ ಈ ಆಹ್ವಾನವನ್ನೂ ಒಪ್ಪಿಕೊಂಡರು.

ಇದು ಮತ್ತೆ ಪಿಎಸ್‌ಪಿ ಪಕ್ಷದಲ್ಲಿ ಇರುಸುಮುರುಸಿಗೆ ಕಾರಣವಾಗಿ, ಆಗ ಪಕ್ಷದ ಅಧ್ಯಕ್ಷರಾಗಿದ್ದ ಅಶೋಕರನ್ನೇ ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ವಜಾ ಮಾಡುವ ಚಾರಿತ್ರಿಕ ಠರಾವು ಪಾಸಾಯಿತು. ಇದು ಅಶೋಕರಿಗೆ ತಮ್ಮ ಬೆಂಬಲಿಗರೊಡನೆ ಕಾಂಗ್ರೆಸ್ ಸೇರಲು ನಾಂದಿಯಾಯಿತು. ೧೯೬೬ರಲ್ಲಿ ಕಾಂಗ್ರೆಸ್ ಆಳ್ವಿಕೆಯಡಿ ಯೋಜನಾ ಖಾತೆ ಸಚಿವರಾದರು. ರಾಜ್ಯ ಸಭೆಗೆ ಆಯ್ಕೆಯಾಗಿ ೧೯೬೭ರ ಫೆಬ್ರವರಿವರೆಗೆ ಅದರ ಸದಸ್ಯರಾಗಿದ್ದರು. ೧೯೬೭ರಲ್ಲಿ ಭಂಡಾರಾ ಕ್ಷೇತ್ರದಿಂದ ಕಾಂಗ್ರೆಸ್ ಉಮೇದು ವಾರರಾಗಿ ಲೋಕಸಭೆಗೆ ಆರಿಸಿ ಬಂದರು. ಇಂದಿರಾಗಾಂಧಿ ಸಂಪುಟದಲ್ಲಿ ಮತ್ತೆ ಸಚಿವರಾದರು. ಆದರೆ ಜಕೋಸ್ಲೋವಾಕಿಯಾ ಮೇಲೆ ಸೋವಿಯತ್ ರಷ್ಯಾದ ಆಕ್ರಮಣವನ್ನು ಭಾರತ ಸರ್ಕಾರ ಖಂಡಿಸದಿದ್ದಾಗ ಸಚಿವ ಹುದ್ದೆಗೆ ರಾಜೀನಾಮೆ ನೀಡಿದರು. ಇಂದಿರಾ ಗಾಂಧಿ ಕೈಗೊಂಡ ರೂಪಾಯಿ ಅಪಮೌಲ್ಯಕ್ಕೆ ಅಶೋಕ ಮೆಹ್ತಾ ಕಾರಣ ಎಂದು ಮಾಧ್ಯಮ ಬಿಂಬಿಸಿದಾಗ, ಅವರ ಬೆಂಬಲಕ್ಕೆ ಯಾರೂ ಬರಲಿಲ್ಲ ಎಂಬ ಸಂಗತಿ ಇಂದಿರಾ-ಅಶೋಕರ ನಡುವೆ ಬಿರುಕು ಬೆಳೆದಿದೆ ಎನ್ನವುದಕ್ಕೆ ಸಾಕ್ಷಿಯಾಯಿತು. ೧೯೬೯ರಲ್ಲಿ ಇಂದಿರಾ ಕಾಂಗ್ರೆಸ್ಸನ್ನು ಹೋಳು ಮಾಡಿದಾಗ, ಅಶೋಕ ಸಿಂಡಿಕೇಟ್ ಜತೆ ಸೇರಿದರು. ಅವರ ಈ ಒಟ್ಟು ರಾಜಕಾರಣ, ತಮಗೆ

ಪ್ರಿಯವಾದ ಬ್ಯಾಂಕ್ ರಾಷ್ಟ್ರೀಕರಣ, ರಾಜಧನ ರದ್ದುಗಳಂತಹ ನೀತಿಗಳನ್ನು ಶ್ರೀಮತಿ ಗಾಂಧಿ ಪ್ರಕಟಿಸಿದಾಗ ಅದನ್ನು ವಿರೋಧಿಸಬೇಕಾದ ವಿಪರ್ಯಾಸಕ್ಕೆ ಅವರನ್ನು ದೂಡಿತು.

೧೯೭೧ರ ಚುನಾವಣೆಯಲ್ಲಿ ಸೋಲು ಕಂಡ ಅಶೋಕ ಮೆಹ್ತಾ, ೧೯೭೩–೭೪ರ ಜೆಪಿ ಚಳವಳಿಯಲ್ಲಿ ಸಕ್ರಿಯರಾದರು. ೧೯೭೫ರ ಜೂನ್ ೨೫ರಂದು ಇಂದಿರಾಗಾಂಧಿ ತುರ್ತು ಪರಿಸ್ಥಿತಿ ಘೋಷಿಸಿದಾಗ ವಿರೋಧ ಪಕ್ಷಗಳ ಹಲವು ನಾಯಕರಂತೆಯೇ ಅವರೂ ಸೆರೆಮನೆ ಸೇರಬೇಕಾಯಿತು. ಹರ್ಯಾಣಾದ ರೋಹ್ತಕ್ ಜೈಲಿನಲ್ಲಿ ಅವರಿಂದ 'ರಿಫ್ಲೆಕ್ಷನ್ ಆಫ್ ಸೋಷಲಿಸ್ಟ್ ಇರಾ' ಎಂಬ ಅದ್ಭುತ ಕೃತಿ ರಚನೆಯಾಯಿತು. 'ಇದಕ್ಕೆ ನೆರವಾದ ಪ್ರಧಾನಿಗೆ ನಾನು ಆಭಾರಿ' ಎಂದೂ ಅಶೋಕ ವ್ಯಂಗ್ಯಭರಿತವಾಗಿ ಅದರ ಮುನ್ನುಡಿಯಲ್ಲಿ ಬರೆದರು. ತುರ್ತು ಪರಿಸ್ಥಿತಿ ನಂತರ ವಿರೋಧ ಪಕ್ಷಗಳ ಒಗ್ಗಟ್ಟಿನ ಪ್ರತೀಕವಾಗಿ ಜನತಾ ಪಕ್ಷದ ಹುಟ್ಟಿಗೆ ಶ್ರಮಿಸಿದರು. ಜೆಪಿಗೆ ಹೆಗಲೆಣೆಯಾಗಿ ನಿಂತರು. ಜನತಾ ಸರ್ಕಾರ ಅಶೋಕ ಅವರಿಗಿದ್ದ ಅಧಿಕಾರ ವಿಕೇಂದ್ರೀಕರಣ, ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿನ ಬದ್ಧತೆ ಗಮನಿಸಿ, ಪಂಚಾಯತ್ ರಾಜ್ ಪುನರುಜ್ಜೀವನಕ್ಕಾಗಿ ನೇಮಿಸಿದ್ದ ಸಮಿತಿಗೆ ಅಧ್ಯಕ್ಷರನ್ನಾಗಿ ಮಾಡಿತು. ಈ ಸಮಿತಿ ನೀಡಿದ ೧೩೨ ಶಿಫಾರಸ್ಸುಗಳನ್ನು ಒಳಗೊಂಡ ವರದಿ ಒಂದು ಐತಿಹಾಸಿಕ ಸನ್ನದಾಗಿದ್ದು ಇಂದಿನ ಪಂಚಾಯತ್ ರಾಜ್ ವ್ಯವಸ್ಥೆಗೆ ಬೆನ್ನೆಲುಬಾಗಿದೆ.

ಜನತಂತ್ರ ಹಾಗೂ ಸಮಾಜವಾದ–ಎರಡೂ ಮೌಲ್ಯಗಳಿಗೆ ಅಶೋಕರ ಬದ್ಧತೆಯೇ ಅವರು ಕೈಗೊಂಡ ಎಲ್ಲ ರಾಜಕೀಯ ತೀರ್ಮಾನಗಳಿಗೆ ತಳಪಾಯ. ತಮ್ಮನ್ನು ಕೊನೇತನಕ ಸಮಾಜವಾದದ ವಿದ್ಯಾರ್ಥಿ ಎಂದೇ ಕರೆದುಕೊಂಡ ಅಶೋಕ ಮೆಹ್ತಾ ೧೯೮೪ರ ಡಿಸೆಂಬರ್ ೧೧ರಂದು ನಿಧನರಾದರು.

◆◆

೫

ಅಧ್ಯಾತ್ಮದ ಹಾದಿ ಹಿಡಿದ ಅಚ್ಯುತ ಪಟವರ್ಧನ್

ಡಿ.ಎಸ್.ನಾಗಭೂಷಣ

ಭಾರತದ ಸಮಾಜವಾದಿ ಚಳುವಳಿ ರಾಜಕೀಯ ತತ್ವಜ್ಞಾನ ಮತ್ತು ಹೋರಾಟಗಳ ಪಯಣವಾಗಿ ಬೆಳೆದಿದ್ದರೂ, ಹಲವರು ತಮ್ಮ ಈ ಪಯಣದ ದಿಕ್ಕನ್ನು ಮಧ್ಯೆ ಬದಲಿಸಿ ಶುದ್ಧ ತತ್ವಜ್ಞಾನದೆಡೆಗೆ ತಿರುಗಿಸಿಕೊಂಡು ನಡೆದದ್ದೂ ಉಂಟು. ಅವರಲ್ಲಿ ಅಚ್ಯುತ್ ಪಟವರ್ಧನ್ ಪ್ರಮುಖರೆಂದು ಹೇಳಬಹುದು. ಅನಿಬೆಸೆಂಟರ ಅಧ್ಯಾತ್ಮಿಕ ಆನಂದ ಮತ್ತು ತಂತ್ರಗಳ ಮೂಲಕ ಭಗವಂತನ ಸಾಕ್ಷಾತ್ಕಾರ ಮಾಡಿಕೊಳ್ಳಬಹುದೆಂದು ನಂಬುವ ಥಿಯೋಸಫಿ, ಅದೇ ಪಂಥಕ್ಕೆ ಸೇರಿದ್ದ ಜಿಡ್ಡು ಕೃಷ್ಣಮೂರ್ತಿಯವರ ಶಿಷ್ಯತ್ವ, ನಂತರ ಅವರೊಂದಿಗೆ ಭಿನ್ನಾಭಿಪ್ರಾಯ, ತದನಂತರ ಕಾಂಗ್ರೆಸ್ ಚಳುವಳಿಯ ಸಹವಾಸ, ಯೂರೋಪ್ ಪ್ರವಾಸದಲ್ಲಿ ಉಂಟಾದ ಸಮಾಜವಾದದ ಪ್ರಭಾವದಲ್ಲಿ ಗೆಳೆಯರೊಂದಿಗೆ ಸೇರಿ ಕಾಂಗ್ರೆಸ್ ಸಮಾಜವಾದಿ ಪಕ್ಷದ ಸ್ಥಾಪನೆ, ಬ್ರಿಟಿಷ್ ಪ್ರಭುತ್ವದ ವಿರುದ್ಧ ಹಿಂಸಾತ್ಮಕ ಹೋರಾಟ, ಸ್ವಾತಂತ್ರ್ಯೋತ್ತರ ಭಾರತದ ರಾಜಕಾರಣದಿಂದ ನಿರಾಶೆ, ಮತ್ತೆ ಅಧ್ಯಾತ್ಮಿಕ ವೈಚಾರಿಕತೆಯ ಹೊಸ ಅವತಾರ ತಾಳಿದ್ದ ಜೆ.ಕೃಷ್ಣಮೂರ್ತಿಯವರೊಡನೆ ಒಡನಾಟ, ಸಂವಾದ–ಸಂಘರ್ಷ ಮತ್ತು ತತ್ವಚಿಂತನೆ– ಇವು ಅಚ್ಯುತ್ ಪಟವರ್ಧನ್ ಅವರ ಸಾಹಸಮಯ ಬದುಕಿನ ವಿವಿಧ ಘಟ್ಟಗಳು.

ಮಹಾರಾಷ್ಟ್ರದ ಅಹಮದ್‌ನಗರದ ಆಗರ್ಭ ಶ್ರೀಮಂತ ಮನೆತನವೊಂದರಲ್ಲಿ ೧೯೦೫ರ ಫೆಬ್ರುವರಿ ಐದರಂದು ಜನಿಸಿದ ಅಚ್ಯುತ್, ಬಾಲ್ಯದಿಂದಲೇ ತನ್ನ ಕುಟುಂಬ

ಅನುಸರಿಸುತ್ತಿದ್ದ ಥಿಯೋಸಫಿಯಿಂದ ಪ್ರಭಾವಿತರಾದರು. ತಮ್ಮ ನಾಲ್ಕನೇ ವಯಸ್ಸಿನಲ್ಲಿ ತಮ್ಮ ತಂದೆ ಹರಿಕೇಶವ ಪಟವರ್ಧನ್ ಅವರನ್ನು ಕಳೆದುಕೊಂಡ ಅಚ್ಯುತ್, ತಮ್ಮ ಚಿಕ್ಕಪ್ಪ ಸೀತಾರಾಂ ಪಟವರ್ಧನ್ ಅವರಿಂದ ದತ್ತು ಮಗನಾಗಿ ಸ್ವೀಕೃತಗೊಂಡರು. ಅಹಮದ್‌ನಗರದಲ್ಲಿ ಶಾಲಾ ಶಿಕ್ಷಣ ಪೂರೈಸಿದ ಅವರು ಕಾಲೇಜು ಶಿಕ್ಷಣಕ್ಕೆಂದು ಹೋದದ್ದು ಡಾ. ಅನಿಬೆಸೆಂಟ್‌ರಿಂದ ಸ್ಥಾಪಿತವಾಗಿ ಥಿಯೋಸಫಿ ಅಧ್ಯಯನದ ಕೇಂದ್ರವೂ ಆಗಿದ್ದ ಬನಾರಸ್‌ನ ಸೆಂಟ್ರಲ್ ಹಿಂದೂ ಕಾಲೇಜಿಗೆ. ಅಲ್ಲಿ ಅವರು ಅರ್ಥಶಾಸ್ತ್ರ ವಿಷಯದಲ್ಲಿ ಉನ್ನತ ದರ್ಜೆಯಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿಗಳನ್ನು ಪಡೆದು, ಅದೇ ಕಾಲೇಜಿನಲ್ಲಿ ಕ್ರಮವಾಗಿ ಪ್ರಾಂಶುಪಾಲ ಮತ್ತು ಪ್ರಾಧ್ಯಾಪಕರಾಗಿದ್ದ ಡಾ. ಅರುಂಡೇಲ್ ಮತ್ತು ಡಾ. ತೆಲಾಂಗ್ ಅವರ ಪ್ರಭಾವದಿಂದ ಹೊರಬರಲಾಗದೆ ಅಲ್ಲಿಯೇ ೧೯೨೨ರಿಂದ ೧೯೩೨ರವರೆಗೆ ಅರ್ಥಶಾಸ್ತ್ರ ಪ್ರಾಧ್ಯಾಪಕ ರಾಗಿ ಕೆಲಸ ಮಾಡತೊಡಗಿದರು. ಜೊತೆಗೆ ಥಿಯೋಸಫಿ ಆಂದೋಲನದಿಂದ ಪ್ರವಾದಿತ್ವಕ್ಕೆ ಆಯ್ಕೆಯಾಗಿದ್ದ ಜಿಡ್ಡು ಕೃಷ್ಣಮೂರ್ತಿ ಅವರ ಅನುಯಾಯಿಯೂ ಆದರು.

ಆದರೆ ನಂತರದ ವರ್ಷಗಳಲ್ಲಿ ಥಿಯೋಸಫಿ ಆಂದೋಲನದಲ್ಲಿ ಬಿರುಕುಂಟಾಗಿ ಕೃಷ್ಣಮೂರ್ತಿ ಥಿಯೋಸಫಿ ಆಂದೋಲನವನ್ನು ತೊರೆದು ತಮ್ಮದೇ ತತ್ವಜ್ಞಾನದ ಅನ್ವೇಷಣೆಯ ಹಾದಿ ಹಿಡಿದು ಬ್ರಿಟನ್‌ಗೆ ಹೊರಟಾಗ ಅಚ್ಯುತ್ ಅವರ ಶಿಷ್ಯತ್ವವನ್ನು ತೊರೆದರು. ಸ್ವತಃ ಅಚ್ಯುತ್ ಅವರೂ ಒಂದೆರಡು ವರ್ಷಗಳ ಕಾಲ ಯೂರೋಪ್‌ನ ವಿವಿಧ ದೇಶಗಳ ಸಂದರ್ಶನ ಕೈಗೊಂಡರು. ಆ ಮುವ್ವತ್ತರ ದಶಕದಲ್ಲಿ ಆ ದೇಶಗಳಲ್ಲಿ ಗರಿಗೆದರುತ್ತಿದ್ದ ಸಮಾಜವಾದಿ ಆಂದೋಲನಗಳಿಂದ ಪ್ರಭಾವಿತರಾದ ಅವರು ಭಾರತಕ್ಕೆ ಹಿಂದಿರುಗಿದೊಡನೆ ಗಾಂಧಿ ನೇತೃತ್ವದ ಕಾಂಗ್ರೆಸ್ ಆಂದೋಲನವನ್ನು ಸೇರಿ ಅಸಹಕಾರ ಸತ್ಯಾಗ್ರಹಗಳಲ್ಲಿ ಭಾಗವಹಿಸಿ ಅನೇಕ ಬಾರಿ ಬ್ರಿಟಿಷ್ ಸರ್ಕಾರದಿಂದ ಬಂಧಿತರಾದರು.

ಇಂತಹ ಒಂದು ಬಂಧನದಲ್ಲಿ, ಜೆಪಿ, ಮಿನೂ ಮಸಾನಿ, ಅಶೋಕ ಮೆಹ್ತಾ, ಎನ್.ಜಿ. ಗೋರೆ ಮುಂತಾದ ಪ್ರಗತಿಶೀಲ ಕಾಂಗ್ರೆಸ್ಸಿಗರೊಂದಿಗೆ ನಾಸಿಕ್‌ನ ಸೆರೆಮನೆಯಲ್ಲಿದ್ದಾಗಲೇ ಇವರ ಪರಸ್ಪರ ಚರ್ಚೆಗಳ ಮಧ್ಯೆ ಕಾಂಗ್ರೆಸ್ ಸಮಾಜವಾದಿ ಪಕ್ಷದ ಕಲ್ಪನೆ ಹುಟ್ಟಿದ್ದು. ಹೀಗಾಗಿ ೧೯೩೪ರ ಅಕ್ಟೋಬರ್ ೨೧-೨೨ರಂದು ಮುಂಬೈನಲ್ಲಿ ಔಪಚಾರಿಕವಾಗಿ ಆರಂಭವಾದ ಕಾಂಗ್ರೆಸ್ ಸಮಾಜವಾದಿ ಪಕ್ಷದ ಸ್ಥಾಪಕ ಸದಸ್ಯರಲ್ಲಿ ಅಚ್ಯುತ್ ಪಟವರ್ಧನ್ ಅವರೂ ಒಬ್ಬರಾದರೆಂದು ಹೇಳಬಹುದು. ಪಕ್ಷದ ಸಂಘಟನೆಯಲ್ಲಿ ಹೆಚ್ಚು ತೊಡಗಿಕೊಳ್ಳದ ಅಚ್ಯುತ್, ಪಕ್ಷದ ಕಾರ್ಯಕರ್ತರಿಗಾಗಿ ಸಮಾಜವಾದಿ ತತ್ವ ಕುರಿತ ಅಧ್ಯಯನ ಶಿಬಿರಗಳನ್ನು ಸಂಯೋಜಿಸುವಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಇವರ ಅಧ್ಯಯನಶೀಲತೆ ಮತ್ತು ಕ್ರಿಯಾಶೀಲತೆಗಳನ್ನು ಗಮನಿಸಿದ ಜವಾಹರಲಾಲ್ ನೆಹ್ರೂ, ಒಮ್ಮೆ ಇವರನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ

ಸದಸ್ಯರನ್ನಾಗಿ ಆಯ್ಕೆ ಮಾಡಿಕೊಂಡರಾದರೂ, ಕಾಂಗ್ರೆಸ್ ರಾಜಕಾರಣದ ಕೆಲ ನಡೆಗಳನ್ನು ಒಪ್ಪಲಾಗದೆ ಲೋಹಿಯಾ ಅವರೊಂದಿಗೆ ರಾಜೀನಾಮೆ ನೀಡಿದರು.

ಅಚ್ಯುತ್ ಪಟವರ್ಧನ್ ಸ್ವಾತಂತ್ರ್ಯ ಹೋರಾಟದಲ್ಲಿ ನಿಜವಾದ ತಮ್ಮ ಅದ್ಭುತ ಸಂಘಟನಾ ಶಕ್ತಿ ಮತ್ತು ಸಾಹಸಗಳನ್ನು ಮೆರೆದದ್ದು, ೧೯೪೨ರ 'ಭಾರತ ಬಿಟ್ಟು ತೊಲಗಿ ಚಳುವಳಿ'ಯ ಕಾಲದಲ್ಲಿ. ಬ್ರಿಟಿಷ್ ಸರ್ಕಾರದ ಕಣ್ತಪ್ಪಿಸಿ ಲೋಹಿಯಾರೊಂದಿಗೆ ಭೂಗತರಾದ ಅವರು, ಲೋಹಿಯಾ–ಜೆಪಿ ಮುಂತಾದ ಸಮಾಜವಾದಿಗಳು ತಮ್ಮ ಭೂಗತ ಚಟುವಟಿಕೆಗಳ ಮಧ್ಯೆ ಬಂಧಿತರಾದ ಮೇಲೂ, ಬಂಧನದಿಂದ ತಪ್ಪಿಸಿಕೊಂಡು ಆಗಿನ ಮುಂಬೈ ಪ್ರಾಂತ್ಯದ ಸತಾರಾ ಪ್ರದೇಶದಲ್ಲಿ ಜನರನ್ನು ಸಂಘಟಿಸಿ ಸರ್ಕಾರಿ ಕಛೇರಿಗಳ ಮೇಲೆ ದಾಳಿ ಮಾಡಿ ಅಲ್ಲಿದ್ದ ಸಂಪತ್ತನ್ನು ಲೂಟಿ ಮಾಡತೊಡಗಿ ಸರ್ಕಾರದ ಧೃತಿಗೆಡಿಸಿದರು. ನಾನಾ ಪಾಟೀಲನೆಂಬ ಚಾಣಾಕ್ಷ ಮತ್ತು ಮಹಾಸಾಹಸಿಯೊಬ್ಬನ ತಂಡದ ಮೂಲಕ ಸಿರಿವಂತರ ಸಂಪತ್ತನ್ನು ಲೂಟಿ ಮಾಡಿ ಬಡವರಿಗೆ ಹಂಚುವ ಸಮಾನಾಂತರ ಸರ್ಕಾರವೊಂದನ್ನು ಸ್ಥಾಪಿಸುವಲ್ಲಿ ಅಚ್ಯುತ್ ಯಶಸ್ವಿಯಾಗಿದ್ದರು. ಆ ಮೂಲಕ ಅವರಿಗೆ 'ಸತಾರಾದ ಸಿಂಹ' ಎಂಬ ಬಿರುದೂ ಬಂದಿತ್ತು!

ಸ್ವಾತಂತ್ರ್ಯಾನಂತರದ ಭಾರತದ ರಾಜಕಾರಣ ತಮ್ಮ ಆಶಯದಂತೆ ರೂಪುಗೊಳ್ಳದಿದ್ದುದನ್ನು ಗಮನಿಸಿದ ಅಚ್ಯುತ್ ತಮ್ಮ ಸಮಾನ ಮನಸ್ಕ ಸಮಾಜವಾದಿ ಗೆಳೆಯರಂತೆಯೇ ಹತಾಶಗೊಂಡರು. ಕಾಂಗ್ರೆಸ್‌ನಿಂದ ಬೇರ್ಪಟ್ಟು ಸ್ವತಂತ್ರ ಸಮಾಜವಾದಿ ಪಕ್ಷವನ್ನು ಸ್ಥಾಪಿಸುವಲ್ಲಿ ಕೈಜೋಡಿಸಿದರು. ಇದೇ ವೇಳೆಯಲ್ಲಿ ತಮ್ಮ ಮಾಜಿ ಗುರು ಜೆ.ಕೃಷ್ಣಮೂರ್ತಿ ಭಾರತಕ್ಕೆ ವಾಪಸ್ ಬಂದು ಬೌದ್ಧ ತತ್ವದಿಂದ ಸ್ಫೂರ್ತಿ ಪಡೆದ ತಮ್ಮದೇ ತತ್ವಜ್ಞಾನವನ್ನು ಪ್ರಚುರಪಡಿಸತೊಡಗಿದ್ದನ್ನೂ ಗಮನಿಸಿದರು. ಮನುಷ್ಯನ ಬಿಡುಗಡೆ ಆಗುವುದು ರಾಜಕೀಯ ಕ್ರಾಂತಿಯ ಮೂಲಕವೂ ಅಲ್ಲ, ವೈಜ್ಞಾನಿಕ ಅನ್ವೇಷಣೆಗಳ ಮೂಲಕವೂ ಅಲ್ಲ ಅಥವಾ ಸಮಾಜ ಸುಧಾರಣೆಗಳ ಮೂಲಕವೂ ಅಲ್ಲ; ಬದಲಿಗೆ ಮನುಷ್ಯನ ಮನಸ್ಸಿನೊಳಗಿನ ಕ್ರಾಂತಿಯ ಮೂಲಕ ಎಂಬ ಅವರ ಮಾತು ಮತ್ತು ಅದರ ವಿವರಣೆಗಳು ಅವರನ್ನು ಸೆಳೆಯತೊಡಗಿದವು. ೧೯೪೫ರಲ್ಲಿ ಹಿರೋಶಿಮಾ–ನಾಗಸಾಕಿಗಳ ಮೇಲೆ ಅಮೆರಿಕಾದಿಂದ ಅಣುಬಾಂಬುಗಳು ಬಿದ್ದು ಆದ ಮಾನವ ದುರಂತ ಅವರನ್ನು ನಡುಗಿಸಿತು. ರಾಜಕಾರಣ ಬೇಸರ ತರಿಸತೊಡಗಿತ್ತು. ಅವರು ಮತ್ತೆ ಜೆಕೆಯವರೊಂದಿಗೆ ಸಂವಾದಗಳಲ್ಲಿ ತೊಡಗಿದರು. ಹುಟ್ಟು, ಸಾವು ಮತ್ತು ಕಾಮ ಅವರ ಸಂವಾದಗಳ ಮುಖ್ಯ ವಸ್ತುಗಳಾಗಿರುತ್ತಿದ್ದವು.

ಈ ಸಂವಾದಗಳು ಅಚ್ಯುತ್‌ರನ್ನು ರಾಜಕಾರಣದಿಂದ ಕ್ರಮೇಣ ದೂರ ಸರಿಯುವಂತೆ ಮಾಡಿ ಕೊನೆಗೆ ಅವರು ಮತ್ತೆ ಜೆಕೆಯವರನ್ನು ಸೇರುವಂತೆ ಪ್ರಭಾವಿಸಿದವು. ೧೯೫೦ರಲ್ಲಿ ರಾಜಕಾರಣಕ್ಕೆ ವಿದಾಯ ಹೇಳಿ ಮತ್ತೆ ತಾವು ಓದಿದ್ದ ಬನಾರಸ್‌ನ ಸೆಂಟ್ರಲ್ ಹಿಂದೂ ಕಾಲೇಜಿನಲ್ಲಿ ಅರ್ಥಶಾಸ್ತ್ರ ಪ್ರಾಧ್ಯಾಪಕರಾಗಿ ೧೯೬೭ರವರೆಗೆ ಕೆಲಸ ಮಾಡಿದರು.

ನಂತರ ಜೆ.ಕೃಷ್ಣಮೂರ್ತಿಯವರೊಂದಿಗೆ ಹಲವು ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಲೇ ಅವರೊಂದಿಗೇ ಉಳಿದು ದೇಶದ ಹಲವು ಕಡೆ ಸಮಗ್ರ ಶಿಕ್ಷಣಕ್ಕಾಗಿ ಅತ್ಯುತ್ತಮ ಶಾಲೆಗಳನ್ನು ತೆರೆಯುವ ಆಂದೋಲನದಲ್ಲಿ ಭಾಗವಹಿಸಿದರು. ಸಮಾಜವಾದ ಮತ್ತು ಅಧ್ಯಾತ್ಮ ಕುರಿತಂತೆ ಹಲವು ಪುಸ್ತಕ ಹಾಗೂ ಕರಪತ್ರಗಳನ್ನು ಬರೆದರು. ಜೆಕೆಯವರ ನಿಧನದ ನಂತರ ಪುಣೆಗೆ ಹೋಗಿ ನೆಲೆಸಿ, ನಿಧಾನವಾಗಿ ಸಾರ್ವಜನಿಕ ಜೀವನದಿಂದ ದೂರ ಸರಿದು ಹೆಚ್ಚು ಮೌನಿಯಾದ ಅವರು ೧೯೯೨ ಆಗಸ್ಟ್ ೫ರಂದು ತಮ್ಮ ಕೊನೆಯುಸಿರೆಳೆದರು.

◆◆

೬

ಬಹುಮುಖ ಪ್ರತಿಭೆಯ ಕಮಲಾದೇವಿ

ಮಂಜುಳಾ ಎಂ. ರಾಜು

ಭಾರತೀಯ ಸಮಾಜವಾದಿ ಆಂದೋಲನದ ಇತಿಹಾದಲ್ಲಿ ಎದ್ದು ಕಾಣುವ ಎರಡು ಧೀಮಂತ ಮಹಿಳೆಯರ ಚಿತ್ರಗಳೆಂದರೆ, ಒಂದು ಅರುಣಾ ಅಸೀಫ್ ಅಲಿಯವರದ್ದು, ಇನ್ನೊಂದು ಕಮಲಾದೇವಿ ಚಟ್ಟೋಪಾಧ್ಯಾಯರದ್ದು. ಇಬ್ಬರೂ ತಮ್ಮ ಬದುಕಿನ ವಿವಿಧ ಕಾಲಘಟ್ಟಗಳಲ್ಲಿ ಸಮಾಜವಾದಿ ಆಂದೋಲನದೊಂದಿಗೆ ಸಂಪರ್ಕ ಕಳೆದುಕೊಂಡರಾದರೂ, ನಂತರದ ಬದುಕಿನಲ್ಲೂ ಅವರು ಬೆಳಗಿದ್ದು ಸಮಾಜವಾದಿ ಮೌಲ್ಯಗಳನ್ನೇ ಎಂದು ಹೇಳಬಹುದು. ಅದೇನೇ ಇರಲಿ, ಈ ಇಬ್ಬರು ಮಹಿಳಾ ಸಮಾಜವಾದಿಗಳಲ್ಲಿ ನಮಗೆ ಹೆಚ್ಚು ಮುಖ್ಯವೆನಿಸುವವರು ಕಮಲಾ ದೇವಿಯವರು. ಏಕೆಂದರೆ, ಅವರು ಕನ್ನಡಿಗರು. ಅದಕ್ಕೂ ಮುಖ್ಯವಾಗಿ, ಭಾರತೀಯ ಸಮಾಜವಾದಿ ಆಂದೋಲನದ ಆರಂಭದ ದಿನಗಳಲ್ಲೇ ಜಯಪ್ರಕಾಶ್ ನಾರಾಯಣರ ಮಾರ್ಗದರ್ಶನದಲ್ಲಿ ಕರ್ನಾಟಕದಲ್ಲಿ ಸಮಾಜವಾದಿ ಆಂದೋಲನ ಮತ್ತು ಪಕ್ಷವನ್ನು ಕಟ್ಟಲು ಶ್ರಮಿಸಿದವರು. ಕನ್ನಡದ ಮೊದಲ ಸಮಾಜವಾದಿ ಪತ್ರಿಕೆ 'ಜಾಗೃತಿ'ಯ ಅಡಿಗಲ್ಲು ಹಾಕಿದವರು.

ಮಂಗಳೂರಿನ ಪ್ರತಿಷ್ಠಿತ ಶ್ರೀಮಂತ ಸಾರಸ್ವತ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದ (೧೯೦೩) ಕಮಲಾದೇವಿ, ಆ ಕಾಲಕ್ಕೇ ಆಧುನಿಕ ಮನೋಭಾವವನ್ನು ರೂಢಿಸಿ ಕೊಂಡಿದ್ದ ತಾಯಿ ಗಿರಿಜಾಬಾಯಿ ಮತ್ತು ವಿಧವೆಯಾಗಿದ್ದೂ ದಿಟ್ಟೆಯಾಗಿ ಸಾರ್ವಜನಿಕ ಜೀವನದಲ್ಲಿ ತುಂಬು ಉತ್ಸಾಹದಿಂದ ಪಾಲ್ಗೊಳ್ಳುತ್ತಿದ್ದ ಅಜ್ಜಿಯ ಬದುಕಿನಿಂದ ಆಳವಾಗಿ

ಪ್ರಭಾವಿತರಾಗಿದ್ದರು. ಆಗ ಮಂಗಳೂರಿಗೆ ಆಗಮಿಸಿದ್ದ ಅನಿಬೆಸೆಂಟ್, ಗಾಂಧೀಜಿಯವರ ಭೇಟಿಯಿಂದ ಅವರಲ್ಲಿ ಸ್ವಾತಂತ್ರ್ಯದ ಬಯಕೆ, ರಾಜಕೀಯ ಚಿಂತನೆಗಳು ಗರಿಗೆದರಿದ್ದವು. ತನ್ನ ಕುಟುಂಬದಲ್ಲೇ ಆದ ಮಹಿಳೆಯರ ಮೇಲಿನ ದೌರ್ಜನ್ಯ, ಆರ್ಥಿಕ ಸಂಕಷ್ಟ, ಕೌಟುಂಬಿಕ ಸಮಸ್ಯೆಗಳಿಂದ ಮಹಿಳೆಯರ ಪರ ಹೋರಾಡುವ ಕೆಚ್ಚು ಮೂಡಿತು. ಹಾಗಾಗಿಯೇ ಅವರು ಬಾಲ್ಯ ವಿವಾಹಕ್ಕೆ ತುತ್ತಾಗಿ, ನಂತರ ಬಾಲ ವಿಧವೆಯಾಗಿ, ಅದರಿಂದ ವಿಚಲಿತರಾಗದೆ ಸ್ವಲ್ಪಕಾಲ ರಂಗನಟಿ ಮತ್ತು ಮೂಕಿ ಚಲನಚಿತ್ರ ನಟಿಯಾಗಿ ತಮ್ಮ ಬದುಕನ್ನು ಪುನರ್ಸಂಘಟಿಸಿಕೊಂಡು, ಆನಂತರ ಉನ್ನತ ವಿದ್ಯಾಭ್ಯಾಸಕ್ಕೆಂದು ಮದ್ರಾಸ್‌ಗೆ ತರಳಿ ಅಲ್ಲಿ ವಿಚಿತ್ರ ಪ್ರತಿಭೆಯ ಹರೀಂದ್ರನಾಥ ಚಟ್ಟೋಪಾಧ್ಯಾಯರನ್ನು ಪ್ರೀತಿಸಿ ಮದುವೆಯಾಗಿ, ಆ ವಿವಾಹದಲ್ಲೂ ನೆಮ್ಮದಿ ಕಾಣದೆ ಮುಂದೆ ಗಾಂಧಿ ಪ್ರಭಾವದಲ್ಲಿ ಹೊಸ ಬದುಕನ್ನು ಕಟ್ಟಿಕೊಳ್ಳುವವರೆಗಿನ ಜೀವನ ವೃತ್ತಾಂತದ ಹಲವು ಏಳುಬೀಳುಗಳನ್ನು ಸಹಿಸಿ ಯಶಸ್ವಿಯಾಗಲು ಸಾಧ್ಯವಾಯಿತು.

೧೯೨೪ರಲ್ಲಿ ಬೆಳಗಾವಿಯಲ್ಲಿ ನಡೆದ ಅಖಿಲಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಸ್ವಯಂಸೇವಕರಾಗಿ ಭಾಗವಹಿಸಿದ್ದೇ ಕಮಲಾದೇವಿಯವರು ಗಾಂಧೀಜಿ ನಡೆಸಿದ್ದ ರಾಷ್ಟ್ರೀಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಲು ಪ್ರೇರೇಪಣೆಯಾಯಿತು. ೧೯೩೦ ಜನವರಿ ೨೬-ಪೂರ್ಣ ಸ್ವರಾಜ್ಯ ದಿನದಂದು ಮುಂಬೈನ ಆಜಾದ್ ಮೈದಾನದಲ್ಲಿ ನಡೆದ ಗಲಭೆಯಲ್ಲಿ ಕೈಯಲ್ಲಿ ರಕ್ತ ಸುರಿಯುತ್ತಿದ್ದರೂ ಲೆಕ್ಕಿಸದೇ ತ್ರಿವರ್ಣ ಧ್ವಜದ ಗೌರವವನ್ನು ಕಾಪಾಡಿದರು. ಉಪ್ಪಿನ ಸತ್ಯಾಗ್ರಹದಲ್ಲಿ ಮಹಿಳೆಯರನ್ನು ದೂರವಿಟ್ಟ ಗಾಂಧೀಜಿಯವರೊಂದಿಗೆ ವಾದ ಮಾಡಿ ಮಹಿಳೆಯರೂ ಈ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳಲು ಅನುವು ಮಾಡಿಕೊಟ್ಟರು. ರಾಷ್ಟ್ರೀಯ ಚಳುವಳಿಯಲ್ಲಿ ನಾಲ್ಕು ಬಾರಿ ಜೈಲು ಸೇರುವಂತಾದ ಕಮಲಾದೇವಿ, ಬ್ರಿಟಿಷ್ ಪ್ರಭುತ್ವದ ಮೊದಲ ಮಹಿಳಾ ರಾಜಕೀಯ ಕೈದಿ ಎನಿಸಿಕೊಂಡರು. ಹಾಗೇ ಜೈಲಿನಲ್ಲಿ ತೀವ್ರ ಅನಾರೋಗ್ಯಕ್ಕೂ ತುತ್ತಾದರು.

೧೯೩೪ರ ಸೆಪ್ಟೆಂಬರ್ ತಿಂಗಳಲ್ಲಿ ಕಮಲಾದೇವಿಯವರು ಬಂಧಮುಕ್ತರಾದರು. ಜಯಪ್ರಕಾಶ್ ನಾರಾಯಣ್‌ರವರ ನೇತೃತ್ವದಲ್ಲಿ ಕಾಂಗ್ರೆಸ್‌ನೊಳಗೇ ಸ್ಥಾಪಿತವಾದ ಸಮಾಜವಾದಿ ಕಾಂಗ್ರೆಸ್ ಪಕ್ಷ ಅವರನ್ನು ಆಕರ್ಷಿಸಿತು. ಇದು ಗಾಂಧೀಜಿಯೊಂದಿಗೆ ಮಹಿಳೆಯರು ಮತ್ತು ಇತರೆ ಶೋಷಿತ ವರ್ಗದವರ ಉನ್ನತಿಗೆ ಅವಶ್ಯಕವಾದ ವಿಶೇಷ ರಾಜಕೀಯ ಕಾರ್ಯಕ್ರಮ ಮತ್ತು ಮಾರ್ಗಗಳ ಬಗ್ಗೆ ತಾತ್ವಿಕವಾಗಿ ಜಗಳವಾಡಲು ಒಂದು ವೇದಿಕೆ ಸಿಕ್ಕಂತಾಯಿತು. ಕಮಲಾರ ಸ್ವತಂತ್ರ ನಡೆನುಡಿಗಳನ್ನು 'ಅತಿ' ಎಂದು ಟೀಕಿಸುತ್ತಿದ್ದ ಗಾಂಧೀಜಿಗೆ ಸೂಕ್ತ ಉತ್ತರ ಕೊಡಲು ಜೆಪಿ, ಲೋಹಿಯಾ, ಪಟವರ್ಧನ್, ಮುಂತಾದ ಪ್ರಖರ ಯುವ ಚಿಂತಕರ ಪಡೆಯ ಬೆಂಬಲವೂ ಅವರಿಗೆ ಇಲ್ಲಿ ದೊರಕಿ ಅವರ ವ್ಯಕ್ತಿತ್ವ ಇನ್ನಷ್ಟು ಸಮೃದ್ಧವಾಗಲು ಸಹಾಯಕವಾಯಿತು. ಅವರು

ಈ ಸಂಘಟನೆಯಲ್ಲಿ ತಮ್ಮ ವಿಚಾರಶೀಲತೆ, ದಿಟ್ಟತನ ಮತ್ತು ಪರಿಶ್ರಮಗಳಿಂದ ಎಷ್ಟು ಕ್ಷಿಪ್ರ ಗತಿಯಲ್ಲಿ ತಮ್ಮ ಛಾಪನ್ನು ಮೂಡಿಸಿದರೆಂದರೆ, ಅವರು ೧೯೩೬ರಲ್ಲಿ ಸಮಾಜವಾದಿಗಳ ಅಧಿವೇಶನದ ಅಧ್ಯಕ್ಷತೆ ವಹಿಸಲು ಅವರನ್ನು ಆರಿಸಲಾಯಿತು.

ಈ ಮಧ್ಯೆ ಮಗನ ಶಿಕ್ಷಣದ ಸಂಬಂಧವಾಗಿ ವಿದೇಶಕ್ಕೆ ತೆರಳಿದ್ದ ಕಮಲಾರವರು ೧೯೪೧ರಲ್ಲಿ ತಿರುಗಿ ಬಂದು ಮತ್ತೆ ಸ್ವಾತಂತ್ರ್ಯ ಆಂದೋಲನದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡರು. ೧೯೪೨ರ 'ಭಾರತ ಬಿಟ್ಟು ತೊಲಗಿ' ಆಂದೋಲನದಲ್ಲಿ ಸಮಾಜವಾದಿಗಳು ನಡೆಸಿದ ರೋಚಕ ಭೂಗತ ಹೋರಾಟದಲ್ಲಿ ಕಮಲಾರವರ ಪಾತ್ರವೂ ಬಹು ದೊಡ್ಡದು. ನಂತರ ದೇಶದ ವಿವಿಧೆಡೆ ಸಮಾಜವಾದಿ ಆಂದೋಲನ ವನ್ನು ಸಂಘಟಿಸುವಲ್ಲಿ ತೊಡಗಿಕೊಂಡ ಅವರು ಕರ್ನಾಟಕದಲ್ಲಿ ಕೆ.ಕೆ.ಶೆಟ್ಟಿ, ಅಮ್ಮೆಂಬಳ ಬಾಳಪ್ಪ, ಆನಂದ, ಕೆ.ಎಸ್. ಕಾರಂತ, ಉಮಾಬಾಯಿ ಕುಂದಾಪುರ, ಸೋಗಾಲ ನಾಗಭೂಷಣ, ಭಾಸು ಕೃಷ್ಣಮೂರ್ತಿ, ಖಾದ್ರಿ ಶಾಮಣ್ಣ ಮುಂತಾದವರನ್ನೊಳಗೊಂಡ ಯುವಪಡೆಯೊಂದನ್ನು ನಿರ್ಮಿಸಿ, ಮಂಗಳೂರು, ಬೆಂಗಳೂರು ಮತ್ತು ಹುಬ್ಬಳ್ಳಿಗಳಲ್ಲಿ ಸಮಾಜವಾದಿ ಪಕ್ಷದ ಚಟುವಟಿಕೆಗಳು ಆರಂಭವಾಗಲು ಕಾರಣರಾದರು.

ನಂತರ ಸ್ವಾತಂತ್ರ್ಯೋದಯ-ರಾಷ್ಟ್ರವಿಭಜನೆಯ ಸಂದರ್ಭದಲ್ಲಿ ಭುಗಿಲೆದ್ದ ಕೋಮುಗಲಭೆಗಳು ದೇಶದ ಅನೇಕ ಕಡೆ ನಿರಾಶ್ರಿತರ ಬೃಹತ್ ಸಮಸ್ಯೆಯನ್ನು ಸೃಷ್ಟಿಸಿದಾಗ ಕಮಲಾದೇವಿಯವರು ದೆಹಲಿ ಮತ್ತು ಅದರ ಸುತ್ತಮುತ್ತಲ ಪ್ರದೇಶಗಳಲ್ಲಿ ನಡೆಸಿದ ಪರಿಹಾರ ಮತ್ತು ಪುನರ್ವಸತಿ ಕೆಲಸ ಗಾಂಧೀಜಿಯವರ ಗಮನ ಸೆಳೆಯಿತು. ಅವರ ಸಹಾಯ ಮತ್ತು ಪ್ರೋತ್ಸಾಹಗಳಿಂದ ಕಮಲಾದೇವಿಯವರು ತಾವು ಈಗಾಗಲೇ ಸಂದರ್ಶಿಸಿದ್ದ ನಾರ್ವೆ, ಸ್ವೀಡನ್, ಡೆನ್ಮಾರ್ಕ್ ಮತ್ತು ಚೀನಾಗಳಲ್ಲಿ ಸಹಕಾರೀ ತತ್ವದ ಮೇಲೆ ನಡೆಯುತ್ತಿದ್ದ ಒಕ್ಕಲುತನ, ಕೈಗಾರಿಕೋದ್ಯಮಗಳ ಮಾದರಿಗಳನ್ನು ಇಲ್ಲಿಯೂ ಅಳವಡಿಸುವ ಪ್ರಯತ್ನ ಮಾಡಿದರು. ಭಾರತೀಯ ಸಹಕಾರ ಸಂಘವು ಜನ್ಮತಾಳಿತು. ಇಂದಿನ ಫರೀದಾಬಾದ್ ನಗರ ಕಮಲಾರ ಇಂತಹ ಪರಿಶ್ರಮದ ಫಲವೇ ಆಗಿದೆ. ಆ ದಿನಗಳಲ್ಲಿ ಹೀಗೆ ರಾಜಕಾರಣಕ್ಕಿಂತ ಹೆಚ್ಚಾಗಿ ಸಾರ್ವಜನಿಕ ಸೇವೆಯಲ್ಲಿ ತೊಡಗಿಕೊಂಡು ಅದರಲ್ಲಿಯೇ ತೃಪ್ತಿ ಪಡೆಯಲಾರಂಭಿಸಿದ ಕಮಲಾರನ್ನು ಗಾಂಧೀಜಿಯ ಆಕಸ್ಮಿಕ ಸಾವು ಕಂಗೆಡಿಸಿತು. ರಾಜಕಾರಣದಲ್ಲಿ ಅವರ ಆಸಕ್ತಿ ಕಡಿಮೆಯಾಗತೊಡಗಿತು. ಕಾಂಗ್ರೆಸ್ ಕೂಡ ಅಧಿಕಾರ ರಾಜಕಾರಣದಲ್ಲಿ ಮುಳುಗಿ ಭ್ರಷ್ಟವಾಗತೊಡಗಿತ್ತು. ಸಮಾಜವಾದಿಗಳು ಕಾಂಗ್ರೆಸ್ಸಿನಿಂದ ಹೊರಬಂದ ಮೇಲೂ ಒಗ್ಗಟ್ಟಾಗಿರಲಾರದೆ ಕಲಹಗಳು ಆರಂಭವಾಗಿದ್ದವು. ಇದರಿಂದ ಬೇಸತ್ತ ಅವರು ೫೦ರ ದಶಕದ ಕೊನೆಯ ಹೊತ್ತಿಗೆ ರಾಜಕಾರಣಕ್ಕೆ ಸಂಪೂರ್ಣ ವಿದಾಯ ಹೇಳಿದರು.

ಆನಂತರ ಅವರು ಆಸಕ್ತಿ ವಹಿಸಿದ್ದು ನಮ್ಮ ಪಾರಂಪರಿಕ ಮತ್ತು ಜನಪದ ಕಲೆ ಮತ್ತು ಕರಕೌಶಲ್ಯಗಳ ಅಧ್ಯಯನ ಮತ್ತು ಸಂರಕ್ಷಣೆಯ ಕಡೆಗೆ. ಎಪ್ಪತ್ತಾರರ ವಯಸ್ಸಿನಲ್ಲೂ

ಅವರು ದೇಶದ ಮೂಲೆಮೂಲೆಗಳ ಹಳ್ಳಿಹಳ್ಳಿಗಳನ್ನು ತಿರುಗಿ ಅಳಿವಿನಂಚಿನಲ್ಲಿದ್ದ ಭಾರತೀಯ ಕರಕೌಶಲ್ಯಗಳ ಸಂರಕ್ಷಣೆಯ ಸಾಹಸ ಕೈಗೊಂಡರು. ಇದರ ಫಲವಾಗಿ ಭಾರತ ಸರ್ಕಾರದ ಆಶ್ರಯದಲ್ಲಿ ಭಾರತೀಯ ಕರಕುಶಲ ಅಭಿವೃದ್ಧಿ ಮಂಡಳಿ ಅಸ್ತಿತ್ವಕ್ಕೆ ಬಂದು ಅವರು ಅಧ್ಯಕ್ಷರಾದರು. ಮಹಾಬಲಿಪುರದ ಶಿಲ್ಪಕಲಾ ಕಾಲೇಜು ಸ್ಥಾಪನೆ ಇವರ ಒಂದು ದೊಡ್ಡ ಸಾಧನೆ. ಇದಲ್ಲದೆ ಇಂದು ಕಾಳಹಸ್ತಿಯ ಕಲಂಕಾರಿ ಕಲೆ, ನಂದ್ರಾ, ಪೂಚಂಪಲ್ಲಿ ಸೀರೆಗಳು, ಜೈಪುರದ ನೀಲಿ ಮಡಕೆಗಳು, ತೋಡಾ ಕಸೂತಿ ಕಲೆಗಳೆಲ್ಲ ನಮ್ಮ ಮಧ್ಯೆ ಜೀವಂತವಾಗಿದ್ದರೆ ಅದರ ಹಿಂದೆ ಇರುವುದು ಕಮಲಾದೇವಿಯವರ ಪರಿಶ್ರಮ. ಹಾಗೇ ದೆಹಲಿಯ ರಾಷ್ಟ್ರೀಯ ನಾಟಕಶಾಲೆಯ ಸ್ಥಾಪನೆಗೂ ಇವರೇ ಸ್ಫೂರ್ತಿ.

ಆಧುನಿಕ ಭಾರತದ ಮಹಿಳಾ ಇತಿಹಾಸದಲ್ಲಿ ತಮ್ಮ ಬಹುಮುಖ ಪ್ರತಿಭೆ ಮತ್ತು ಸೇವೆಯ ಮೂಲಕ ಅನುಪಮ ಸಾಧಕಿ ಎನಿಸಿದ ಈ ಕನ್ನಡಿತಿ ತಮ್ಮ ೮೫ನೇ ವಯಸ್ಸಿನಲ್ಲಿ (೧೯೮೮) ನಮ್ಮನ್ನಗಲಿ ಹೋದರು.

(ಸಂಗ್ರಹಾನುವಾದ)

◆◆

೭

ನಿಷ್ಠುರ ಆದರ್ಶವಾದಿ ನಾನಾಸಾಹೇಬ ಗೋರೆ

ಪ್ರೊ. ಹನುಮಂತ

ಭಾರತದ ಸ್ವಾತಂತ್ರ್ಯ ಆಂದೋಲನದೊಳಗಡೆಯಿಂದಲೇ ಉಗಮಗೊಂಡ ಕಾಂಗ್ರೆಸ್ ಸಮಾಜವಾದಿ ಪಕ್ಷದ ಸಂಸ್ಥಾಪಕರಲ್ಲಿ ಒಬ್ಬರಾದ ನಾರಾಯಣ ಗಣೇಶ ಗೋರೆಯವರು ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯ ಹಿದಲಾದಲ್ಲಿ ೧೫ ಜೂನ್ ೧೯೦೭ರಲ್ಲಿ ಮಹಾ ಮಡಿವಂತ ಚಿತ್‌ಪಾವನ ಬ್ರಾಹ್ಮಣ ಕುಟುಂಬವೊಂದರಲ್ಲಿ ಹುಟ್ಟಿದರು. ಅವರು ನಾನಾ ಸಾಹೇಬ್ ಗೋರೆಯೆಂದೇ ರಾಷ್ಟ್ರಮಟ್ಟದಲ್ಲಿ ಚಿರಪರಿಚಿತರು.

ಏಳು ಬೀಳುಗಳನ್ನು ಕಂಡ ಸಮಾಜವಾದಿ ಪಕ್ಷ ಆಚಾರ್ಯ ನರೇಂದ್ರ ದೇವರ ಸಾವನ್ನು ಕಂಡಿತು, ಜೆ.ಪಿ. ಸರ್ವೋದಯಕ್ಕೆ ಹೋದರೆ, ಲೋಹಿಯಾ ಪಕ್ಷ ಬಿಟ್ಟು ಮತ್ತೊಂದು ಪಕ್ಷ ಕಟ್ಟಿದರು. ಅಶೋಕ ಮೆಹ್ತಾ ಕಾಂಗ್ರೆಸ್ ಸೇರಿದರೆ, ಕಮಲಾದೇವಿ ಚಟ್ಟೋಪಾಧ್ಯಾಯ ಮತ್ತು ಅಚ್ಯುತ ಪಟವರ್ಧನರು ರಾಜಕೀಯ ಸನ್ಯಾಸ ತಳೆದರು. ಆದರೆ ಎನ್.ಜಿ. ಗೋರೆಯವರು ಕಾಂಗ್ರೆಸ್ ಸಮಾಜವಾದಿ ಪಕ್ಷದ ಮೊದಲ ಜಂಟಿ ಕಾರ್ಯದರ್ಶಿ, ೧೯೫೩-೫೪ರಲ್ಲಿ ಪ್ರಜಾ ಸಮಾಜವಾದಿ ಪಕ್ಷದ ಅಧ್ಯಕ್ಷರಾಗಿ ೧೯೭೭ರಲ್ಲಿ ಸಮಾಜವಾದಿ ಪಕ್ಷ ಜನತಾ ಪಕ್ಷದಲ್ಲಿ ವಿಲೀನವಾಗುವವರೆಗೆ ಪಕ್ಷ ಕಟ್ಟಿ ಬೆಳೆಸಿದ ನಿಷ್ಠಾವಂತ ಸಮಾಜವಾದಿ ನಾಯಕರು.

ಅಸ್ಪೃಶ್ಯ (ಮಹರ್)ಬಾಲಕನೊಬ್ಬ ಗೋರೆ ಮತ್ತು ಅವರ ತಂದೆಯ ಮೇಲೆ ನೆರಳು ಬೀಳಬಾರದೆಂದು ಬಾಗಿ ಕುಳಿತುಕೊಂಡ ಘಟನೆ, ಬಾಲವಿಧವೆಯರನ್ನು ತಲೆ ಬೋಳಿಸಿ, ಬಿಳಿಸೀರೆ ಉಡಿಸಿದ ಘಟನೆಗಳು ಗೋರೆಯವರನ್ನು ಗೊಡ್ಡು ಬ್ರಾಹ್ಮಣ್ಯ

ದಿಂದ ಹೊರಬಂದು ಪ್ರಗತಿಪರ ವಿಚಾರವಾದಿ ಯುವಕನನ್ನಾಗಿ ಮಾರ್ಪಡಿಸಿದವು. ಅವರು ತಾವು ತೊಟ್ಟಿದ್ದ ಜನಿವಾರವನ್ನು ಕಿತ್ತು ಹಾಕಿದರು ಮತ್ತು ವಯಸ್ಸಿನಲ್ಲಿ ತಮಗಿಂತ ಹಿರಿಯರಾದ ಬಾಲವಿಧವೆ ಸುಮತಿಬಾಯಿಯನ್ನು ತಂದೆ-ತಾಯಿಗಳ ವಿರೋಧವನ್ನು ಲೆಕ್ಕಿಸದೆ ಮದುವೆಯಾದರು.

ಗೋರೆಯವರು ೨೧ರ ಹರೆಯದಲ್ಲಿ ಹಿರಿಯ ಸಮಾಜವಾದಿ ಯೂಸುಫ್ ಮೆಹರ್ ಅಲಿಯವರು ಪ್ರಾರಂಭಿಸಿದ ಇಂಡಿಯಾ ಯೂತ್ ಲೀಗ್ ಸೇರುವ ಮೂಲಕ ತಮ್ಮ ರಾಜಕೀಯ ಜೀವನ ಶುರು ಮಾಡಿದರು. ೧೯೨೭ರಲ್ಲಿ ಗಾಂಧಿ ದಂಡಿಯಾತ್ರೆ ಮೂಲಕ ಉಪ್ಪಿನ ಸತ್ಯಾಗ್ರಹ ಆರಂಭಿಸಿದಾಗ ಗೋರೆ ತಮ್ಮ ವಿದ್ಯಾಭ್ಯಾಸ ತೊರೆದು ಚಳುವಳಿಯಲ್ಲಿ ಗೆಳೆಯರಾದ ಎಸ್.ಎಂ. ಜೋಷಿ, ಶಿರುಭಾವು ಲಿಮಯೆಯ ವರೊಂದಿಗೆ ಮಹಾರಾಷ್ಟ್ರದ ಆಲಿಬಾಗ್ ಕಡಲ ತೀರದಲ್ಲಿ ಉಪ್ಪಿನ ಸತ್ಯಾಗ್ರಹ ನಡೆಸಿದರು.

ಗಾಂಧಿಯವರನ್ನು ಯರವಾಡ ಜೈಲಿನಲ್ಲಿ ಬಂಧನದಲ್ಲಿಟ್ಟಾಗ ಅದನ್ನು ವಿರೋಧಿಸಲು ಗೋರೆಯವರು ಪ್ರತಿಭಟನಾ ಮೆರವಣಿಗೆಯನ್ನು ಸಂಘಟಿಸುವ ಸಿದ್ಧತೆಯಲ್ಲಿದ್ದಾಗ ಬ್ರಿಟಿಷ್ ಸರಕಾರ ಅವರನ್ನು ಬಂಧಿಸಿ ೪ ತಿಂಗಳು ಜೈಲು ಶಿಕ್ಷೆ ವಿಧಿಸಿತು. ೧೯೩೨ರಲ್ಲಿ ಗಾಂಧಿ ಸವಿನಯ ಕಾನೂನು ಭಂಗ ಚಳುವಳಿ ಪ್ರಾರಂಭಿಸಿದಾಗ ಗೋರೆ ಅದರಲ್ಲಿ ಭಾಗವಹಿಸದಿದ್ದರೂ ಅವರನ್ನು ಎರಡು ತಿಂಗಳುಗಳವರೆಗೆ ಸ್ಥಾನಬದ್ಧತೆಯಲ್ಲಿಟ್ಟು ನಂತರ ಅವರಿಗೆ ೨ ವರ್ಷ ಜೈಲು ಶಿಕ್ಷೆ ವಿಧಿಸಿತ್ತು. ಅನಂತರ ಅವರನ್ನು ನಾಸಿಕ್ ಜೈಲಿಗೆ ವರ್ಗಾಯಿಸಲಾಯಿತು. ಇಲ್ಲಿ ಕಿರಿಯರಾಗಿದ್ದ ಗೋರೆಯವರು ಅಲ್ಲಿ ಜೆ.ಪಿ., ಅಶೋಕ ಮೆಹ್ತಾ, ಮೀನು ಮಸಾನಿ ಮೊದಲಾದವರೊಡನೆ ಬೆರತು ಕಾಂಗ್ರೆಸ್ ಸಮಾಜವಾದಿ ಪಕ್ಷದ ಸ್ಥಾಪನೆಯ ಬಗ್ಗೆ ಚಿಂತನೆ ಮಾಡಿದರು. ಈ ಆಲೋಚನೆಯ ಫಲವಾಗಿ ೧೯೩೪ರಲ್ಲಿ ಸಿ.ಎಸ್.ಪಿ. ಉಗಮವಾಯಿತು.

ಮಾರ್ಕ್ಸ್ ಮತ್ತು ಏಂಗೆಲ್ಸ್, ಲೆನಿನ್, ಗಾಂಧಿ ಮೊದಲಾದವರ ವಿಚಾರಧಾರೆಗಳು ಗೋರೆ ಅವರ ಮೇಲೆ ತೀವ್ರ ಪ್ರಭಾವ ಬೀರಿದವು. ಗಾಂಧಿಯವರಿಂದ ಸರಳತೆ, ಗುರಿ ಮತ್ತು ದಾರಿಗಳ ಶುದ್ಧತೆ, ಪ್ರಾಮಾಣಿಕತೆ, ಬಡವರ ಬಗೆಗಿನ ಅಪಾರ ಕಾಳಜಿಗಳನ್ನು ಮೈಗೂಡಿಸಿಕೊಂಡಿದ್ದರೆ ಮಾರ್ಕ್ಸ್‌ನಿಂದ ಈ ಪ್ರಪಂಚದಲ್ಲಿ ಬಡವರು ತಮ್ಮ ನೆಲೆಗಾಗಿ ಹೋರಾಟ ಮಾಡುವ ಅವಶ್ಯಕತೆಗಳನ್ನು ರಕ್ತಗತ ಮಾಡಿಕೊಂಡರು. ಆದರೆ ಗಾಂಧೀಜಿಯವರ ಯಂತ್ರ ವಿರೋಧಿ ನಿಲುವು, ಹಳ್ಳಿಗಳ ಸ್ವಾವಲಂಬನೆ ಕಲ್ಪನೆಯನ್ನು ಅವರು ನಿರಾಕರಿಸಿದರು. ಹಾಗೇ ಅವರು ಮಾರ್ಕ್ಸ್‌ವಾದಿ ಸಿದ್ಧಾಂತದ ಅರ್ಥಶಾಸ್ತ್ರ, ಸಮಾಜಶಾಸ್ತ್ರ ಮತ್ತು ಇತಿಹಾಸದ ಭೌತಿಕ ವ್ಯಾಖ್ಯಾನಗಳನ್ನು ಒಪ್ಪಲಿಲ್ಲ.

ಎರಡನೆಯ ವಿಶ್ವ ಮಹಾಯುದ್ಧದಲ್ಲಿ ಬ್ರಿಟಿಷರಿಗೆ ಸಹಕಾರ ನೀಡಬಾರದೆಂದು ಹೈದರಾಬಾದ್ ನಿಜಾಮನ ಗುಲ್ಬರ್ಗಾದಲ್ಲಿ (ಈಗ ಅದು ಕರ್ನಾಟಕದಲ್ಲಿದೆ) ಭಾಷಣ ಮಾಡಿದ್ದಕ್ಕೆ ಬ್ರಿಟಿಷ್ ಸರಕಾರ ಗೋರೆಯವರಿಗೆ ಒಂದು ವರ್ಷ ಜೈಲು ಶಿಕ್ಷೆ ವಿಧಿಸಿತ್ತು.

ಅವರು ಬಿಡುಗಡೆಯಾದಾಗ 'ಭಾರತ ಬಿಟ್ಟು ತೊಲಗಿ' ಚಳುವಳಿ ಪ್ರಾರಂಭವಾಗಿತ್ತು. ಅವರು ಮಾರು ವೇಷದಲ್ಲಿ ಭೂಗತರಾಗಿ ಚಳುವಳಿಯನ್ನು ಸಂಘಟಿಸುತ್ತಿದ್ದಾಗ ಮತ್ತೆ ಬಂಧನಕ್ಕೊಳಗಾಗಿ ೧೯೪೬ರ ಏಪ್ರಿಲ್‌ನಲ್ಲಿ ಬಿಡುಗಡೆಯಾದರು.

ಭಾರತ ಸ್ವಾತಂತ್ರ್ಯ ಪಡೆದ ನಂತರ ೧೯೫೫ರಲ್ಲಿ ಗೋರೆಯವರು ಗೋವಾ ವಿಮೋಚನಾ ಚಳುವಳಿಯ ಮೊದಲ ತಂಡದ ನಾಯಕರಾಗಿ ಗೋವಾ ಪ್ರವೇಶಿಸಿದರು. ಪೋರ್ಚುಗೀಸರ ಗೋವಾ ಸರಕಾರ ಅವರನ್ನು ಬಂಧಿಸಿ ೧೨ ವರ್ಷ ಶಿಕ್ಷೆ ವಿಧಿಸಿ ಆಗುವಾಡ ಕೋಟೆಯಲ್ಲಿ ಅವರನ್ನು ಬಂಧನದಲ್ಲಿಟ್ಟಿತು. ೧೯೫೭ರಲ್ಲಿ ಅವರನ್ನು ಬಿಡುಗಡೆ ಮಾಡಲಾಯಿತು.

ಕೃತಕ ಸರೋವರವೊಂದರ ನಿರ್ಮಾಣ ಸಂಬಂಧವಾಗಿ ಭೂಮಿ ಕಳೆದುಕೊಂಡ ರೈತರು ೧೯೨೧ರಲ್ಲಿ ನಡೆಸಿದ ಮುಲ್ಶಿ ಅಣೆಕಟ್ಟು ಚಳುವಳಿಯು ಗೋರೆಯವರು ರೈತರ ಸಮಸ್ಯೆಗಳನ್ನು ಅರಿಯಲು ಮತ್ತು ಡಾ. ಅಂಬೇಡ್ಕರ್ ಅವರು ೧೯೨೭ರಲ್ಲಿ ಮಹಾಡ ಮತ್ತು ನಾಸಿಕ್‌ನಲ್ಲಿ ನಡೆಸಿದ ಚೌಡರ ಕೆರೆ ಮತ್ತು ಕಾಲಾರಾಮ್ ಮಂದಿರ ಪ್ರವೇಶಗಳ ಚಳುವಳಿಗಳು ದಲಿತರ ಸಮಸ್ಯೆಗಳನ್ನು ತಿಳಿಯಲು ಪ್ರೇರೇಪಿಸಿದವು. ಯೂಸುಫ್ ಮೆಹರ್ ಅಲಿಯವರು ಸಂಘಟಿಸಿದ "ಸೈಮನ್‌ರೆ ಮರಳಿ ಹೋಗಿ" ಚಳುವಳಿಯಲ್ಲಿ ಭಾಗವಹಿಸಿದ್ದ ಗೋರೆಯವರು ಪುಣೆಯ ಪಾರ್ವತಿ ಮಂದಿರ ಪ್ರವೇಶ ಚಳುವಳಿಯ ತಂಡದ ನೇತೃತ್ವ ವಹಿಸಿದ್ದಕ್ಕೆ ಮತಾಂಧ ಹಿಂದುಗಳ ಥಳಿತಕ್ಕೆ ಗುರಿಯಾದರು. ಪುಣೆಯಲ್ಲಿ ಎಣ್ಣೆ ಗಿರಣಿ ಕಾರ್ಮಿಕರ, ಸಕ್ಕರೆ ಕಾರ್ಮಿಕರ ಒಕ್ಕೂಟ ಮತ್ತು ಪುಣೆಯ ವಿದ್ಯುಚ್ಛಕ್ತಿ ನೌಕರರ ಸಂಘಗಳ ಅಧ್ಯಕ್ಷರಾಗಿ ಕಾರ್ಮಿಕರ ಏಳಿಗೆಗೆ ದುಡಿದರು.

ಹೀಗೆ ಸಾರ್ವಜನಿಕ ಜೀವನದಲ್ಲಿ ಸಕ್ರಿಯರಾಗಿದ್ದ ಗೋರೆಯವರು ೧೯೫೭ರ ಲೋಕಸಭೆಯ ಚುನಾವಣೆಯಲ್ಲಿ ಪ್ರಜಾ ಸಮಾಜವಾದಿ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿ ಆಯ್ಕೆಯಾದರು. ೧೯೬೫ರಲ್ಲಿ ಅವರು ಪುಣೆಯ ಕಾರ್ಪೋರೇಷನ್ನಿನ ಮೇಯರ್ ಆಗಿ ಆಯ್ಕೆಯಾದರು. ೧೯೭೦ರಲ್ಲಿ ಅವರು ಮಹಾರಾಷ್ಟ್ರದ ವಿಧಾನ ಸಭೆಯಿಂದ ಪ್ರಜಾ ಸಮಾಜವಾದಿ ಪಕ್ಷದ ಅಭ್ಯರ್ಥಿಯಾಗಿ ಕಾಂಗ್ರೆಸ್ಸಿನ ಹೆಚ್ಚಿನ ಮತಗಳ ಬೆಂಬಲದಿಂದ ರಾಜ್ಯಸಭೆಗೆ ಆಯ್ಕೆಯಾಗಿದ್ದರು.

ಆದರೆ ಗೋರೆಯವರು ಇದರಿಂದ ಕಾಂಗ್ರೆಸ್ಸಿನ ಯಾವುದೇ ಮುಲಾಜಿಗೆ ಒಳಗಾಗದೆ ಇಂದಿರಾ ಗಾಂಧಿಯವರ ಆಡಳಿತ ವೈಖರಿಯನ್ನು ಟೀಕಿಸಲು ಹಿಂಜರಿಯಲಿಲ್ಲ.. ೧೯೭೫ರ ಜೂನ್ ೨೫ರಂದು ಇಂದಿರಾಗಾಂಧಿ ದೇಶದ ಮೇಲೆ ತುರ್ತು ಪರಿಸ್ಥಿತಿ ಹೇರಿದಾಗ ಅವರನ್ನು ಬಂಧಿಸಲಿಲ್ಲ. ಆದರೆ ಅವರು ಈ ಅವಕಾಶವನ್ನು ಬಳಸಿಕೊಂಡು ಸೈಕಲ್ ಮೇಲೆ ಹಳ್ಳಿ ಹಳ್ಳಿಗೆ ಹೋಗಿ ತುರ್ತುಪರಿಸ್ಥಿತಿಯ ವಿರುದ್ಧ ಜನರಲ್ಲಿ ಜಾಗೃತಿ ಮೂಡಿಸಿದ್ದರು. ೧೯೭೭ರಲ್ಲಿ ಜನತಾ ಪಕ್ಷ ಅವರನ್ನು ಬ್ರಿಟನ್ನಿನ

ರಾಯಭಾರಿಯನ್ನಾಗಿ ನೇಮಿಸಿತ್ತು. ೧೯೭೯ರಲ್ಲಿ ಜನತಾಪಕ್ಷದ ಸರಕಾರ ಉರುಳಿದಾಗ ಆ ಹುದ್ದೆಗೆ ರಾಜೀನಾಮೆ ನೀಡಿದರು.

ಗೋರೆಯವರು ರಾಷ್ಟ್ರ ಮಟ್ಟದಲ್ಲಿ ಸಮಾಜವಾದಿ ರಾಜಕಾರಣಿಯೆಂದು ಹೆಸರುವಾಸಿಯಾಗಿದ್ದರೂ ಮಹಾರಾಷ್ಟ್ರದಲ್ಲಿ ಅವರು ಒಬ್ಬ ಶ್ರೇಷ್ಠ ಸಾಹಿತಿಯೆಂದೇ ಪರಿಚಿತರು. ಅವರು ಇಂಗ್ಲೀಷು ಮತ್ತು ಮರಾಠಿಯಲ್ಲಿ ಒಟ್ಟು ೨೮ ಕೃತಿಗಳನ್ನು ಬರೆದಿದ್ದಾರೆ. ಅವರ ಸಾಹಿತ್ಯ ರಚನೆಯನ್ನು ಮೆಚ್ಚಿದ ಮರಾಠಿ ಸಾಹಿತ್ಯ ಲೋಕ ಅವರನ್ನು ೧೯೬೭-೬೮ನೇ ಸಾಲಿನಲ್ಲಿ ಮರಾಠಿ ಸಾಹಿತ್ಯ ಪರಿಷತ್ತಿಗೆ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿತ್ತು. ಅಲ್ಲದೆ, ಅವರು ಬಾಂಬೆಯ ಇಂಗ್ಲಿಷ್ ವಾರಪತ್ರಿಕೆ 'ಜನತಾ', ಮರಾಠಿಯ ವಾರಪತ್ರಿಕೆ 'ಸಾಧನಾ', ಮಹಾರಾಷ್ಟ್ರದ ಸಮಾಜವಾದಿ ಪಕ್ಷದ ಮುಖವಾಣಿ 'ಜನವಾಣಿ'ಗಳಿಗೆ ಸಂಪಾದಕರಾಗಿದ್ದರು.

ಗೋರೆಯವರು ಆಸ್ತಿಯ ಬಗ್ಗೆ ನಿರ್ಮೋಹಿಗಳು. ಅವರು ಪುಣೆಯಲ್ಲಿರುವ ತಮ್ಮ ಮನೆಯನ್ನು ಸಮಾಜವಾದಿ ಮಹಿಳಾ ಸಭೆಗೆ ದಾನ ಮಾಡಿದರು. ನಾಸಿಕ್‌ನಲ್ಲಿ ತಮ್ಮ ಹೆಂಡತಿ ಸುಮತಿಬಾಯಿ ಅವರ ನೆನಪಿನಲ್ಲಿ ಗಿರಿಜನ ವಿದ್ಯಾರ್ಥಿನಿಯರಿಗಾಗಿ ಒಂದು ವಿದ್ಯಾರ್ಥಿ ನಿಲಯವನ್ನು ಕಟ್ಟಲು ಹಣವನ್ನು ನೀಡಿದರು. ಕೊನೆಗೆ ತಮ್ಮ ದೇಹವನ್ನು ಸಸೂನ್ ಆಸ್ಪತ್ರೆಗೆ ದಾನ ಮಾಡಿದರು.

ಜನತಾಂತ್ರಿಕ ಸಮಾಜವಾದಿಯಾದ ಗೋರೆ ಭಾವನೆಗಿಂತ ಚಿಂತನೆ, ಚಿಂತನೆಗಿಂತ ಕ್ರಿಯಾಶೀಲತೆ ಅತಿಮುಖ್ಯವೆಂದು ಬಗೆದು ಗಾಂಧಿಗಿಂತ ಡಾ. ಅಂಬೇಡ್ಕರರೇ ಮುಖ್ಯವೆಂದು ಭಾವಿಸಿದ್ದರು. ಹಾಗೆಯೇ ಗೋರೆಯವರು ತಮ್ಮ ಇಡೀ ಜೀವನದಲ್ಲಿ ಯಾರನ್ನೂ ಗುರುಗಳೆಂದು ಸ್ವೀಕರಿಸಲಿಲ್ಲ. ಮತ್ತು ತಮ್ಮನ್ನು ಗುರುವೆಂದು ಸ್ವೀಕರಿಸಲು ಯಾರಿಗೂ ಅವಕಾಶ ನೀಡಲಿಲ್ಲ.

೧೯೯೩ ಮೇ ೧ರಂದು ಪುಣೆಯಲ್ಲಿ ಕಾರ್ಮಿಕರ ದಿನದಂದು ಮಾತನಾಡ ಬೇಕಾಗಿತ್ತು. ಅದೇ ದಿನ ಮಹಾರಾಷ್ಟ್ರದ ರಾಜ್ಯೋದಯ ದಿನವಾಗಿತ್ತು. ಗೋರೆ ಅಂದು ಏನು ಮಾತನಾಡುವರೆಂದು ಜನ ಕಾತುರವಾಗಿರುವಾಗಲೇ ಅವರು ಸಾವನ್ನಪ್ಪಿದರು.

◆◆

೮

ಅನುಪಮ ಸಾಹಸಿ, ಸಂಘಟನಾಕಾರ ಯೂಸುಫ್ ಮೆಹರಲಿ

ಖಾದ್ರಿ ಎಸ್. ಅಚ್ಯುತನ್

ಇಪ್ಪತ್ತನೆಯ ಶತಮಾನದ ಆರಂಭದ ವರ್ಷಗಳು ಎಂದರೆ ತಿಲಕ್ ಶಕೆಯಿಂದ ಗಾಂಧಿ ಯುಗದತ್ತ ಪಯಣ. ಜಾತ್ಯಾತೀತ ರಾಷ್ಟ್ರೀಯತೆಯ ಜೊತೆಗೆ ಆಳವಾದ ಮಾನವೀಯತೆಯನ್ನು ಮೇಳವಿಸಿದ ದಿನಗಳವು. ಬಂಗಾಳ ವಿಭಜನೆ, ಮೊದಲ ವಿಶ್ವಯುದ್ಧ, ರಷ್ಯದ ಸಾಮ್ಯವಾದಿ ಕ್ರಾಂತಿ, ಜಲಿಯನ್‌ವಾಲಾ ಬಾಗ್‌ನ ಬರ್ಬರ ಹತ್ಯಾಕಾಂಡ, ಅದರ ರಾಷ್ಟ್ರವ್ಯಾಪಿ ಪರಿಣಾಮ, ಹುತಾತ್ಮ ಭಗತ್‌ಸಿಂಗ್ ಹಾಗೂ ಜತೆಗಾರರ ನೇಣು ಮತ್ತು ಅದರಿಂದ ಉಂಟಾದ ತೀವ್ರ ರಾಜಕೀಯ ಬೆಳವಣಿಗೆ. ಈ ಎಲ್ಲ ಘಟನಾವಳಿಗಳ ಪ್ರಭಾವದಲ್ಲಿ ಬೆಳೆದ ಅನೇಕ ಉಜ್ವಲ ಹೋರಾಟಗಾರರಲ್ಲಿ ಯೂಸುಫ್ ಮೆಹರಲಿಯವರೂ ಒಬ್ಬರು. ೧೯೦೩ ಸೆಪ್ಟೆಂಬರ್ ೨೩ರಂದು ಶ್ರೀಮಂತ ವಾಣಿಜ್ಯೋದ್ಯಮಿ ಕುಟುಂಬದಲ್ಲಿ ಜನಿಸಿದ ಯೂಸುಫ್ ಮೆಹರಲಿ ಅವರ ಮನೆತನ ಬ್ರಿಟಿಷರ ಪರವಾಗಿತ್ತು. ಅವರ ಮುತ್ತಜ್ಜ ಮುಂಬೈದಲ್ಲಿ ಭಾರತದ ಮೊಟ್ಟಮೊದಲ ಜವಳಿ ಗಿರಣಿ ಆರಂಭಿಸಿದ್ದಲ್ಲದೇ, ದೇಶದ ಉದ್ದಿಮೆಗೆ ತಳಪಾಯ ಹಾಕಿದವರು. ಮೆಹರಲಿ ಅವರ ತಂದೆ ಜಾಫರ್ ಮೆಹರಲಿ ಮಕ್ಕಳನ್ನು ಶ್ರೀಮಂತರ ಶೈಲಿಯಲ್ಲೇ ಬೆಳೆಸಿದವರು.

ಯೂಸುಫ್ ಅವರ ಬಾಲ್ಯದ ೯ ವರ್ಷ ಕಲ್ಕತ್ತೆಯಲ್ಲಿ ಕಳೆಯಿತು. ಆಗ ಕಲ್ಕತ್ತೆ ಬಂಗಾಳ ವಿಭಜನೆಯಿಂದ, 'ವಂದೇಮಾತರಂ' ಗೀತೆಯಿಂದ ಮಾರ್ಮೊಳಗಿತ್ತು.

೧೧ನೆಯ ವಯಸ್ಸಿಗೆ ಮುಂಬೈಗೆ ಹಿಂತಿರುಗಿದ ಮೆಹರಲಿ ಸೇಂಟ್ ಕ್ಸೇವಿಯರ್ ಹೈಸ್ಕೂಲ್ ಸೇರಿದರು. ಆಗಲೇ ಬೇರೆಬೇರೆ ದೇಶಗಳ ಕ್ರಾಂತಿಕಾರಿ ಆಂದೋಳನಗಳ ಓದು, ಪರಿಚಯ. ಅವುಗಳಲ್ಲಿನ ಯುವಕರ ಪಾತ್ರ ಎಳೆಯನನ್ನು ಸೆಳೆಯಿತು. ಮಜನಿ, ಗ್ಯಾರಿಬಾಲ್ಡಿಗಳ ಬಗ್ಗೆ ಓದಿದರು, ರಷ್ಯಾ ಹಾಗೂ ಸನ್‌ಯಾತ್‌ಸೇನ್ ನೇತೃತ್ವದ ಚೀನಾ ಕ್ರಾಂತಿಗಳ ವಿದ್ಯಮಾನಗಳ ಮೇಲೆ ಅವರಿಗೆ ನಿಕಟಾಸಕ್ತಿ.

ಆ ಹೊತ್ತಿನಲ್ಲಿ ನಡೆದಿದ್ದ ಗಾಂಧೀಜಿ ಅವರ ಅಸಹಕಾರ ಆಂದೋಳನದಲ್ಲಿ ಈ ಎಲ್ಲ ಆಂದೋಳನಗಳ ಹೊಳಹು ಕಂಡಿತು ಎಳೆಯ ಯೂಸುಫ್‌ನಲ್ಲಿ. ಅದರ ಪರಿಣಾಮವಾಗಿಯೇ ಯುವ ಮೆಹರಲಿ ೧೯೨೮ರಲ್ಲಿ ಬಾಂಬೆ ಪ್ರಾಂತೀಯ ಯೂತ್‌ಲೀಗ್ ಹುಟ್ಟು ಹಾಕಲು ಭೂಮಿಕೆ ಒದಗಿತು. ಈ ಲೀಗ್ ಇದೇ ಮೊದಲ ಬಾರಿಗೆ ರಾಷ್ಟ್ರೀಯ ಆಂದೋಳನದಲ್ಲಿ ಯುವಕರ ಉತ್ಸಾಹಕ್ಕೆ ವೇದಿಕೆ ಒದಗಿಸಿತು. ಲೀಗ್‌ನ ಮೊದಲ ಸಮ್ಮೇಳನದ ತೀರ್ಮಾನವೇ 'ಸೈಮನ್ ಆಯೋಗ'ಕ್ಕೆ ಬೃಹತ್ ಬಹಿಷ್ಕಾರ ಆಯೋಜಿಸುವುದಾಗಿತ್ತು. ಕಾಂಗ್ರೆಸ್ ಅಲ್ಲದೆ, ಇತರೆ ರಾಜಕೀಯ ಗುಂಪುಗಳೂ ಈ ಬ್ರಿಟಿಷ್ ಆಯೋಗಕ್ಕೆ ವಿರೋಧಿ ನಿಲುವು ತಳೆದಿದ್ದವು. ಆ ಸಂದರ್ಭದಲ್ಲಿ, ಇಂದು ಸ್ವಾತಂತ್ರ್ಯ ಇತಿಹಾಸದ ಪುಟಗಳಲ್ಲಿ ಸುವರ್ಣಾಕ್ಷರಗಳಲ್ಲಿ ಬರೆಯಲಾಗಿರುವ 'ಸೈಮನ್ ಗೋ ಬ್ಯಾಕ್' ಘೋಷಣೆ ಟಂಕಿಸಿದವರೇ ಯೂಸುಫ್ ಮೆಹರಲಿ! ಅವರೇ ಅಂದು ಮುಂಬೈ ಪ್ರತಿಭಟನೆಯ ಹೀರೋ. ಆಗಲೇ ಮೊದಲ ಬಂಧನ. ಮೆಹರಲಿ ಆಗ ಕೇವಲ ೨೪ರ ತರುಣ.

ಇದರ ಮಧ್ಯೆ ಮುಂಬೈನ ಎಲ್ಫಿನ್‌ಸ್ಟನ್ ಕಾಲೇಜಿನಲ್ಲಿ ೧೯೨೫ರಲ್ಲಿ ಪದವಿ ಪಡೆದು, ೧೯೨೯ರಲ್ಲಿ ವಕೀಲಿ ಪದವಿ ಗಳಿಸಿಕೊಂಡರು. ಕಾಲೇಜು ದಿನಗಳಲ್ಲಿ ಅವರ ಮೇಲೆ ಛಾಪು ಒತ್ತಿದ ಮತ್ತೊಂದು ಘಟನೆ –ಮುಂಬೈನಲ್ಲಿ ಸುಭಾಷ್‌ಬೋಸರ ಭಾಷಣ. ಆಮೇಲೆ ಗಾಂಧೀಜಿ ಸ್ಫೂರ್ತಿ. ಸರ್ದಾರ್‌ಪಟೇಲ್ ನೇತೃತ್ವದ ಬಾರ್ಡೋಲಿ ರೈತ ಸತ್ಯಾಗ್ರಹ ಯೂಸುಫ್ ಅವರನ್ನು ಬಹುವಾಗಿ ಆಕರ್ಷಿಸಿ, ಮುಂಬೈ ಯುವ ಪಡೆಗೆ ಜನಬೆಂಬಲ ರೂಢಿಸಲು ಮುಂದಾದರು ಮೆಹರಲಿ.

ಆದರೆ ವಕೀಲಿಗೆ ನಷ್ಟ, ರಾಜಕೀಯಕ್ಕೆ ಲಾಭವಾಗಿ ದೇಶದಲ್ಲಿ ಸಮಾಜವಾದಿ ಸಿದ್ಧಾಂತದ ಹುಟ್ಟು, ಬೆಳವಣಿಗೆಗೆ ಮೂಲ ದ್ರವ್ಯವಾಯಿತು. ಗಾಂಧೀಜಿ ಅವರು ೧೯೩೦ರಲ್ಲಿ ಕೈಗೊಂಡ ಸವಿನಯ ಕಾನೂನು ಭಂಗ ಚಳವಳಿಯಲ್ಲಿ ಭಾಗವಹಿಸಿದ ಮೆಹರಲಿ ನಾಲ್ಕು ತಿಂಗಳ ಸೆರೆವಾಸ ಕಂಡರು. ಪುನಃ ೧೯೩೨ರಲ್ಲಿ ದೇಶವಿರೋಧಿ ಷಡ್ಯಂತ್ರದ ಆರೋಪ ಹೊತ್ತುಕೊಂಡು ಎರಡು ವರ್ಷಗಳ ಕಾರಾಗೃಹವಾಸ. ಆಗಲೇ ಆ ನಾಸಿಕ್ ಕಾರಾಗೃಹದಲ್ಲೇ ಯೂಸುಫ್‌ಗೆ ಸಮಾನ ಮನಸ್ಕ ಯುವಕರ ಜತೆ ಬೆರೆಯುವ ಅವಕಾಶ ಸಿಕ್ಕಿ ದೇಶದ ಇತಿಹಾಸದಲ್ಲಿ ಸಮಾಜವಾದದ ಚರಿತ್ರೆ ಆರಂಭಕ್ಕೆ ನಾಂದಿಯಾಗಿದ್ದು. ಈ ಕಾರಾಗೃಹದಲ್ಲಿ ಮೆಹರಲಿ ಮತ್ತು ಜಯಪ್ರಕಾಶ್ ನಾರಾಯಣ್,

ಮಿನೂ ಮಸಾನಿ, ನಾನಾಸಾಹೇಬ್ ಗೋರೆ, ಅಶೋಕ ಮೆಹತಾ ಮುಂತಾದ ಸಮಾನ ಮನಸ್ಕ ಗೆಳೆಯರ ಚರ್ಚೆಗಳ ಮಧ್ಯೆಯೇ ಕಾಂಗ್ರೆಸ್‌ನೊಳಗೆ ಒಂದು ಸಮಾಜವಾದಿ ಪಕ್ಷ ರಚಿಸಿಕೊಂಡು ಕಾಂಗ್ರೆಸ್‌ಗೊಂದು ಕ್ರಾಂತಿಕಾರಿ ಶಕ್ತಿ ನೀಡಬೇಕೆಂಬ ಹೊಳಹು ಹುಟ್ಟಿದ್ದು ಮತ್ತು ಮುಂದೆ ೧೯೩೪ರಲ್ಲಿ ಪಟ್ನಾದಲ್ಲಿ ನರೇಂದ್ರದೇವ ಅವರ ಹಿರಿತನದಲ್ಲಿ ಇತರ ಸಮಾನಮನಸ್ಕರೊಂದಿಗೆ ಸೇರಿ ಕಾಂಗ್ರೆಸ್ ಸೋಷಲಿಸ್ಟ್ ಪಕ್ಷದ ಸ್ಥಾಪನೆಯಾದದ್ದು. ಜೆಪಿ, ಮಸಾನಿ, ಅಚ್ಯುತ ಪಟವರ್ಧನ್, ಲೋಹಿಯಾ, ಮೆಹರಲಿ ಹಾಗೂ ಅಶೋಕ ಮೆಹ್ತಾರಂತಹ ಮಹಾ ದಿಟ್ಟ ಹೋರಾಟಗಾರರ ಮತ್ತು ಬೌದ್ಧಿಕ ದೈತ್ಯರುಗಳ ನಡುವೆ ಉಂಟಾದ ಸಮಾಜವಾದಿ ಸಿದ್ಧಾಂತದ ಬೆಸುಗೆಯಲ್ಲಿ ವೈಯಕ್ತಿಕ ಗೆಳೆತನದ ಹೊಳಪೂ ಕೂಡಿಕೊಂಡಿತ್ತು.

ಕಾಂಗ್ರೆಸ್ ಸೋಷಲಿಸ್ಟ್ ಪಕ್ಷದ ಸ್ಥಾಪನಾ ಸಮಯದಲ್ಲಿ ಯೂಸುಫ್ ಮೆಹರಲಿ ಪಾತ್ರ ಗಮನಾರ್ಹವಾಗಿತ್ತೆಂದು ಮತ್ತೊಬ್ಬ ಸಮಾಜವಾದಿ ಮಧು ದಂಡವತೆ ಅವರು ದಾಖಲಿಸಿದ್ದಾರೆ. ಕಾಂಗ್ರೆಸ್ ಸಮಾಜವಾದಿ ಪಾರ್ಟಿಗೆ ದೇಶಾದ್ಯಂತ ಯುವ ಜನರನ್ನು ಸೆಳೆದು ತಂದವರೇ ಮೆಹರಲಿ. 'ಶ್ರಮಜೀವಿ ವರ್ಗವು ಸ್ವಾತಂತ್ರ್ಯ ಹೋರಾಟದಲ್ಲಿ ರೈತರು ಹಾಗೂ ಮಧ್ಯಮವರ್ಗಗಳವರನ್ನು ಜತೆ ಮಾಡಿಕೊಂಡು ಹೊರಟಾಗ ಮಾತ್ರ ಯಶ ಕಾಣಲು ಸಾಧ್ಯ; ಅವರೆಲ್ಲ ಒಂದು ರಾಜಕೀಯ ವೇದಿಕೆಯಲ್ಲಿರಬೇಕು; ಆ ವೇದಿಕೆಯೇ ಕಾಂಗ್ರೆಸ್ ಸೋಷಲಿಸ್ಟ್ ಪಾರ್ಟಿ' ಎಂದು ನಿರೂಪಿಸಿದವರು ಮೆಹರಲಿ. ದೇಶಾದ್ಯಂತ ಪ್ರವಾಸ ಕೈಗೊಂಡು ಯುವಕರನ್ನು ಸಂಘಟಿಸಿದರು. ತೀವ್ರ ರಾಜಕೀಯ ಶಿಕ್ಷಣದಿಂದ ಮಾತ್ರ ಸೋಷಲಿಸ್ಟ್ ಸಿದ್ಧಾಂತ ಹರಡಲು ಸಾಧ್ಯ ಎಂದು ನಂಬಿದ್ದ ಅವರು ಯುವಕರಿಗೆ ರಾಜಕೀಯ ಶಿಕ್ಷಣದ ಪಠ್ಯವನ್ನೇ ಸಿದ್ಧ ಪಡಿಸಿದರು. ಸೋಷಲಿಸ್ಟ್ ಕಾರ್ಯಕರ್ತ ಬೌದ್ಧಿಕವಾಗಿ ಬೆಳೆಯಬೇಕೆಂದರು. ಯುವಕರಿಗೆ ವಿವಿಧ ಚಳವಳಿಗಳ ಪರಿಚಯವಿರಬೇಕು ಎನ್ನುತ್ತಿದ್ದ ಅವರು ಕಾರ್ಯಕರ್ತರು ಓದಬೇಕಾದುದೇನು ಎಂಬ ಪಟ್ಟಿಯನ್ನೇ ತಯಾರಿಸಿದ್ದರು.

ಮುಂಬೈ ಮಹಾನಗರ ಸಭೆಯ ಸದಸ್ಯರಾಗಿದ್ದ ಮೆಹರಲಿ, ೧೯೪೨ರಲ್ಲಿ ಯರವಾಡಾ ಸೆರೆಮನೆಯಲ್ಲಿದ್ದಾಗಲೇ ಮುಂಬೈನ ಮೊಟ್ಟಮೊದಲ ಸೋಷಲಿಸ್ಟ್ ಮೇಯರ್ ಆಗಿ ಆಯ್ಕೆಯಾಗುವಷ್ಟು ಆ ಮಹಾನಗರದಲ್ಲಿ ಜನಪ್ರಿಯ ನಾಯಕರಾಗಿದ್ದರು. ೧೯೪೨ರ ಆಗಸ್ಟ್ ಕಾಂಗ್ರೆಸ್ ಅಧಿವೇಶನಕ್ಕೆ ಮಹಾತ್ಮಗಾಂಧಿ ಬಂದಾಗ ಅವರನ್ನು ಮೇಯರ್ ಆಗಿ ಸ್ವಾಗತಿಸಲು ನಾಟಕೀಯ ರೀತಿಯಲ್ಲಿ ಹಾಜರಾಗಿ ಎಲ್ಲರನ್ನೂ ಚಕಿತಗೊಳಿಸಿದವರು ಈ ಮೆಹರಲಿ. ಆ ಅಧಿವೇಶನದಲ್ಲೇ ಗಾಂಧಿ ಬ್ರಿಟಿಷರ ವಿರುದ್ಧ 'ಚಲೇಜಾವ್' ಚಳವಳಿಯ ಘೋಷಣೆ ಮೊಳಗಿಸಿದ್ದು. 'ಕ್ವಿಟ್ ಇಂಡಿಯಾ' ಎಂದೇ ಸುವಿಖ್ಯಾತ ವಾಗಿರುವ ಈ ಘೋಷಣೆಯನ್ನು ಟಂಕಿಸಿದವರು ಯೂಸೂಫ್ ಮೆಹರಲಿಯವರೇ ಎಂದು ಹೇಳಲಾಗುತ್ತದೆ.

ಗಾಂಧೀಜಿ 'ಚಲೇಜಾವ್' ಚಳವಳಿಗೆ ಕರೆ ನೀಡಲು ಸಿದ್ಧತೆ ನಡೆಸಿದ್ದಾಗ, ಗಾಂಧಿ ಹಾಗೂ ಇತರೆ ಹಿರಿಯ ನಾಯಕರ ಬಂಧನವಾಗುತ್ತದೆ ಎಂಬುದನ್ನು ಮುನ್ನೋಡಿದ್ದ ಮೆಹರಲಿ ಹಲವಾರು ಯುವ ಸೋಷಲಿಸ್ಟ್ ನಾಯಕರು, ಕಾರ್ಯಕರ್ತರು ಚಳವಳಿಯ ಕಾವನ್ನು ಕಾಯ್ದುಕೊಳ್ಳಲು, ಭೂಗತ ಹೋರಾಟಕ್ಕೆ ಸಿದ್ಧವಾಗಿರುವಂತೆ ಎಚ್ಚರಿಸಿ ಅವರನ್ನು ಅಣಿಗೊಳಿಸಿದರು. ಆದರೆ ಅವರಿಗೆ ಸ್ವತಃ ಬಂಧನ ತಪ್ಪಿಸಿಕೊಳ್ಳಲಾಗಲಿಲ್ಲ. ಆಗ ಪೊಲೀಸರ ಹೊಡೆತದಿಂದ ಅವರ ಹೃದಯಕ್ಕಾದ ಪೆಟ್ಟು, ಅವರ ಆರೋಗ್ಯಕ್ಕೆ ಮಾತ್ರವಲ್ಲದೆ, ಮುಂದೆ ಸಮಾಜವಾದಿ ಆಂದೋಳನ ವ್ಯಕ್ತಿಗತ ಪ್ರತಿಷ್ಠೆಗಳಿಂದ ವಿಘಟನೆಯ ಹಾದಿ ಹಿಡಿದಾಗ ಅದನ್ನು ತಡೆಯಬಲ್ಲದಾಗಿದ್ದ ಶಕ್ತಿಗೂ ಆದ ಪೆಟ್ಟು ಎಂದೂ ಹೇಳಬಹುದು.

ಮಾರ್ಚ್ ೩೧, ೧೯೪೯ರಿಂದ ೧೯೫೦ರ ಜುಲೈ ೨ರಂದು ನಿಧನರಾಗುವವರೆಗೆ ಬಾಂಬೆ ಶಾಸನಸಭೆಯ ಸದಸ್ಯರಾಗಿ ಕ್ರಿಯಾಶೀಲ ಸಂಸದೀಯ ಪಟುವಾಗಿ ಕಾರ್ಯ ನಿರ್ವಹಿಸಿದ ಮೆಹರಲಿ, ಸದನದಲ್ಲಿ ಪ್ರಸ್ತಾಪವಾದ ಎಲ್ಲ ವಿಷಯಗಳಿಗೂ ತಮ್ಮ ಛಾಪು ಮೂಡಿಸುತ್ತಿದ್ದರು. ಏಪ್ರಿಲ್ ೪, ೧೯೪೯ರಂದು ಕರ್ನಾಟಕ ವಿಶ್ವವಿದ್ಯಾನಿಲಯ ಸ್ಥಾಪನೆ ಮಸೂದೆಗೆ ತಮ್ಮ ಹೃತ್ಪೂರ್ವಕ ಬೆಂಬಲ ನೀಡುತ್ತಾ ವಿಜಯನಗರ, ಹಳೇಬೀಡು-ಬೇಲೂರುಗಳ ಶಿಲ್ಪಕಲಾವೈಭವ ಮತ್ತು ಕರ್ನಾಟಕ ಸಂಗೀತದ ವೈಶಿಷ್ಟ್ಯ-ಮಹತ್ವಗಳನ್ನು ಕೊಂಡಾಡುತ್ತಾ ಕವಿಯೇ ಆಗುತ್ತಾರೆ ಮೆಹರಲಿ. ಸಾಹಿತ್ಯ, ಕಲೆ, ಭಾರತೀಯ ಶಾಸ್ತ್ರ, ಮುಂತಾದ ಪ್ರಕಾರಗಳಲ್ಲೂ ಅತುಳಾಸಕ್ತಿ ಹೊಂದಿದ್ದ ಅವರು ಸರ್ವರ ಸಮಾನತೆಯ ಆದರ್ಶಕ್ಕೆ ಬದ್ಧರಾಗಿದ್ದ ಅತ್ಯಂತ ಸೃಜನಶೀಲ ಮನಸ್ಸಿನವರೂ ಆಗಿದ್ದರು.

೧೯೫೦ರ ಜುಲೈ ೨ರಂದು ಮುಂಜಾನೆ ಸೂರ್ಯೋದಯಕ್ಕೆ ಮುನ್ನ ಕೇವಲ ೪೭ ವರ್ಷಗಳ ಮೆಹರಲಿ ಕಣ್ಮುಚ್ಚಿದರು. ಗೆಳೆಯನಿಗೆ ಅಂತಿಮ ವಿದಾಯ ಹೇಳಲು ಅಲ್ಲಿದ್ದವರು "ಜೆ.ಪಿ., ಗಾಂಧೀಜಿ ಅವರ ತ್ಯಾಗಮಯ ಜೀವನದ ನಂತರ ನಮ್ಮ ಮನದಲ್ಲಿ ಅಚ್ಚೊತ್ತಿ ಉಳಿಯುವುದು ಯೂಸುಫ್ ಮೆಹರಲಿಯವರ ತ್ಯಾಗ ಜೀವನ ಮಾತ್ರ" ಎಂದು ಕಂಬನಿ ಮಿಡಿದರು.

◆◆

೯

ಸರಳ ಸಜ್ಜನಿಕೆಯ ಹೋರಾಟಗಾರ ಎಸ್.ಎಂ. ಜೋಷಿ

ಎಂ. ರಾಘವೇಂದ್ರ

ಭಾರತದ ಸಮಾಜವಾದದ ಇತಿಹಾಸದಲ್ಲಿ ಸ್ವಾತಂತ್ರ ಚಳುವಳಿಯ ಕಾಲದಲ್ಲೆ ಸಾಮಾಜಿಕ ನ್ಯಾಯದ ಸಿದ್ಧಾಂತಕ್ಕಾಗಿ ಹೋರಾಡಿದ ಪ್ರಖರ ಸಮಾಜವಾದಿ ಚಿಂತಕರಲ್ಲಿ ಎಸ್.ಎಂ.ಜೋಷಿ ಕೂಡಾ ಒಬ್ಬರು. ಸರಳ, ಪಾರದರ್ಶಕ ವ್ಯಕ್ತಿತ್ವ, ನಿರ್ಭಿಡೆಯ ನೇರವಂತಿಕೆಗೆ ಹೆಸರಾಗಿದ್ದ ಶ್ರೀಧರ ಮಹಾದೇವ ಜೋಷಿ ತಮ್ಮ ಆಪ್ತರ ವಲಯದಲ್ಲಿ ಎಸ್.ಎಂ. ಎಂದೇ ಚಿರಪರಿಚಿತರಾಗಿದ್ದರು.

ಎಸ್.ಎಂ. ಜನಿಸಿದ್ದು ೧೯೦೪ರ ನವೆಂಬರ್ ೧೨ರಂದು ಪುಣೆ ಜಿಲ್ಲೆಯ ಜುನ್ನಾರ್ ಎಂಬಲ್ಲಿ. ಅವರದ್ದು ಒಂದು ಕೆಳ ಮಧ್ಯಮವರ್ಗದ ಕುಟುಂಬ. ಆದರ್ಶಗಳು ಹುಟ್ಟುವುದು ಸಂಕಷ್ಟಗಳ ನಡುವೆಯೇ ಎನ್ನುವ ಮಾತಿನಂತೆ ಎಸ್.ಎಂ. ಬದುಕಿನುದ್ದಕ್ಕೂ ತಮ್ಮನ್ನು ಗುರುತಿಸಿಕೊಂಡಿದ್ದು ಬಡ ಹಾಗೂ ತಳ ಸಮುದಾಯದ ಜನರೊಂದಿಗೆ. ವಿದ್ಯಾರ್ಥಿ ದೆಸೆಯಿಂದಲೇ ಅನ್ಯಾಯ, ಶೋಷಣೆಗಳ ವಿರುದ್ಧ ಧ್ವನಿ ಎತ್ತುವ ಸ್ವಭಾವ ಅವರದ್ದಾಗಿತ್ತು.

ಎಸ್.ಎಂ.ಪ್ರಾಥಮಿಕ ಶಿಕ್ಷಣ ಪಡೆಯುತ್ತಿದ್ದ ಕಾಲಕ್ಕೆ ತಮ್ಮ ತಂದೆಯನ್ನು ಕಳೆದು ಕೊಂಡರು. ಈ ಕಾರಣಕ್ಕೆ ಅವರ ಕುಟುಂಬ ಹಲವು ತೊಂದರೆಗಳನ್ನು ಅನುಭವಿಸ ಬೇಕಾಯಿತು. ಇದರಿಂದ ವಿಚಲಿತರಾಗದ ಎಸ್.ಎಂ. ತಮ್ಮ ಪ್ರತಿಭೆಯ ಕಾರಣಕ್ಕೆ ವಿದ್ಯಾರ್ಥಿ ವೇತನದ ನೆರವಿನಿಂದಲೇ ಶಿಕ್ಷಣ ಮುಂದುವರೆಸಿದರು. ಆತ್ಮಗೌರವವೇ

ಮನುಷ್ಯನ ಜೀವನದ ದೊಡ್ಡ ಸಂಪತ್ತು ಎಂದು ನಂಬಿದ್ದ ಎಸ್.ಎಂ.ರ ತಾಯಿ, ಅವರ ಬದುಕಿಗೆ ಸ್ಫೂರ್ತಿಯಾಗಿದ್ದರು.

ಎಸ್.ಎಂ. ಶಿಕ್ಷಣ ಪಡೆಯುತ್ತಿದ್ದ ಹೊತ್ತಿಗೆ ದೇಶದಲ್ಲಿ ಸ್ವಾತಂತ್ರ್ಯ ಚಳುವಳಿಯ ಕಾವು ಏರುತ್ತಿತ್ತು. ಇದರ ಪ್ರಭಾವ ಅವರ ಮೇಲೆ ಆರಂಭವಾಗಿತ್ತು. ಬ್ರಿಟಿಷ್ ಅಧಿಕಾರಿಯೊಬ್ಬರು ಎಸ್.ಎಂ. ಓದುತ್ತಿದ್ದ ಶಿಕ್ಷಣ ಸಂಸ್ಥೆಗೆ ಭೇಟಿ ನೀಡಿದಾಗ ಪ್ರತಿಭಟನೆಯ ಭಾಗವಾಗಿ ಅವರ ಮೇಲೆ ಎಸ್.ಎಂ.ಬ್ಯಾಡ್ಜ್ ಎಸೆದು ಶಾಲೆಯಿಂದ ಶಿಕ್ಷೆ ಅನುಭವಿಸಿದ್ದರು!

ಕಾಲೇಜಿನಲ್ಲಿದ್ದಾಗ ಎಸ್.ಎಂ. ಭಾಷಣ, ಪ್ರಬಂಧ ಸೇರಿದಂತೆ ಹಲವು ಸೃಜನಾತ್ಮಕ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದರು. ೧೯೨೮ರಲ್ಲಿ ಅವರು ನಡೆಸಿದ ಹರಿಜನರಿಗೆ ದೇವಸ್ಥಾನಕ್ಕೆ ಪ್ರವೇಶ ನೀಡುವ ಚಳುವಳಿ ಇಡೀ ದೇಶದ ಗಮನ ಸೆಳೆಯಿತು. ಕಾರ್ಲ್‌ಮಾರ್ಕ್ಸ್, ಗಾಂಧೀಜಿ, ಭಗತ್ ಸಿಂಗ್, ಚಂದ್ರಶೇಖರ ಆಜಾದ್, ಬಾಲಗಂಗಾಧರ ತಿಲಕ್ ಮೊದಲಾದವರ ಬರಹ, ಚಿಂತನೆಗಳಿಂದ ಆಕರ್ಷಿತರಾಗಿದ್ದ ಎಸ್.ಎಂ. ತಮ್ಮ ಗೆಳೆಯರಾದ ಎನ್.ಜಿ.ಗೋರೆ, ಆರ್.ಕೆ. ಖಾಡಿಲ್ಕರ್, ಶಿರುಬಾವು ಲಿಮೆಯೆ ಅವರೊಂದಿಗೆ 'ಯುವಜನ ಸಭಾ' ಎಂಬ ಸಂಘಟನೆಯನ್ನು ಹುಟ್ಟುಹಾಕಿದ್ದರು. ಈ ಯುವಜನ ಸಭಾದ ಮೊದಲ ಸಮಾವೇಶ ೧೯೨೭ರಲ್ಲಿ ಮುಂಬಯಿನಲ್ಲಿ ನಡೆದಿತ್ತು.

ಯುವಜನ ಸಭಾದ ಎರಡನೇ ಸಮ್ಮೇಳನ ಪುಣೆಯಲ್ಲಿ ನೆಹರು ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ನಡೆದ ನಂತರ ಬ್ರಿಟಿಷ್ ಸರ್ಕಾರ ಎಸ್.ಎಂ. ಮತ್ತು ಅವರ ಗೆಳೆಯರ ಗುಂಪು ಉನ್ನತ ಶಿಕ್ಷಣಕ್ಕೆ ಸೇರದಂತೆ ತಡೆಯೊಡ್ಡಿತ್ತು. ಅನೇಕ ಅಡೆತಡೆಗಳ ನಡುವೆಯೂ ಜನಪರ ಹೋರಾಟ ನಡೆಸುತ್ತಲೇ ಎಸ್.ಎಂ. ಕಾನೂನು ಪದವಿ ಪಡೆದರು. ನಂತರ ಅದರ ಬಲದಿಂದ ವೃತ್ತಿ ನಡೆಸಿ ಆರಾಮವಾದ ಬದುಕು ನಡೆಸಬಹುದಾಗಿದ್ದ ಎಸ್.ಎಂ. ತುಳಿದಿದ್ದು ಭಿನ್ನ ಹಾದಿ.

೧೯೩೦ರಲ್ಲಿ ಕೊಂಕಣದ ಅಲಿಬಾಗ್‌ನ ತೀರದಲ್ಲಿ ಉಪ್ಪಿನ ಸತ್ಯಾಗ್ರಹದಲ್ಲಿ ಪಾಲ್ಗೊಂಡು ಸ್ಫೂರ್ತಿಯುತ ಭಾಷಣ ಮಾಡಿ ಬೃಹತ್ ಜನಸಮೂಹದ ದೀರ್ಘ ಕರತಾಡನಕ್ಕೆ ಪಾತ್ರರಾದ ಜೋಷಿಯವರು ಪ್ರಥಮ ಬಾರಿಗೆ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದಕ್ಕಾಗಿ ಸೆರೆಮನೆ ಸೇರಬೇಕಾಯಿತು. ಬಿಡುಗಡೆಯ ನಂತರ 'ರಾಯ್ ದಿನ'ದ ಆಚರಣೆಯ ಸಂದರ್ಭದಲ್ಲಿ ಮಾಡಿದ ಭಾಷಣಕ್ಕೆ ಬ್ರಿಟಿಷ್ ಸರ್ಕಾರ ಅವರ ಮೇಲೆ ದೇಶದ್ರೋಹದ ಆರೋಪ ಹೊರಿಸಿ ಎರಡು ವರ್ಷ ಜೈಲು ಶಿಕ್ಷೆ ವಿಧಿಸಿತ್ತು. ಮುಂದೆ ೧೯೩೪ರಲ್ಲಿ ಮುಂಬೈನಲ್ಲಿ ಮಾರ್ಕ್ಸ್‌ವಾದಿ ಚಿಂತಕ ಎಂ.ಎನ್.ರಾಯ್ ಅವರ ಬಿಡುಗಡೆಗೆ ಒತ್ತಾಯಿಸಿ ಭಾಷಣ ಮಾಡಿದ್ದಕ್ಕಾಗಿ ಎಸ್.ಎಂ. ಅವರಿಗೆ ಜೈಲು ಶಿಕ್ಷೆ ವಿಧಿಸಿ 'ಸಿ' ದರ್ಜೆಯ ಕಾರಾಗೃಹದಲ್ಲಿ ಬಂಧಿಸಿಡಲಾಗಿತ್ತು.

ಎನ್.ಜಿ.ಗೋರೆ, ಅಚ್ಯುತ್ ಪಟವರ್ಧನ್, ಯೂಸೂಫ್ ಮೆಹರ್ ಆಲಿ ಮೊದಲಾದವರೊಂದಿಗೆ ಸೇರಿ ಸೈಮನ್ ಕಮಿಷನ್ ವಿರುದ್ಧ ಯಶಸ್ವಿ ಪ್ರತಿಭಟನೆ ನಡೆಸಿದ ಶ್ರೇಯಸ್ಸು ಎಸ್.ಎಂ. ಅವರಿಗೆ ಸಲ್ಲುತ್ತದೆ. ಭಾರತಕ್ಕೆ ಸ್ವಾತಂತ್ರ್ಯ ದೊರಕುವುದು ಎಂದರೆ ಕೇವಲ ವಸಾಹತುಶಾಹಿ ಆಡಳಿತದಿಂದ ಮುಕ್ತಿ ದೊರಕುವುದು ಮಾತ್ರವಲ್ಲ, ಬದಲಾಗಿ ಸಾಮಾಜಿಕ ಆರ್ಥಿಕ ಅಸಮಾನತೆಗಳ ಕೊನೆ ಕೂಡಾ ಎನ್ನುವುದು ಎಸ್.ಎಂ. ಅವರ ನಂಬಿಕೆಯಾಗಿತ್ತು.

ಹೋರಾಟದ ಬದುಕು ಮುಳ್ಳಿನ ಹಾಸಿಗೆ ಎನ್ನುವ ಕಾರಣಕ್ಕೆ ಎಸ್.ಎಂ. ಮದುವೆಯಾಗುವುದೇ ಬೇಡ ಎನ್ನುವ ತೀರ್ಮಾನಕ್ಕೆ ಬಂದಿದ್ದರು. ಆದರೆ ಎಸ್.ಎಂ.ರ ಕೆಚ್ಚು ಮತ್ತು ಆದರ್ಶದಿಂದ ಆಕರ್ಷಿತರಾಗಿದ್ದ ಶ್ರೀಮಂತ ಮನೆತನದ ತಾರಾ ಪೆಂಡ್ಸೆ ಎಂಬ ಯುವತಿ ಅವರ ಜೀವನ ಸಂಗಾತಿಯಾಗಿ ಸುಖ ದುಃಖಗಳಲ್ಲಿ ಭಾಗಿಯಾಗುವುದಾಗಿ ವಾಗ್ದಾನ ನೀಡಿದ ಕಾರಣಕ್ಕೆ ಅವರನ್ನೆ ಮದುವೆಯಾದರು. ತಾರಾ ಪೆಂಡ್ಸೆ ಶಾಲಾ ಉಪಾಧ್ಯಾಯಿನಿಯಾಗಿದ್ದರು.

೧೯೩೪ರಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷದ ಆರಂಭದಲ್ಲಿ ಪ್ರಮುಖ ಪಾತ್ರ ವಹಿಸಿದವರಲ್ಲಿ ಎಸ್.ಎಂ. ಕೂಡಾ ಒಬ್ಬರು. ಈ ಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯರಾಗಿ ಅವರು ಮೂರು ವರ್ಷ ಕಾರ್ಯ ನಿರ್ವಹಿಸಿದ್ದರು. ನಂತರ ಪಕ್ಷದ ವಿವಿಧ ಪ್ರಮುಖ ಹುದ್ದೆಗಳಲ್ಲಿ ಅವರು ಕೆಲಸ ಮಾಡಿದರು.

೧೯೪೨ರಲ್ಲಿ 'ಬ್ರಿಟಿಷರೇ ಭಾರತ ಬಿಟ್ಟು ತೊಲಗಿ' ಚಳವಳಿಯ ಕಾವು ಜೋರಾದ ಸಂದರ್ಭದಲ್ಲಿ ಎಸ್.ಎಂ. ತಮ್ಮ ಗೆಳೆಯರೊಂದಿಗೆ ಸೇರಿ ಭೂಗತರಾಗಿ ಹೋರಾಟದಲ್ಲಿ ಪಾಲ್ಗೊಂಡಿದ್ದರು. ಉರ್ದು ಭಾಷೆಯ ಮೇಲೆ ಹಿಡಿತ ಹೊಂದಿದ್ದ ಅವರು ಮೌಲ್ವಿಯೊಬ್ಬರ ವೇಷ ಧರಿಸಿ ಕರಾಚಿ ಪ್ರಾಂತ್ಯ ಸೇರಿದಂತೆ ದೇಶದ ವಿವಿಧ ಭಾಗಗಳಲ್ಲಿ ಸಂಚರಿಸಿ ಸಂಘಟನೆ ಕಾರ್ಯ ನಡೆಸಿದ್ದು ವಿಶೇಷ ಸಂಗತಿ. ೧೯೪೩ರಲ್ಲಿ ಬ್ರಿಟಿಷರು ಬಂಧಿಸಿದ ಹಲವು ಭೂಗತ ಸ್ವಾತಂತ್ರ್ಯ ಸೇನಾನಿಗಳ ಪೈಕಿ ಎಸ್.ಎಂ. ಕೂಡಾ ಒಬ್ಬರಾಗಿದ್ದರು. ಹೀಗೆ ಬಂಧಿತರಾದವರ ವಿರುದ್ಧ ಪ್ರಮುಖ ಸಾಕ್ಷಿ ದೊರೆಯದೇ ಇದ್ದರೂ ಬ್ರಿಟಿಷ್ ಸರ್ಕಾರ ಅವರ ವಿರುದ್ಧ 'ದೇಶದ ವಿರುದ್ಧ ಪಿತೂರಿ' ಆರೋಪ ಹೊರಿಸಿ ಜೈಲಿಗೆ ಅಟ್ಟಿತ್ತು.

ಸ್ವಾತಂತ್ರ್ಯಾನಂತರ ಸಮಾಜವಾದಿ ಪಕ್ಷದಿಂದ ೧೯೫೨ರ ಪ್ರಥಮ ಲೋಕಸಭಾ ಚುನಾವಣೆಗೆ ಪುಣೆ ಕ್ಷೇತ್ರದಿಂದ ಸ್ಪರ್ಧಿಸಿದ್ದ ಎಸ್.ಎಂ. ಅವರಿಗೆ ಯಶಸ್ಸು ದೊರಕಲಿಲ್ಲ. ಚುನಾವಣೆಯಲ್ಲಿ ಸೋತ ಕಾರಣಕ್ಕೆ ನಿರಾಶರಾಗದೇ ಜನರ ಸೇವೆಯಲ್ಲಿ ಮುಂದುವರೆದ ಎಸ್.ಎಂ. ೧೯೫೭ರಲ್ಲಿ ಮಹಾರಾಷ್ಟ್ರದ ವಿಧಾನಸಭೆಗೆ ಆಯ್ಕೆಯಾದರು. ೧೯೬೭ರ ಲೋಕಸಭೆ ಚುನಾವಣೆಯಲ್ಲಿ ಜಯಗಳಿಸುವ ಮೂಲಕ ಎಸ್.ಎಂ. ಸಂಸತ್ತಿಗೆ ಪ್ರವೇಶ ಮಾಡಿದರು. ಸಂಸದರಾಗಿ ತಮ್ಮ ಅಪಾರ ಜ್ಞಾನ ಸಂಪತ್ತನ್ನು ಬಳಸಿಕೊಂಡು

ಅವರು ಮಾಡಿದ ಭಾಷಣಗಳು ಪ್ರಭಾವಶಾಲಿಯಾಗಿದ್ದನ್ನು ಇಂದಿಗೂ ಮರೆಯುವಂತಿಲ್ಲ.

ಪ್ರಜಾ ಸೋಷಲಿಸ್ಟ್ ಪಾರ್ಟಿಯ ಅಧ್ಯಕ್ಷರಾಗಿದ್ದ (೧೯೬೩–೬೪) ಎಸ್.ಎಂ. ೧೯೬೪ರಲ್ಲಿ ಪಿ.ಎಸ್.ಪಿ ಹಾಗೂ ಎಸ್.ಪಿ. ಪಕ್ಷಗಳು ಒಂದಾಗಿ ಸಂಯುಕ್ತ ಸಮಾಜವಾದಿ ಪಕ್ಷ ರೂಪುಗೊಂಡಾಗ ಅದರ ಪ್ರಥಮ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ೧೯೭೦ರ ದಶಕದ ಆರಂಭದಲ್ಲಿ ಜಯಪ್ರಕಾಶ್ ನಾರಾಯಣ್ ಅವರು ಆರಂಭಿಸಿದ 'ಸಂಪೂರ್ಣ ಕ್ರಾಂತಿ' ಚಳುವಳಿಯಲ್ಲಿ ಸಕ್ರಿಯರಾಗಿದ್ದ ಅವರು ೧೯೭೭ರಲ್ಲಿ ಆರಂಭಗೊಂಡ ಜನತಾ ಪಕ್ಷದ ಸ್ಥಾಪಕ ಸದಸ್ಯರಾಗಿದ್ದು ಮಹಾರಾಷ್ಟ್ರ ಘಟಕದ ಅಧ್ಯಕ್ಷರಾಗಿದ್ದರು. ತಮ್ಮ ಇಡೀ ರಾಜಕೀಯ ಜೀವನದ ತುಂಬ ವಿವಿಧ ಪಟ್ಟಭದ್ರ ಹಿತಾಸಕ್ತಿಗಳ ವಿರುದ್ಧ ಕೆಚ್ಚೆದೆಯಿಂದ ಹೋರಾಡಿದ್ದವರಾದರೂ ಎಸ್.ಎಂ. ಯಾರ ಶತ್ರುತ್ವಕ್ಕೂ ಗುರಿಯಾಗದೆ 'ಅಜಾತ ಶತ್ರು' ಎಂದೇ ಹೆಸರಾಗಿದ್ದರು.

ರಾಜಕೀಯ ಚಟುವಟಿಕೆಗಳ ಜೊತೆಗೆ ಹಲವು ಕಾರ್ಮಿಕ ಸಂಘಟನೆಗಳಲ್ಲಿ ಸಾಮಾನ್ಯ ಕಾರ್ಯಕರ್ತರಂತೆ ಎಸ್.ಎಂ. ದುಡಿದಿದ್ದಾರೆ. ಪತ್ರಕರ್ತರಾಗಿಯೂ ಕೆಲಸ ಮಾಡಿರುವ ಅವರು ಅನೇಕ ಪತ್ರಿಕೆಗಳಿಗೆ ನಿರಂತರವಾಗಿ ಲೇಖನಗಳನ್ನು ಬರೆದು ಜಾಗೃತಿ ಮೂಡಿಸಿದ್ದಾರೆ. 'ಓರ್ಮಿ' ಎಸ್.ಎಂ.ಜೋಷಿ ಅವರ ಪ್ರಬಂಧಗಳ ಸಂಕಲನ. 'ಸಮಾಜವಾದಿಯ ನಡೆಯ ನಿಜದ ಹಾದಿ' 'ಭಾರತದಲ್ಲಿ ಭ್ರಷ್ಟಾಚಾರದ ಪಿಡುಗು, ಪರಿಹಾರಗಳು' ಸೇರಿದಂತೆ ಎಸ್.ಎಂ. ಅವರ ಹಲವು ಕೃತಿಗಳು ಪ್ರಕಟವಾಗಿವೆ. ಮರಾಠಿ ಹಾಗೂ ಹಿಂದಿ ಭಾಷೆಯಲ್ಲಿ ಅವರ ಆತ್ಮಕತೆ ಕೂಡಾ ಪ್ರಕಟಗೊಂಡಿದೆ.

೧೯೮೯ರ ಏಪ್ರಿಲ್ ೧ರಂದು ನಿಧನರಾದ ಎಸ್.ಎಂ. ಭಾರತ ಕಂಡ ಅಪರೂಪದ ಸಮಾಜವಾದಿ ಚಿಂತಕ ಮಾತ್ರವಲ್ಲದೆ ಬದ್ಧತೆಯಿಂದ ತಳಮಟ್ಟದ ಸ್ತರಗಳ ಹೋರಾಟದಲ್ಲಿ ಭಾಗಿಯಾದ ಸಾಮಾಜಿಕ ಕಳಕಳಿಯ ಅಪ್ರತಿಮ ವ್ಯಕ್ತಿ.

(ಸಂಗ್ರಹ ಅನುವಾದ)

◆◆

೧೦

ಧೀಮಂತ ನಾಯಕ ಮಧು ಲಿಮಯೆ

ಡಿ.ಎಸ್. ನಾಗಭೂಷಣ

ಲೋಹಿಯಾ ಅವರ ಸಮಾಜವಾದಿ ಗರಡಿಯಲ್ಲಿ ಪಳಗಿ ತತ್ವ ಚಿಂತನೆ, ಜನಪರ ಹೋರಾಟ, ಸಂಸದೀಯ ರಾಜಕಾರಣ ಹಾಗೂ ಸಮಾಜವಾದಿ ಸಾಹಿತ್ಯ ರಚನೆ ಈ ಎಲ್ಲ ಕ್ಷೇತ್ರಗಳಿಗೆ ಅಮೂಲ್ಯ ಕೊಡುಗೆ ನೀಡಿರುವ ಮಧು ಲಿಮಯೆ ಸಮಾಜವಾದಿ ಚಳುವಳಿ ರೂಪಿಸಿದ ಧೀಮಂತ ವ್ಯಕ್ತಿತ್ವಗಳಲ್ಲೊಬ್ಬರು.

ರಾಮಚಂದ್ರ ಮಹದೇವ ಲಿಮಯೆ ಅವರ ಮಗನಾಗಿ ೧೯೨೨ ಮೇ ೧ರಂದು ಮಹಾರಾಷ್ಟ್ರದ ಪುಣೆಯಲ್ಲಿ ಜನಿಸಿದ ಮಧು ಲಿಮಯೆ ತನ್ನ ಪ್ರಾಥಮಿಕ ಶಿಕ್ಷಣದ ೫, ೬ ಮತ್ತು ೭ನೇ ತರಗತಿಗಳನ್ನು ಒಂದೇ ವರ್ಷ ಪಾಸು ಮಾಡಿದರೂ, ೧೩ನೇ ವಯಸ್ಸಿಗೆ ಮೆಟ್ರಿಕ್ಯುಲೇಷನ್ ಪರೀಕ್ಷೆ ಬರೆಯುವ ಅವಕಾಶ ಸಿಗಲಿಲ್ಲ. ಈ ಅವಧಿಯಲ್ಲಿ ಬೇರೆ ಬೇರೆ ದೇಶದ ಇತಿಹಾಸ, ಸ್ವಾತಂತ್ರ್ಯ ಸಂಗ್ರಾಮ ಮತ್ತು ಶ್ರೇಷ್ಠ ವ್ಯಕ್ತಿತ್ವಗಳ ಜೀವನ ಕತೆಗಳನ್ನು ಓದಿಕೊಂಡ ಬಾಲಕ ಲಿಮೆಯೆ, ಮೆಟ್ರಿಕ್ಯುಲೇಷನ್ ನಂತರ ಉನ್ನತ ಶಿಕ್ಷಣದಲ್ಲಿ ವಿಶ್ವ ಇತಿಹಾಸ, ಭಾರತೀಯ ಆಡಳಿತ, ಇಂಗ್ಲಿಷ್ ಮತ್ತು ಸಂಸ್ಕೃತ ವಿಷಯಗಳನ್ನು ಆಯ್ದುಕೊಂಡು ತಮ್ಮ ವ್ಯಕ್ತಿತ್ವಕ್ಕೊಂದು ಭದ್ರ ಬುನಾದಿ ಹಾಕಿಕೊಂಡರು. ಈ ಹಂತದಲ್ಲೇ ಅವರು ಸಮಾಜವಾದಿ ವಿಚಾರಗಳಿಂದ ಆಕರ್ಷಿತರಾಗಿ ಅಖಿಲ ಭಾರತ ವಿದ್ಯಾರ್ಥಿ ಒಕ್ಕೂಟದ ಚಟುವಟಿಕೆಗಳಲ್ಲಿ ಸಕ್ರಿಯರಾಗಿ, ವಸಾಹತುಶಾಹಿ ಮತ್ತು ಎಲ್ಲ ರೀತಿ ಅನ್ಯಾಯಗಳ ವಿರುದ್ಧದ ಹೋರಾಟದ ಪಯಣ ಆರಂಭಿಸಿದರು.

೧೯೩೭ ಮೇ ೧. ಅಂದು ಮಧು ಅವರ ೧೫ನೇ ಹುಟ್ಟು ಹಬ್ಬ. ಮೇ ದಿನದ ಅಂಗವಾಗಿ ನಡೆದ ಮೆರವಣಿಗೆಯಲ್ಲಿ ಲಿಮೆಯೆ ಭಾಗವಹಿಸಿದ್ದರು. ಈ ಮೆರವಣಿಗೆಯ

ಮೇಲೆ ಆರೆಸ್ಸೆಸ್ ಕಾರ್ಯಕರ್ತರಿಂದ ತೀವ್ರ ಹಲ್ಲೆ ನಡೆದು ಮೆರವಣಿಗೆ ಮುಂಚೂಣಿಯಲ್ಲಿದ್ದ ಮುಖಂಡರಾದ ಸೇನಾಪತಿ ಬಾಪಟ್ ಮತ್ತು ಎಸ್.ಎಂ.ಜೋಷಿ ತೀವ್ರ ಗಾಯಗೊಂಡರು. ಇದೇ ಲಿಮಯೆ ಅವರ ರಾಜಕೀಯ ಮತ್ತು ಹೋರಾಟ ಜೀವನದ ಮೊದಲ ಹೆಜ್ಜೆ. ಇಲ್ಲಿಂದ ಎನ್.ಜಿ.ಗೋರೆ, ಎಸ್.ಎಂ.ಜೋಷಿ ಮತ್ತು ಪಾಂಡುರಂಗ ಎಸ್. ಸಾಣೆ ಅವರ ಆತ್ಮೀಯ ಒಡನಾಟದಲ್ಲಿ ಬೆಳೆದ ಅವರು ಸ್ವಾತಂತ್ರ್ಯ ಸಂಗ್ರಾಮದೆಡೆಗೆ ತೀವ್ರವಾಗಿ ಸೆಳೆಯಲ್ಪಟ್ಟು ೧೯೩೮ರ ಡಿಸೆಂಬರ್‌ನಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಮತ್ತು ಕಾಂಗ್ರೆಸ್ ಸೋಷಿಯಲಿಸ್ಟ್ ಪಾರ್ಟಿಗಳಲ್ಲಿ ಪೂರ್ಣ ಪ್ರಮಾಣದ ಕಾರ್ಯಕರ್ತರಾಗಿ ಮಾರ್ಪಟ್ಟರು.

ತಮ್ಮ ಬುದ್ಧಿಮತ್ತೆ ಮತ್ತು ಸಂಘಟನಾ ಕೌಶಲ್ಯಗಳ ಮೂಲಕ ೧೯೩೯ರಲ್ಲಿ ಲಿಮಯೆ ತಮ್ಮ ೧೭ನೇ ವಯಸ್ಸಿನಲ್ಲೇ ಕಾಂಗ್ರೆಸ್ ಸಮಾಜವಾದಿ ಪಕ್ಷದ ಪುಣೆ ಘಟಕದ ಪ್ರಧಾನ ಕಾರ್ಯದರ್ಶಿಯಾದರು.

೧೯೪೦ ಅಕ್ಟೋಬರ್‌ನಿಂದ ಆರಂಭವಾದ ವಿಶ್ವ ಯುದ್ಧ ವಿರೋಧಿ ಆಂದೋಲನದಲ್ಲಿ ಭಾಗವಹಿಸಿದ ಮಧು ಅವರು ಬ್ರಿಟಿಷ್ ಪ್ರಭುತ್ವದಿಂದ ಮೊದಲ ಬಾರಿಗೆ ಬಂಧಿಸಲ್ಪಟ್ಟು ಧುಲಿಯಾ ಜೈಲಿನಲ್ಲಿ ೧ ವರ್ಷ ಕಳೆಯಬೇಕಾಯಿತು. ನಂತರ ಮಹಾರಾಷ್ಟ್ರದಾದ್ಯಂತ ರಾಷ್ಟ್ರೀಯ ಸೇವಾದಳ ಮತ್ತು ಯುವಕರಿಗಾಗಿ ಶಿಬಿರಗಳ ಸಂಘಟನೆಯಲ್ಲಿ ತೊಡಗಿಕೊಂಡ ಅವರು 'ಕ್ವಿಟ್ ಇಂಡಿಯಾ' ಚಳುವಳಿಯ ಘೋಷಣೆಯ ಸಂದರ್ಭ ಗಾಂಧೀಜಿ ಮುಂಬೈಗೆ ಬಂದಾಗ ಮೊದಲ ಬಾರಿ ಅವರನ್ನು ಹತ್ತಿರದಿಂದ ಕಂಡು ಅವರ ಪ್ರಭಾವ ವಲಯದಲ್ಲಿ ಬಂಧಿತರಾದರು. ನಂತರದಲ್ಲೇ ಗಾಂಧೀಜಿಯೂ ಸೇರಿ ಬಹುತೇಕ ಹಿರಿಯ ಕಾಂಗ್ರೆಸ್ ನಾಯಕರ ಬಂಧನವಾದಾಗ ಮಧು ಅವರು ಅಚ್ಯುತ್ ಪಟವರ್ಧನ್, ಅರುಣಾ ಆಸೀಫ್ ಅಲಿ ಮತ್ತಿತರ ಸಮಾಜವಾದಿಗಳೊಂದಿಗೆ ಭೂಗತರಾಗಿ ಚಳವಳಿ ಮುನ್ನಡೆಸಿದರು. ಭೂಗತ ಹೋರಾಟದ ಭಾಗವಾಗಿ 'ಕ್ರಾಂತಿಕಾರಿ' ಎಂಬ ಪತ್ರಿಕೆಯನ್ನು ಪ್ರಾರಂಭಿಸಿದರು. ಆದರೆ ಸ್ವಲ್ಪ ಸಮಯದಲ್ಲೇ ಬ್ರಿಟಿಷ್ ಸರ್ಕಾರ ಮಧುಲಿಮಯೆ ಅವರನ್ನು ಬಂಧಿಸಿ, ಯಾವುದೇ ವಿಚಾರಣೆ ಇಲ್ಲದೆ ವರ್ಲಿ, ಯೆರವಾಡ ಮತ್ತು ವೈಸಪುರ ಜೈಲುಗಳಿಗೆ ತಳ್ಳಿತು.

೧೯೪೫ರಲ್ಲಿ ಎಲ್ಲ ರಾಜಕೀಯ ಸೆರೆಯಾಳುಗಳೊಂದಿಗೆ ಬಿಡುಗಡೆಯಾದ ಮಧು ಅವರು ನಂತರ ಮಹಾರಾಷ್ಟ್ರದಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷದ ಸಂಘಟನೆಯಲ್ಲಿ ತೊಡಗಿಕೊಂಡರು. ೧೯೪೭ರಲ್ಲಿ ಬೆಲ್ಜಿಯಂನ ಆಂಟ್‌ವೆರ್ಪ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ಸಮಾಜವಾದಿ ಸಮ್ಮೇಳನಕ್ಕೆ ಭಾರತದ ಏಕೈಕ ಪ್ರತಿನಿಧಿಯಾಗಿ ಹೋದ ಮಧು ಲಿಮಯೆ ಆ ಸಂದರ್ಭದಲ್ಲಿ ಯೂರೋಪಿನ ಐದು ದೇಶಗಳ ಪ್ರವಾಸ ಮಾಡಿ ತಮ್ಮ ರಾಜಕೀಯ ಅನುಭವವನ್ನು ಶ್ರೀಮಂತಗೊಳಿಸಿಕೊಂಡರು. ೧೯೪೮ರಲ್ಲಿ

ಸಮಾಜವಾದಿಗಳು ಕಾಂಗ್ರೆಸ್‌ನಿಂದ ಹೊರಬರಬೇಕಾಗಿ ಬಂದಾಗ ಮಧು ಅವರೂ ಕಾಂಗ್ರೆಸ್‌ನಿಂದ ಹೊರಬಂದರು. ೧೯೪೮ರಲ್ಲಿ ನಾಸಿಕ್‌ನಲ್ಲಿ ನಡೆದ ಸಮಾಜವಾದಿ ಪಕ್ಷದ ರಾಷ್ಟ್ರೀಯ ಸಮಾವೇಶದಲ್ಲಿ ರಾಷ್ಟ್ರೀಯ ಕಾರ್ಯಕಾರಿಣಿಗೆ ಆಯ್ಕೆಯಾದ ಅವರು ಪಕ್ಷದ ವಿದೇಶಾಂಗ ಕಾರ್ಯದರ್ಶಿಯಾಗಿಯೂ ಕಾರ್ಯ ನಿರ್ವಹಿಸಿದರು. ೧೯೫೨ರಲ್ಲಿ ಪ್ರೊ. ಚಂಪಾ ಗುಪ್ತೆ ಅವರನ್ನು ಪ್ರೇಮಿಸಿ ಮದುವೆಯಾದ ಲಿಮಯೆಗೆ ಪತ್ನಿಯು ವೈಯಕ್ತಿಕ ಮತ್ತು ಸಾರ್ವಜನಿಕ ಜೀವನಗಳೆರಡರಲ್ಲೂ ಅತ್ಯಂತ ಪ್ರೋತ್ಸಾಹದಾಯಕ ಮತ್ತು ಪ್ರೇರಣಾ ಶಕ್ತಿ ಎನಿಸಿದರು. ೧೯೫೩ರಲ್ಲಿ ಜೆಪಿ ಅವರ ಒತ್ತಾಸೆಯಂತೆ ಏಷಿಯನ್ ಸೋಷಿಯಲಿಸ್ಟ್ ಬ್ಯೂರೋದ ಕಾರ್ಯದರ್ಶಿಯಾದ ಮಧು ಅವರು ೧೯೫೩-೫೪ರಲ್ಲಿ ನೆಹ್ರೂ-ಜೆಪಿ ಮಾತುಕತೆಗಳೇ ನೆಪವಾಗಿ ಪಕ್ಷದಲ್ಲಿ ಸೈದ್ಧಾಂತಿಕ ಗೊಂದಲಗಳೇರ್ಪಟ್ಟಾಗ ಲೋಹಿಯಾರ ಜೊತೆ ನಿಂತ ಕಾರಣಕ್ಕಾಗಿ ಪಕ್ಷದಿಂದ ಅಮಾನತುಗೊಳ್ಳಬೇಕಾಯಿತು. ನಂತರ ೧೯೫೫ರಲ್ಲಿ ಲೋಹಿಯಾ ಸ್ಥಾಪಿಸಿದ ಸಮಾಜವಾದಿ ಪಕ್ಷವನ್ನು ಸೇರಿದರು.

೧೯೪೬ರಲ್ಲಿ ಲೋಹಿಯಾರಿಂದ ಮೊದಲ್ಗೊಂಡಿದ್ದ ಗೋವಾ ಸ್ವಾತಂತ್ರ್ಯ ಹೋರಾಟಕ್ಕೆ ೫೦ರ ದಶಕದಲ್ಲಿ ಧುಮುಕಿದ ಲಿಮಯೆಯವರು ಅಲ್ಲಿನ ಪೋರ್ಚುಗೀಸ್ ಸರ್ಕಾರದಿಂದ ದೈಹಿಕವಾಗಿ ತೀವ್ರ ಹಲ್ಲೆಗೊಳಗಾಗಿ, ೫ ತಿಂಗಳು ಪೊಲೀಸ್ ವಶದಲ್ಲಿದ್ದರು. ಮಾತ್ರವಲ್ಲ, ೧೯೫೫ರಲ್ಲಿ ಪೋರ್ಚುಗೀಸ್ ಸೈನ್ಯದ ನ್ಯಾಯಾಧಿಕರಣ ಅವರಿಗೆ ೧೨ ವರ್ಷ ಜೈಲು ಶಿಕ್ಷೆ ಘೋಷಿಸಿತು. ಅದಕ್ಕವರು ಗಾಂಧಿ ಪರಂಪರೆಯ ಸತ್ಯಾಗ್ರಹಿ ಯಾಗಿ ತಾವು ಇದಕ್ಕೆ ಪ್ರತಿರೋಧ ವ್ಯಕ್ತಪಡಿಸುವುದಿಲ್ಲವೆಂದರು. ಭಾರತ ಸರ್ಕಾರದ ಮಧ್ಯಪ್ರವೇಶದಿಂದಾಗಿ ಅವರನ್ನು ಬಿಡುಗಡೆಗೊಳ್ಳುವವರೆಗೂ ಪೋರ್ಚುಗೀಸರ ವಶದಲ್ಲಿದ್ದ ೧೯ ತಿಂಗಳಲ್ಲಿ ಅವರು ಬರೆದ ಜೈಲು ದಿನಚರಿ ೧೯೯೬ರಲ್ಲಿ ನಡೆದ ಗೋವಾ ಹೋರಾಟದ ಸುವರ್ಣ ಮಹೋತ್ಸವ ಸಂದರ್ಭ ಪುಸ್ತಕ ರೂಪದಲ್ಲಿ ಪ್ರಕಟಗೊಂಡಿತು.

೧೯೫೭ರ ಲೋಕಸಭಾ ಚುನಾವಣೆಗಳಲ್ಲಿ ಮುಂಬೈನ ಬಾಂದ್ರಾ ಕ್ಷೇತ್ರದಿಂದ ಲಿಮಯೆ ಸ್ಪರ್ಧಿಸಿದರಾದರೂ ಗೆಲ್ಲಲಾಗಲಿಲ್ಲ. ಆದರೆ ನಂತರದ ದಿನಗಳಲ್ಲಿ ಅಲ್ಲಿ ಕಾರ್ಮಿಕ ನಾಯಕ ಜಾರ್ಜ್ ಫರ್ನಾಂಡೀಸರ ಜೊತೆಗೂಡಿ ರೈಲ್ವೇ ಮತ್ತು ಬಂದರು ಕಾರ್ಮಿಕರ ಸಂಘಟನೆಯಲ್ಲಿ ತೊಡಗಿಕೊಂಡು ಸಮಾಜವಾದಿ ಪಕ್ಷದ ಪರವಾಗಿ ಸುಭದ್ರವಾದ ಕಾರ್ಮಿಕ ಸಂಘಟನೆಗಳನ್ನು ಕಟ್ಟುವಲ್ಲಿ ಯಶಸ್ವಿಯಾದರು. ೧೯೫೮ರ ಗಯಾ ಸಮಾವೇಶದಲ್ಲಿ ಪಕ್ಷದ ಅಧ್ಯಕ್ಷರಾಗಿ ಆಯ್ಕೆಯಾದ ಅವರು ಸಮಾಜವಾದದ ಆಶಯಗಳು ಸಾಮಾಜಿಕವಾಗಿ ಮೂರ್ತರೂಪಗೊಳ್ಳುವ ದಿಶೆಯಲ್ಲಿ ಪಕ್ಷವನ್ನು ಸಂಘಟಿಸುವ ಕೆಲಸಗಳಲ್ಲಿ ತೊಡಗಿದರು. ಇದರ ಫಲವಾಗಿಯೇ ಪಕ್ಷದ ಬನಾರಸ್ ಸಮಾವೇಶ(೧೯೫೯) ಜಾತಿ ವಿನಾಶದ ಅಂಗವಾಗಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ

ನೀಡುವ ನೀತಿಯನ್ನು ಅಂಗೀಕರಿಸಿತು. ೧೯೬೪ರಲ್ಲಿ ಪಿಎಸ್‌ಪಿ ಮತ್ತು ಸಮಾಜವಾದಿ ಪಕ್ಷಗಳು ವಿಲೀನಗೊಂಡು ಸಂಯುಕ್ತ ಸಮಾಜವಾದಿ ಪಕ್ಷ ಸ್ಥಾಪಿತವಾದ ಸಂದರ್ಭದಲ್ಲಿ ಬಿಹಾರದ ಮುಂಘೈರ್ ಕ್ಷೇತ್ರಕ್ಕಾಗಿ ನಡೆದ ಉಪಚುನಾವಣೆಯಲ್ಲಿ ಸ್ಪರ್ಧಿಸಿದ ಲಿಮಯೆ ವಿಜಯಿಯಾಗಿ ಮೊದಲ ಬಾರಿಗೆ ಲೋಕಸಭೆ ಪ್ರವೇಶಿಸಿದರು. ನಂತರ ಸತತವಾಗಿ ನಾಲ್ಕು ಬಾರಿ ಬಿಹಾರದಿಂದಲೇ ಲೋಕಸಭೆಗೆ ಆಯ್ಕೆಯಾದ ಅವರು ಪಕ್ಷದ ಸಂಸದೀಯ ಪಕ್ಷದ ನಾಯಕರಾಗಿ ಲೋಕಸಭಾ ಕಾರ್ಯಕಲಾಪಗಳಿಗೆ ತಮ್ಮ ವಿದ್ವತ್ಪೂರ್ಣ ಮತ್ತು ಜನಪರ ಮಾತುಗಾರಿಕೆಯ ಮೂಲಕ ಒಂದು ಹೊಸ ಘನತೆಯನ್ನೇ ಒದಗಿಸಿದರು.

ಸಮಾನತೆಯ ಆಶಯಗಳ ಜೊತೆಗೆ ನಾಗರಿಕ ಹಕ್ಕುಗಳ ಬಲವಾದ ಸಮರ್ಥಕರೂ ಆಗಿದ್ದ ಲಿಮಯೆಯವರು, ಅಲಿಪ್ತ ವಿದೇಶಾಂಗ ನೀತಿಯ ಪ್ರಬಲ ಬೆಂಬಲಿಗರೂ ಆಗಿದ್ದರು. ಅವರು ಅಣ್ವಸ್ತ್ರ ಹೊಂದಿರುವ ಎಲ್ಲ ದೇಶಗಳು ತಮ್ಮಲ್ಲಿನ ಈ ಎಲ್ಲ ಅಸ್ತ್ರಗಳನ್ನು ನಾಶ ಮಾಡುವ ತನಕ ಭಾರತ ಅಣ್ವಸ್ತ್ರ ನಿಷೇಧ ನೀತಿಗೆ ಸಮ್ಮತಿ ನೀಡಬಾರದೆಂದೂ, ನಾವು ನಮ್ಮದೇ ಅಣು ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿಕೊಳ್ಳ ಬೇಕೆಂದೂ ಪ್ರತಿಪಾದಿಸುತ್ತಿದ್ದರು. ಬಂಗ್ಲಾ ಯುದ್ಧ ಸಮಯದಲ್ಲಿ ಬಂಗ್ಲಾ ದೇಶದ ವಿಮೋಚನೆಯ ಪರವಾಗಿ ಜಾಗತಿಕ ಅಭಿಪ್ರಾಯವನ್ನು ರೂಪಿಸಲು ಜೆಪಿಯವ ರೊಂದಿಗೆ ಕೆಲಸ ಮಾಡಿದರು.

ಎಪ್ಪತ್ತರ ದಶಕದ ಆರಂಭದಲ್ಲಿ ಇಂದಿರಾ ಗಾಂಧಿ ನೇತೃತ್ವದ ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರ ಮತ್ತು ಪ್ರಜಾಪ್ರಭುತ್ವ ವಿರೋಧಿ ಆಡಳಿತದ ವಿರುದ್ಧದ ಆಂದೋಲನದಲ್ಲಿ ಜೆಪಿಯವರಿಗೆ ಸಾಥ್ ನೀಡಿದ ಮಧು, ಇಂದಿರಾ ಸರ್ಕಾರ ತುರ್ತು ಪರಿಸ್ಥಿತಿ ಘೋಷಿಸಿ ವಿರೋಧ ಪಕ್ಷಗಳ ಎಲ್ಲ ನಾಯಕರನ್ನು ಸೆರೆಮನೆಗೆ ದೂಡಿದಾಗ ಮಧ್ಯ ಪ್ರದೇಶದ ಹಲವು ಜೈಲುಗಳಲ್ಲಿ ಬಂಧಿತರಾಗಿದ್ದರು. ಇಂದಿರಾ ಸಂವಿಧಾನಕ್ಕೇ ತಿದ್ದುಪಡಿ ತಂದು ಲೋಕಸಭೆಯ ಅವಧಿಯನ್ನು ಏಳು ವರ್ಷಗಳಿಗೆ ವಿಸ್ತರಿಸಿದಾಗ ಅವರು ತಮ್ಮ ಕಿರಿಯ ಸಮಾಜವಾದಿ ಗೆಳೆಯ ಶರದ್ ಯಾದವ್‌ರೊಂದಿಗೆ ಲೋಕಸಭಾ ಸದಸ್ಯತ್ವಕ್ಕೇ ರಾಜೀನಾಮೆ ನೀಡಿದರು.

೧೯೭೭ರಲ್ಲಿ ತುರ್ತುಪರಿಸ್ಥಿತಿಯ ನಂತರ ಜನತಾ ಪಕ್ಷವನ್ನು ರೂಪಿಸುವಲ್ಲಿ ಜೆಪಿಯವರೊಂದಿಗೆ ಕೈಜೋಡಿಸಿದ ಲಿಮಯೆ ಈ ಹೊಸ ಪಕ್ಷ ಚುನಾವಣೆಗಳಲ್ಲಿ ಗೆದ್ದು ಮೊದಲ ಕಾಂಗ್ರೆಸ್ಸೇತರ ಸರ್ಕಾರ ರಚನೆಯಾದಾಗ ಮಂತ್ರಿಯಾಗಲು ನಿರಾಕರಿಸಿ ಪಕ್ಷದ ಪ್ರಧಾನ ಕಾರ್ಯದರ್ಶಿಗಳಲ್ಲೊಬ್ಬರಾಗಿ ಪಕ್ಷ ಸಂಘಟಿಸುವ ಜವಾಬ್ದಾರಿ ಹೊತ್ತರು. ಆದರೆ ಜನತಾಪಕ್ಷದಲ್ಲಿ ಸಮಾಜವಾದಿ ಪಕ್ಷದೊಂದಿಗೆ ಲೀನಗೊಂಡಿದ್ದ ಜನಸಂಘದ ಸದಸ್ಯರು ತಮ್ಮ ಆರೆಸ್ಸೆಸ್ ಸದಸ್ಯತ್ವವನ್ನು ಬಿಟ್ಟುಕೊಡದಿದ್ದಾಗ ಲಿಮಯೆ ಪ್ರತಿಭಟಿಸಿದರು. ಗಾಂಧಿ ಸಮಾಜವಾದದ ದೀಕ್ಷೆ ಪಡೆದಿದ್ದ ಜನತಾ ಪಕ್ಷವು ಮೂಲ ಜನಸಂಘೀಯರ ಮುಂದುವರೆದ ಆರೆಸ್ಸೆಸ್ ನಿಷ್ಠೆಯಿಂದ ಕ್ರಮೇಣ ಒಂದು ಫ್ಯಾಸಿಸ್ಟ್

ಪಕ್ಷವಾಗಿ ಪರಿವರ್ತಿತವಾಗುತ್ತದೆಂಬ ಆತಂಕದಲ್ಲಿ ಅವರು ಪಕ್ಷ ಸಂಘಟನೆಯ ವಿಷಯದಲ್ಲಿ ಎತ್ತಿದ ತಾತ್ವಿಕ ಪ್ರಶ್ನೆಗಳು ಜನತಾ ಪಕ್ಷದಲ್ಲಿ ಒಡಕಿಗೆ ಕಾರಣವಾಗಿ ಅದರ ಸರ್ಕಾರ ಅಧಿಕಾರ ಕಳೆದುಕೊಳ್ಳುವಂತಾಯಿತು. ನಂತರ ಚರಣಸಿಂಗ್ ನೇತೃತ್ವದ ಜನತಾ(ಸೆಕ್ಯುಲರ್) ಪಕ್ಷದ ನಾಯಕರಾಗಿದ್ದ ಲಿಮೆಯೆ ಸ್ವಲ್ಪ ಕಾಲದಲ್ಲಿಯೇ ಅದನ್ನೂ ತ್ಯಜಿಸಿ, ಕೊನೆಗೆ ೧೯೮೨ರಲ್ಲಿ ರಾಜಕೀಯದಿಂದಲೇ ನಿವೃತ್ತಿ ಪಡೆದರು. ವಿಪರ್ಯಾಸ ವೆಂದರೆ ಅವರ ಸಾರ್ವಜನಿಕ ಜೀವನದ ಕೊನೆಯ ರಾಜಕೀಯ ಪ್ರತಿಪಾದನೆ ಎಂದರೆ, ಯಾವ ಪಕ್ಷವನ್ನು ಅವರು ರಾಜಕೀಯ ಜೀವನದುದ್ದಕ್ಕೂ ವಿರೋಧಿಸುತ್ತಾ ಬಂದಿದ್ದರೋ ಆ ಕಾಂಗ್ರೆಸ್ ಪಕ್ಷವನ್ನು ಕೋಮುವಾದಿ ರಾಜಕಾರಣದ ವಿರುದ್ಧದ ಹೋರಾಟದ ಅಸ್ತ್ರವಾಗಿ ಬಲಪಡಿಸಬೇಕು ಎಂಬುದಾಗಿತ್ತು!

ಸಕ್ರಿಯ ರಾಜಕಾರಣದಿಂದ ನಿವೃತ್ತಿ ಹೊಂದಿದ ಮೇಲೂ, ೧೯೯೫ರ ಜನವರಿ ೮ರಂದು ನವದೆಹಲಿಯಲ್ಲಿ ನಿಧನ ಹೊಂದುವವರೆಗೂ ಮಧು ಲಿಮಯೆ ನಿರಂತರವಾಗಿ ಬರವಣಿಗೆಯಲ್ಲಿ ತೊಡಗಿಕೊಂಡಿದ್ದರು. ಮರಾಠಿ, ಹಿಂದಿ ಮತ್ತು ಇಂಗ್ಲಿಷ್‌ಗಳಲ್ಲಿ ನೂರಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿರುವ ಅವರು ಮುಖ್ಯವಾಗಿ ಬರೆದದ್ದು ಭಾರತದ ಸಮಾಜವಾದಿ, ಕಮ್ಯೂನಿಸ್ಟ್ ಚಳುವಳಿಗಳ ಇತಿಹಾಸ, ನಾಗರಿಕ ಹಕ್ಕುಗಳ ಮತ್ತು ಸಾಂವಿಧಾನಿಕ ಮೌಲ್ಯಗಳ ಮಹತ್ವದ ಬಗ್ಗೆ. ಸ್ವಾತಂತ್ರ್ಯ ಹೋರಾಟ, ಗೋವಾ ವಿಮೋಚನಾ ಹೋರಾಟ ಮತ್ತು ಸಂಸತ್ ಸದಸ್ಯತ್ವ–ಇವುಗಳಿಗೆ ಪ್ರತಿಫಲವಾಗಿ ಸರ್ಕಾರ ನೀಡಿದ ಯಾವುದೇ ಪ್ರಶಸ್ತಿ, ಸನ್ಮಾನ, ಪಿಂಚಣಿ ಇತ್ಯಾದಿಗಳನ್ನು ಸ್ವೀಕರಿಸಲು ನಿರಾಕರಿಸಿದ ಮಧು ಲಿಮಯೆ ಈಗ ಸಂಪೂರ್ಣ ಮರೆಯೇ ಆಗಿ ಹೋಗಿರುವ ಸಾರ್ವಜನಿಕ ಸೇವೆಯ ಅತ್ಯುತ್ತಮ ಮೌಲ್ಯಗಳ ಪ್ರತೀಕವಾಗಿ ಬಹುಕಾಲ ನಮ್ಮ ನೆನಪಿನಲ್ಲಿ ಉಳಿಯುತ್ತಾರೆ

◆◆

೧೧

ಧೀರ ಹೋರಾಟಗಾರ: ಜಾರ್ಜ್ ಫರ್ನಾಂಡೀಸ್

ಡಿ.ಎಸ್. ನಾಗಭೂಷಣ

ಜಾರ್ಜ್ ಫರ್ನಾಂಡೀಸ್ ಎಂಬುದು ಸ್ವಾತಂತ್ರ್ಯೋತ್ತರ ಭಾರತದ ಕಾರ್ಮಿಕ ಚಳುವಳಿ ಮತ್ತು ರಾಜಕೀಯ ಕ್ಷೇತ್ರಗಳ ಬಹುದೊಡ್ಡ ಹೆಸರು. ೧೯೭೪ರ ಅಖಿಲ ಭಾರತ ರೈಲ್ವೇ ನೌಕರರ ಚಳುವಳಿ ಮತ್ತು ೧೯೭೭ರ ತುರ್ತು ಪರಿಸ್ಥಿತಿ ವಿರೋಧದ ಬರೋಡಾ ಡೈನಾಮೈಟ್ ಪ್ರಕರಣ ಜಾರ್ಜ್ ಫರ್ನಾಂಡೀಸರ ಹೆಸರನ್ನು ಭಾರತಾದ್ಯಂತ ಮನೆ ಮಾತಾಗಿಸಿತು. ೧೯೭೭ರಲ್ಲಿ ಜನತಾ ಪಕ್ಷ ಕಾಂಗ್ರೆಸ್ಸನ್ನು ಸೋಲಿಸಿ ಅಧಿಕಾರಕ್ಕೆ ಬಂದು, ಡೈನಾಮೈಟ್ ಪ್ರಕರಣದಿಂದಾಗಿ ಸೆರೆಮನೆಯಲ್ಲಿದ್ದ ಫರ್ನಾಂಡೀಸ್ ಬಿಡುಗಡೆಯಾದಾಗ ಇಡೀ ಭಾರತದ ಸ್ವಾತಂತ್ರ್ಯ ಪ್ರಿಯರ, ನಿರ್ದಿಷ್ಟವಾಗಿ ಯುವಜನರ ಕಣ್ಮಣಿಯಾಗಿದ್ದರು. ಅದು 'ಭಾರತಬಿಟ್ಟು ತೊಲಗಿ' ಚಳುವಳಿಯಲ್ಲಿ ಭೂಗತರಾಗಿ ಬ್ರಿಟಿಷ್ ಪ್ರಭುತ್ವದ ವಿರುದ್ಧ ಹೋರಾಡಿದ ಜೆಪಿ ಮತ್ತು ಲೋಹಿಯಾ, ಭಾರತದ ಸ್ವಾತಂತ್ರ್ಯ ಘೋಷಣೆಯ ಸಂಬಂಧದ ಮಾತುಕತೆಗೆ ಮುನ್ನ ಲಾಹೋರ್ ಸೆರೆಮನೆಯಿಂದ ಬಿಡುಗಡೆಯಾದ ಸಂದರ್ಭಕ್ಕೆ, ಆ ಸಂದರ್ಭದ ಜನರ ಸಂಭ್ರಮಕ್ಕೆ ಹೋಲಿಸಬಹುದಾದ ರೋಚಕ ಐತಿಹಾಸಿಕ ಕ್ಷಣವಾಗಿತ್ತು.

ಜಾರ್ಜ್ ಕನ್ನಡಿಗರು. ಅವರು ಮಂಗಳೂರಿನ ರೋಮನ್ ಕ್ಯಾಥೋಲಿಕ್ ಕುಟುಂಬವೊಂದರಲ್ಲಿ ೧೯೩೦ರ ಜೂನ್ ೩ರಂದು ಜನಿಸಿದರು. ಮನೆ ಮಾತು ಕೊಂಕಣಿಯಾದರೂ, ಕನ್ನಡ ಅವರ ಸಾರ್ವಜನಿಕ ಬಳಕೆಯ ಮತ್ತು ಶಿಕ್ಷಣ ಪಡೆದ ಭಾಷೆಯಾಗಿತ್ತು. ಆನಂತರ ಅವರು ಈ ಎರಡು ಭಾಷೆಗಳ ಜೊತೆಗೆ ಲ್ಯಾಟಿನ್ ಸೇರಿ

ಇತರ ಏಳು ಭಾಷೆಗಳಲ್ಲಿ ಪರಿಣಿತರಾದರು. ಅವರು ಬಹುಕಾಲ ಕರ್ನಾಟಕದಲ್ಲಿ ಇರಲಿಲ್ಲವಾದರೂ, ಅವರು ತಮ್ಮ ಕಾರ್ಮಿಕ ಸಂಘಟನೆಯ ಕೆಲಸ ಆರಂಭಿಸಿದ್ದು ಕರ್ನಾಟಕದಲ್ಲಿಯೇ. ಧಾರ್ಮಿಕ ಶ್ರದ್ಧೆಯ ಕುಟುಂಬವಾಗಿದ್ದ ಅವರ ಕುಟುಂಬ ಜಾರ್ಜ್‌ರನ್ನು ಅವರ ೧೬ನೇ ವಯಸ್ಸಿನಲ್ಲಿ ಬೆಂಗಳೂರಿನ ಸೇಂಟ್ ಪೀಟರ್ ಧಾರ್ಮಿಕ ಶಿಕ್ಷಣ ಶಾಲೆಗೆ ಸೇರಿಸಿದರು. ಅವರು ಅಲ್ಲಿ ರೋಮನ್ ಕ್ಯಾಥೋಲಿಕ್ ಪೌರೋಹಿತ್ಯದ ಸಂಬಂಧವಾಗಿ ಮೂರು ವರ್ಷಗಳ ಶಿಕ್ಷಣವನ್ನು ಪೂರೈಸಿದರಾದರೂ, ಅಲ್ಲಿನ ವ್ಯವಸ್ಥೆಯಲ್ಲಿನ ವಿವಿಧ ಶ್ರೇಣಿಗಳು ಮತ್ತು ತಾರತಮ್ಯಗಳನ್ನು ಕಂಡು ವಿಚಲಿತರಾಗಿದ್ದರು.

ಹಾಗಾಗಿ ಧಾರ್ಮಿಕ ಶ್ರದ್ಧೆ ಕಳೆದುಕೊಂಡ ಜಾರ್ಜ್ ಅವರು ಮಂಗಳೂರಿಗೆ ಹಿಂದಿರುಗಿ ಶೋಷಿತರ, ದುರ್ಬಲರ ಸಂಘಟನೆಗೆ ತೊಡಗಿದರು. ವಿಶೇಷವಾಗಿ ಸಾರಿಗೆ ಮತ್ತು ಹೋಟೆಲ್ ಕಾರ್ಮಿಕರನ್ನು ಅವರು ಸಂಘಟಿಸಿದರು. ಆಗ ಮನೆಯಿಂದ ದೂರ ಸರಿದಿದ್ದ ಜಾರ್ಜ್‌ರನ್ನು ಗುರುತಿಸಿ, ಆಶ್ರಯ ನೀಡಿ ಪ್ರೋತ್ಸಾಹಿಸಿದವರು ಸಮಾಜವಾದಿಯಾಗಿದ್ದ ಅಮ್ಮೆಂಬಳ ಬಾಳಪ್ಪ ಅವರು. ಇವರ ಸಲಹೆಯಂತೆಯೇ ಜಾರ್ಜ್ ಜೀವನೋಪಾಯ ಅರಸಿ ೧೯೪೯ರಲ್ಲಿ ಮುಂಬೈಗೆ ಹೊರಟದ್ದು ಕೂಡ.

ಮುಂಬೈನಲ್ಲಿ ಉದ್ಯೋಗಕ್ಕಾಗಿ ಅಲೆಯುತ್ತಾ, ಸಮುದ್ರದ ಮರಳಿನ ಮೇಲೆಯೇ ರಾತ್ರಿಗಳನ್ನು ಕಳೆಯುತ್ತಿದ್ದ ಜಾರ್ಜ್‌ರಿಗೆ ಆಗ ಪ್ರಸಿದ್ಧ ಕಾರ್ಮಿಕ ನಾಯಕರಾಗಿದ್ದ ಪ್ಲಾಸಿಡ್ ಡಿ'ಮೆಲ್ಲೋರ ಪರಿಚಯವಾಯಿತು. ಹುಡುಗನ ಸಾಮಾಜಿಕ ಕಳಕಳಿ, ಉತ್ಸಾಹ ಮತ್ತು ಶ್ರದ್ಧೆಗಳನ್ನು ಗುರುತಿಸಿದ ಡಿ'ಮೆಲ್ಲೋ ಜಾರ್ಜ್‌ರನ್ನು ಕಾರ್ಮಿಕ ಸಂಘಟನೆಯಲ್ಲಿ ತೊಡಗಿಸಿದರು. ಆರಂಭದಲ್ಲಿ ಹೋಟೆಲ್ ಕಾರ್ಮಿಕರು ಮತ್ತು ಟ್ಯಾಕ್ಸಿ ಚಾಲಕರ ಸಂಘಟನೆಯಲ್ಲಿ ತೊಡಗಿ ಆ ಬೃಹತ್ ನಗರದ ಈ ಕಾರ್ಮಿಕ ಶಕ್ತಿಯ ದೊಡ್ಡ ಜಾಲವನ್ನೇ ನಿರ್ಮಿಸಿದ ಫರ್ನಾಂಡೀಸ್, ಅದರ ಹಿತಾಸಕ್ತಿ ಮತ್ತು ಕಲ್ಯಾಣ ಕಾರ್ಯಕ್ರಮಗಳಿಗಾಗಿ ದೊಡ್ಡ ಹೋರಾಟಗಳನ್ನೇ ಅರಂಭಿಸಿ, ಮುಷ್ಕರಗಳನ್ನು ಸಂಘಟಿಸಿ ಯಶಸ್ವಿಯೂ ಆದರು. ಅನೇಕ ಬಾರಿ ವಿವಿಧ ಅವಧಿಗಳ ಸೆರೆಮನೆವಾಸಗಳಿಗೂ ಅವರು ತುತ್ತಾದರು. ಇದರಿಂದ ಇತರ ಕಾರ್ಮಿಕ ವಲಯಗಳಲ್ಲೂ ಅವರ ಜನಪ್ರಿಯತೆ ಹೆಚ್ಚಿತು. ಅವರು ಹಡಗುಕಟ್ಟೆ ಮತ್ತು ರೈಲ್ವೇ ಇಲಾಖೆಗಳ ಕಾರ್ಮಿಕರ ಜನಪ್ರಿಯ ನಾಯಕರಾಗಿಯೂ ಮೂಡಿದರು.

ಸಮಾಜವಾದಿ ಪಕ್ಷದ ಕಾರ್ಮಿಕ ವಿಭಾಗವಾಗಿದ್ದ ಹಿಂದ್ ಮಜದೂರ್ ಸಭಾದ ನಾಯಕರಾಗಿದ್ದ ಡಿಮೆಲ್ಲೋ ಜಾರ್ಜರನ್ನು ಸಮಾಜವಾದಿ ಪಕ್ಷದ ನಾಯಕರಾಗಿದ್ದ ರಾಮಮನೋಹರ ಲೋಹಿಯಾರಿಗೆ ಪರಿಚಯಿಸಿದರು. ಲೋಹಿಯಾರ ವ್ಯಕ್ತಿತ್ವ ಮತ್ತು ವಿಚಾರಗಳಿಂದ ಪ್ರಭಾವಿತರಾದ ಜಾರ್ಜ್ ಸಮಾಜವಾದಿ ಪಕ್ಷದ ಸದಸ್ಯತ್ವ ಪಡೆದುಕೊಂಡು ರಾಜಕಾರಣದಲ್ಲೂ ಸಕ್ರಿಯವಾಗಿ ತೊಡಗಿಕೊಂಡರು. ಇದರ

ಪರಿಣಾಮವಾಗಿ ೧೯೬೧ರಲ್ಲಿ ಮುಂಬೈ ನಗರಪಾಲಿಕೆಯ ಚುನಾವಣೆಗಳಿಗೆ ಸಮಾಜವಾದಿ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆದ್ದರು. ನಂತರದ ಎರಡು ಅವಧಿಗಳಲ್ಲಿಯೂ ನಗರಪಾಲಿಕೆಯ ಸದಸ್ಯರಾಗಿ ಗೆದ್ದ ಫರ್ನಾಂಡೀಸ್ ಆ ಬೃಹತ್ ನಗರದ ಕಾರ್ಮಿಕ ಸಮುದಾಯದ ಸಮಸ್ಯೆಗಳ ಪರಿಹಾರಗಳ ವಿಷಯವಾಗಿ ದೊಡ್ಡ ಹೋರಾಟಗಳನ್ನೇ ನಡೆಸಿದರು. ಇದರ ಫಲ ಕಂಡದ್ದು ಲೋಹಿಯಾ ಅವರು ಕಾಂಗ್ರೆಸ್ಸೇತರವಾದ ಪ್ರತಿಪಾದಿಸಿದ ೧೯೬೭ರ ಲೋಕಸಭಾ ಚುನಾವಣೆಗಳಲ್ಲಿ. ಮುಂಬೈ ದಕ್ಷಿಣ ಕ್ಷೇತ್ರದಿಂದ ಸಂಯುಕ್ತ ಸಮಾಜವಾದಿ ಪಕ್ಷದ ಅಭ್ಯರ್ಥಿಯಾಗಿ ಕಾಂಗ್ರೆಸ್‌ನ ಹಿರಿಯ ನಾಯಕ ಮತ್ತು ಮುಂಬೈನ ಸುಪ್ರಸಿದ್ಧ ರಾಜಕಾರಣಿ ಎಸ್.ಕೆ. ಪಾಟೀಲ್ ವಿರುದ್ಧ ಸ್ಪರ್ಧಿಸಿದ ಜಾರ್ಜ್ ಎಲ್ಲರ ನಿರೀಕ್ಷೆಯನ್ನೂ ಹುಸಿಗೊಳಿಸಿ ಭಾರಿ ಅಂತರದಿಂದ ಗೆದ್ದೇಬಿಟ್ಟರು. ಇದರಿಂದಾಗಿ 'ಸೈಂಧವ ಹಂತಕ' (Gaint killer) ಎಂದೇ ಹೆಸರಾದ ಜಾರ್ಜ್ ಅಂದಿನಿಂದ ಅಖಿಲಭಾರತ ನಾಯಕರೂ ಆಗಿ ಮೂಡಿದರು.

ಲೋಕಸಭಾ ಸದಸ್ಯರಾದ ನಂತರ ಕಾರ್ಮಿಕ ಚಳುವಳಿಯ ನಾಯಕತ್ವವನ್ನು ತನ್ನ ಕಿರಿಯ ಸಹವರ್ತಿಗಳಿಗೆ ವಹಿಸಿದ ಫರ್ನಾಂಡೀಸ್ ಸಮಾಜವಾದಿ ರಾಜಕಾರಣದಲ್ಲಿ ತಮ್ಮನ್ನು ಹೆಚ್ಚೆಚ್ಚು ತೊಡಗಿಸಿಕೊಳ್ಳಲಾರಂಭಿಸಿದರು ಲೋಹಿಯಾ ನಿಧನಾನಂತರ ೧೯೬೯ರಲ್ಲಿ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ ನೇಮಕಗೊಂಡ ಅವರು ೧೯೭೩ರ ಹೊತ್ತಿಗೆ ಪಕ್ಷದಲ್ಲಿ ಎಷ್ಟು ವರ್ಚಸ್ವೀ ನಾಯಕರಾಗಿ ಬೆಳೆದಿದ್ದರೆಂದರೆ, ಒಡೆದು ದೂರವಾಗಿದ್ದ ಸಮಾಜವಾದಿ ಪಕ್ಷಗಳ ಎರಡು ಗುಂಪುಗಳು ಒಂದಾಗಿ ಮತ್ತೆ ಉದಯವಾದ ಏಕೀಕೃತ ಸಮಾಜವಾದಿ ಪಕ್ಷದ ಅಧ್ಯಕ್ಷರಾಗಿ ಆಯ್ಕೆಯಾದರು. ಎಪ್ಪತ್ತರ ಆ ದಶಕ ಎಂದರೆ ದೇಶ ಬಂಗ್ಲಾ ಯುದ್ಧದ ನಂತರ ಅನೇಕ ಸಂಕಷ್ಟಗಳಿಗೆ ಸಿಲುಕಿ ತಳಮಳಗಳಿಗೆ ಸಿಕ್ಕಿದ್ದ ದಶಕ. ಇಂದಿರಾ ಗಾಂಧಿಯವರ 'ಗರೀಬಿ ಹಟಾವೋ' ಘೋಷಣೆ ಪೊಳ್ಳಾಗಿ ಹೋಗಿ, ಹಣದುಬ್ಬರ, ನಿರುದ್ಯೋಗ, ಭ್ರಷ್ಟಾಚಾರ ಮುಗಿಲು ಮುಟ್ಟಿ ಪ್ರಧಾನಿ ಇಂದಿರಾ ಗಾಂಧಿಯವರ ಜನಪ್ರಿಯತೆ ಕುಸಿಯುತ್ತಿದ್ದ ಕಾಲವದು. ಸರ್ಕಾರದ ವಿರುದ್ಧ ಯುವಜನರು, ವಿದ್ಯಾರ್ಥಿಗಳು, ಕಾರ್ಮಿಕರು ಸಂಘಟಿತರಾಗಿ ಸಿಡಿದೇಳತೊಡಗಿದ್ದರು.

ಜಾರ್ಜ್ ತಮ್ಮ ನಾಯಕ ಲೋಹಿಯಾರ ಕಾಂಗ್ರೆಸ್ ವಿರೋಧಿ ರಾಜಕೀಯ ಪರಂಪರೆಗೆ ಅನುಗುಣವಾಗಿ ಇಂದಿರಾ ಸರ್ಕಾರದ ದುರಾಡಳಿತ ಮತ್ತು ಭ್ರಷ್ಟತೆಯ ವಿರುದ್ಧ ಜನಾಭಿಪ್ರಾಯ ಮೂಡಿಸಲು ಸಂಸತ್ತು ಮತ್ತು ಅದರ ಹೊರಗೆ ಶ್ರಮಿಸಿದರು. ಆ ಹೊತ್ತಿಗೆ ರೈಲ್ವೇ ಇಲಾಖೆಯ ನೌಕರರೂ, ಈಡೇರದ ತಮ್ಮ ಬಹುದಿನಗಳ ವೇತನ ಪರಿಷ್ಕರಣೆ ಮತ್ತು ಇತರೆ ಕ್ಷೇಮಾಭ್ಯುದಯ ಬೇಡಿಕೆಗಳನ್ನು ಒತ್ತಾಯಿಸಿ ೧೯೭೪ರ ಮೇ ೮ರಂದು ಮುಷ್ಕರ ಆರಂಭಿಸಿದರು. ಸಹಜವಾಗಿಯೇ ಈ ಕಾರ್ಯ ಚರಣೆಯ ನೇತೃತ್ವ ವಹಿಸಿದ ಜಾರ್ಜ್ ಫರ್ನಾಂಡೀಸ್ ತಮ್ಮ ಚತುರ ಸಂಘಟನಾ

ಶಕ್ತಿಯಿಂದ ಇಡೀ ರೈಲ್ವೇ ಇಲಾಖೆಯ ವಿವಿಧ ಘಟಕಗಳಲ್ಲದೆ, ಇತರೆ ಹಲವು ವಲಯಗಳ ಕಾರ್ಮಿಕರ ಸಂಘಗಳ ಬೆಂಬಲವನ್ನು ಸಂಘಟಿಸಿ ಇಡೀ ದೇಶದ ಆರ್ಥಿಕ ಚಕ್ರ ಹೆಚ್ಚೂ ಕಡಿಮೆ ಸ್ಥಗಿತಗೊಳ್ಳುವಂತೆ ಮಾಡಿದರು. ಸ್ವಾತಂತ್ರ್ಯೋತ್ತರ ಭಾರತದಲ್ಲಿ ನಡೆದ ಅತಿ ದೀರ್ಘ ಮತ್ತು ಸಂಕಷ್ಟಮಯವೆನಿಸಿದ ಮುಷ್ಕರ ೩೦ ಸಾವಿರ ಜನ ಕಾರ್ಮಿಕರ ಬಂಧನಕ್ಕೆ, ನಂತರ ಹಲವು ಸಾವಿರ ರೈಲ್ವೇ ಇಲಾಖೆಯ ನೌಕರರ ಅಮಾನತ್ತು ಮತ್ತು ವಜಾದಂತಹ ಸರ್ಕಾರದ ದಮನಕಾರಿ ಕ್ರಮಗಳಿಗೆ ಕಾರಣವಾಗಿ ಮೇ ೨೭ರಂದು ಏಕಪಕ್ಷೀಯವಾಗಿ ಕಾರ್ಮಿಕ ಸಂಘಗಳ ಕ್ರಿಯಾ ಸಮಿತಿಯಿಂದಲೇ ಹಿಂತೆಗೆಯಲ್ಪಟ್ಟಿತು. ಆಗ ಕಾರ್ಮಿಕರಿಗೆ ಮುಷ್ಕರದಿಂದ ಯಾವ ಪ್ರತಿಫಲವೂ ಸಿಗದಿದ್ದರೂ, ಇಂತಹ ಅಶಾಂತಮಯ ವಾತಾವರಣ ಜೆಪಿ ಚಳುವಳಿಯ ಮೂಲಕ ತಾರಕಕ್ಕೇರಿ ತುರ್ತು ಪರಿಸ್ಥಿತಿ ಘೋಷಣೆಯಾಗಿ, ಅದರ ರಾಜಕೀಯ ಪರಿಣಾಮವಾಗಿ ೧೯೭೭ರಲ್ಲಿ ಅಧಿಕಾರಕ್ಕೆ ಬಂದ ಜನತಾ ಪಕ್ಷದ ಸರ್ಕಾರದಲ್ಲಿ ಮತ್ತೋರ್ವ ಸಮಾಜವಾದಿ ನಾಯಕ ಮಧು ದಂಡವತೆಯವರು ರೈಲ್ವೇ ಮಂತ್ರಿ ಯಾದಾಗ ರೈಲ್ವೇ ಕಾರ್ಮಿಕರ ಮೂಲ ಬೇಡಿಕೆಗಳಲ್ಲಿ ಬಹುಪಾಲು ಈಡೇರಲ್ಪಟ್ಟವು. ಅಮಾನತು ಮತ್ತು ವಜಾಗಳಿಗೆ ಒಳಗಾಗಿದ್ದ ಕಾರ್ಮಿಕರಿಗೆ ಪುನರ್ವಸತಿ ಕಲ್ಪಿಸ ಲಾಯಿತು.

ತುರ್ತು ಪರಿಸ್ಥಿತಿ ವೇಳೆ ಬಂಧನದಿಂದ ತಪ್ಪಿಸಿಕೊಳ್ಳಲು ಭೂಗತರಾದ ಜಾರ್ಜ್ ಫರ್ನಾಂಡೀಸ್, ರಾಷ್ಟ್ರಾದ್ಯಂತ ಮಾರುವೇಷದಲ್ಲಿ ಸಂಚರಿಸುತ್ತಾ ಇಂದಿರಾ ಸರ್ಕಾರದ ಸರ್ವಾಧಿಕಾರದ ವಿರುದ್ಧ ಹೋರಾಟಗಳನ್ನು ರೂಪಿಸಿದರು. ಇದರ ಫಲವಾಗಿ ಅವರ ಸೋದರರು–ನಿರ್ದಿಷ್ಟವಾಗಿ ಮೈಕೇಲ್ ಫರ್ನಾಂಡೀಸ್–ಮತ್ತು ಗೆಳೆಯರು–ನಿರ್ದಿಷ್ಟವಾಗಿ ಸ್ನೇಹಲತಾ ರೆಡ್ಡಿ–ಸರ್ಕಾರದ ದಮನ, ಚಿತ್ರಹಿಂಸೆಗೆ ಒಳಗಾಗಬೇಕಾಯಿತು; ಸ್ನೇಹಲತಾ ತಮ್ಮ ಪ್ರಾಣವನ್ನೇ ಕಳೆದುಕೊಂಡರು. ಸರ್ಕಾರವನ್ನು ಬೆದರಿಸಿ ಶರಣಾಗುವಂತೆ ಮಾಡಲು ಜಾರ್ಜ್ ಬರೋಡಾದ ಕೆಲ ಸಮಾನಮನಸ್ಕರೊಂದಿಗೆ ಗುಟ್ಟಾಗಿ ಸಮಾಲೋಚಿಸಿ ಸರ್ಕಾರಿ ಕಛೇರಿಗಳನ್ನು ರಾತ್ರಿವೇಳೆ ಡೈನಾಮೈಟ್ ಮೂಲಕ ಸ್ಫೋಟಿಸುವ ಯೋಜನೆಯೊಂದನ್ನು ರೂಪಿಸಿದರು. ಅದು ಪೂರ್ಣ ಪ್ರಮಾಣದಲ್ಲಿ ಕಾರ್ಯಗತಗೊಳ್ಳುವ ಮುನ್ನವೇ ಅವರು ಕಲ್ಕತ್ತಾದಲ್ಲಿ ಬಂಧಿತರಾಗಿ, ಹಿಂಸೆ ಮತ್ತು ಸರ್ಕಾರದ ವಿರುದ್ಧ ಪಿತೂರಿಯ ಆಪಾದನೆಗಳನ್ನು ಎದುರಿಸುತ್ತಾ ಕೈಕಾಲುಗಳಿಗೆ ಸರಪಳಿ ಬಿಗಿದ ಸೆರೆಯಾಳಾಗಿ ಸುಮಾರು ಹತ್ತು ತಿಂಗಳುಗಳ ಕಾಲ ದೆಹಲಿಯ ತಿಹಾರ್ ಜೈಲಿನಲ್ಲಿರಬೇಕಾಯಿತು. ಕೊನೆಗೆ ಅಂತಾರಾಷ್ಟ್ರೀಯ ಒತ್ತಡಗಳಿಂದಾಗಿ ಇಂದಿರಾ ೧೯೭೭ರ ಮಾರ್ಚ್‌ನಲ್ಲಿ ತುರ್ತು ಪರಿಸ್ಥಿತಿಯನ್ನು ಹಿಂತೆಗೆದುಕೊಂಡು ಚುನಾವಣೆಗಳನ್ನು ನಡೆಸಿ, ಅದರಲ್ಲಿ ಸೋತಾಗ, ಫರ್ನಾಂಡೀಸ್‌ರಿಗೆ ಸೆರೆಮನೆಯಿಂದ ಬಿಡುಗಡೆ ಮತ್ತು ತಮ್ಮ ವಿರುದ್ಧದ ಎಲ್ಲ ಮೊಕದ್ದಮೆಗಳಿಂದ ಮುಕ್ತವಾಗುವ ಭಾಗ್ಯ

ದೊರಕಿತು. ಸೆರೆಮನೆಯಿಂದಲೇ ಬಿಹಾರದ ಮುಜ಼ಫರ್‌ಪುರದಿಂದ ಜೆಪಿ ರೂಪಿಸಿದ ಜನತಾ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಜಾರ್ಜ್ ೩ ಲಕ್ಷ ಮತಗಳ ಭಾರಿ ಅಂತರದಿಂದ ಗೆದ್ದಿದ್ದರು.

ನಂತರ ಜನತಾ ಪಕ್ಷದ ಸರ್ಕಾರದಲ್ಲಿ ಕೈಗಾರಿಕಾ ಮಂತ್ರಿಯಾದ ಫರ್ನಾಂಡೀಸ್ ಭಾರತದ ಕಂಪನಿ ಕಾನೂನುಗಳನ್ನು ಪಾಲಿಸಲು ನಿರಾಕರಿಸುತ್ತಿವೆ ಎಂಬ ಕಾರಣದ ಮೇಲೆ ಕೋಕಾ ಕೋಲಾ ಮತ್ತು ಐ.ಬಿ.ಎಂ ಕಂಪನಿಗಳ ಭಾರತದಲ್ಲಿನ ಶಾಖೆಗಳನ್ನು ಮುಚ್ಚಿಸುವ ಧೈರ್ಯ ತೋರಿ ದೊಡ್ಡ ಸುದ್ದಿ ಮಾಡಿದರು. ಅಷ್ಟೇ, ಅಲ್ಲಿಗೆ ಅವರ ಹೋರಾಟದ ಬದುಕು ಮುಗಿಯಿತೆಂದು ಹೇಳಬೇಕು. ಮುಂದಿನದೆಲ್ಲ ಇತ್ತೀಚಿನ ಇತಿಹಾಸ. ಜನತಾ ಪಕ್ಷ ಎರಡೇ ವರ್ಷಗಳಲ್ಲಿ ಒಡೆದು, ಸರ್ಕಾರ ಬಿದ್ದು ಹೋದಾಗ ಜನತಾ ಪಕ್ಷದ ನಿರ್ಮಾಣದಲ್ಲಿ ಪಕ್ಷವನ್ನು ಕಳೆದುಕೊಂಡಿದ್ದ ಎಲ್ಲ ಸಮಾಜವಾದಿಗಳಂತೆ ಕೆಲ ಕಾಲ ಇವರೂ ಜನತಾ ಪಕ್ಷದ ಚೂರುಪಾರುಗಳ ಚಿಲ್ಲರೆ ರಾಜಕಾರಣದಲ್ಲಿ ಬಸವಳಿದು, ಕೊನೆಗೆ ವಿ.ಪಿ. ಸಿಂಗ್‌ರ ನೇತೃತ್ವದ ಜನತಾ ದಳದ ಸರ್ಕಾರದಲ್ಲಿ ರೈಲ್ವೇ ಮಂತ್ರಿಯಾಗಿ ಕೊಂಕಣ ರೈಲ್ವೇ ಎಂಬ ಬೃಹತ್ ರೈಲ್ವೇ ಯೋಜನೆಯ ಯಶಸ್ಸಿನ ಹೆಗ್ಗಳಿಕೆಗೆ ಪಾತ್ರರಾದರು. ಆದರೆ ನಂತರದ ಅವರ ರಾಜಕಾರಣ ಸಂಪೂರ್ಣ ಗೊಂದಲಮಯವೇ ಆದದ್ದು ಸಮಾಜವಾದಿ ರಾಜಕಾರಣದ ದುರಂತಗಳಲ್ಲೊಂದು. ಅವರು ತಮ್ಮ ಕೆಲ ಸಮಾಜವಾದಿ ಗೆಳೆಯರೊಂದಿಗೆ ಸೇರಿ ಸಮತಾ ಪಕ್ಷ ಕಟ್ಟಿದರು. ನಂತರ ಒಳಜಗಳಗಳಿಗೆ ಸಿಕ್ಕಿ ಅದನ್ನು ಬೆಳೆಸಲಾಗದೆ ಜನತಾ ಬಳಗದ ಐಕ್ಯತೆಯ ಹೆಸರಿನಲ್ಲಿ ಜೆಡಿ(ಯು)ನಲ್ಲಿ ವಿಲೀನಗೊಳಿಸಿದರು. ಕೊನೆಗೆ ಅವರ ತಾತ್ವಿಕ ರಾಜಕಾರಣದ ವಿಪರ್ಯಾಸವೆಂಬಂತೆ, ಯಾವ ಕೋಮುವಾದಿ ರಾಜಕಾರಣದ ಕಾರಣದ ಮೇಲೆ ಜನತಾ ಪಕ್ಷದ ಒಡಕನ್ನು ಅವರು ಬೆಂಬಲಿಸಿದ್ದರೋ ಆ ಕೋಮುವಾದಿ ರಾಜಕಾರಣದ ಪ್ರತೀಕವಾಗಿ ಬೆಳೆದಿದ್ದ ಭಾರತೀಯ ಜನತಾ ಪಕ್ಷದ ನೇತೃತ್ವದ ಮೈತ್ರಿಕೂಟದಲ್ಲಿ ತಮ್ಮ ಜೆಡಿ(ಯು) ಪಕ್ಷವನ್ನು ಭಾಗಿಯಾಗಿಸಿ ಕೇಂದ್ರ ರಕ್ಷಣಾ ಮಂತ್ರಿಯಾದರು. ಇದರ ಪರಿಣಾಮವಾಗಿ ಜೆಡಿ(ಯು) ಒಡೆದು ಜೆಡಿ(ಎಸ್) ಎಂಬ ಪಕ್ಷದ ಉದಯಕ್ಕೂ ಅವರು ಮತ್ತು ಅವರ ಗೆಳೆಯರು ಕಾರಣರಾದರು. ಈ ಮಧ್ಯೆ ಅವರ ಕೌಟುಂಬಿಕ ಬದುಕೂ ಅಸ್ತವ್ಯಸ್ತವಾಗಿ ಅವರ ಪತ್ನಿ ಲೈಲಾ ಕಬೀರ್ ಮತ್ತು ಮಗ ಸಿಯಾನ್ ಅವರಿಂದ ದೂರಾದರು. ಜಯಾ ಜೈಟ್ಲಿ ಎಂಬ ವಿವಾಹ ವಿಚ್ಛೇದಿತ ಮಹಿಳೆ ಜಾರ್ಜ್‌ರ ಅವರ ಜೊತೆಗಾರ್ತಿಯಾದರು.

ಜಾರ್ಜ್ ರಕ್ಷಣಾ ಸಚಿವರಾಗಿದ್ದಾಗಲೇ–೧೯೯೮ರಲ್ಲಿ–ಭಾರತ ಪೋಖ್ರಾನ್‌ನಲ್ಲಿ ಅಣುಸ್ಫೋಟನ ನಡೆಸಿದ್ದು ಎಂಬುದು ಸಮಾಜವಾದಿ ತಾತ್ವಿಕತೆಗೆ ಅವರು ನೀಡಿದ ಇನ್ನೊಂದು ವಿಪರ್ಯಾಸಕರ ಆಘಾತ ಎನ್ನಬಹುದು. ನಿಜ, ಅವರು ಜಗತ್ತಿನ ಅತಿ ಎತ್ತರದ ಮತ್ತು ದುರ್ಗಮ ಯುದ್ಧಭೂಮಿ ಎನಿಸಿದ ಸಿಯಾಚಿನ್ ಪ್ರದೇಶಕ್ಕೆ ಅತಿ

ಹೆಚ್ಚು ಬಾರಿ–೧೮ ಬಾರಿ–ಭೇಟಿಕೊಟ್ಟ ಸಚಿವರೆನಿಸಿದರು ಮತ್ತು ಪಾಕಿಸ್ತಾನದೊಡನೆಯ ೧೯೯೯ರ ಕಾರ್ಗಿಲ್ ಯುದ್ಧದಲ್ಲಿ ಭಾರತಕ್ಕೆ ಜಯ ದೊರಕಿಸಿಕೊಟ್ಟರು. ಆದರೆ ಅದೇ ವೇಳೆಗೆ, ಸೈನಿಕರ ಶವಪೆಟ್ಟಿಗೆಗಳ ಮತ್ತು ಬರಾಕ್ ಕ್ಷಿಪಣಿಗಳ ಖರೀದಿ ಹಗರಣಗಳು ಅವರನ್ನು ಸುತ್ತಿಕೊಂಡವು. ಇದಕ್ಕೆ ಪೂರಕವಾಗಿ ಅವರ ಸಂಗಾತಿ ಜಯಾ ಜೈಟ್ಲಿ ತೆಹಲ್ಕಾ ಕುಟುಕು ಕಾರ್ಯಚರಣೆಯಲ್ಲಿ ಲಂಚ ಸ್ವೀಕಾರ ಆರೋಪಕ್ಕೆ ಸಿಕ್ಕಿ ಹಾಕಿ ಕೊಂಡರು. ಇದೆಲ್ಲದರಿಂದ ತತ್ತರಿಸಿದ ಫರ್ನಾಂಡೀಸ್ ಕ್ರಮೇಣ ತಮ್ಮ ಆರೋಗ್ಯ ವನ್ನು ಕಳೆದುಕೊಳ್ಳಲಾರಂಭಿಸಿದರು. ಈ ಎಲ್ಲ ಹಗರಣಗಳಿಂದ ಈಗ ಅವರು ಮುಕ್ತರಾಗಿದ್ದಾರಾದರೂ, ಮರೆವಿನ ಕಾಯಿಲೆಗೆ ತುತ್ತಾಗಿರುವ ಅವರನ್ನು ಅವರ ಜೆಡಿ(ಯು) ಪಕ್ಷ ರಾಜ್ಯ ಸಭೆಯ ಸದಸ್ಯರನ್ನಾಗಿ ಮಾಡಿ ಗೌರವಿಸಿದೆ. ಆದರೆ ಒಂದು ಕಾಲದಲ್ಲಿ ಅವರ ವ್ಯಕ್ತಿತ್ವಕ್ಕಿದ್ದ ಪ್ರಖರತೆ, ಪ್ರಭಾವಳಿ ಇತಿಹಾಸದಲ್ಲಿ ಮರೆಯಾಗಿದೆ.

ಸಮಾಜವಾದಿ ರಾಜಕಾರಣದ ಧೀರತೆ, ಏಳು ಬೀಳು ಮತ್ತು ದುರಂತಮಯತೆಯ ಪ್ರತೀಕದಂತೆ, ೮೫ ವರ್ಷ ವಯಸ್ಸಿನ ಈ ಜಾರ್ಜ್ ಫರ್ನಾಡೀಸ್ ಮತ್ತೆ ತಮ್ಮ ಮೊದಲ ಪತ್ನಿಯ ಆರೈಕೆಯಲ್ಲಿ (ಮತ್ತೆ ಅದೊಂದು ವಿವಾದಾಸ್ಪದವೆನಿಸಿದ ಬೆಳವಣಿಗೆ) ವಿರಮಿಸಿದ್ದಾರೆ.

(ದೀರ್ಘಕಾಲದ ಅಸ್ವಸ್ಥತೆಯ ನಂತರ ಜಾರ್ಜ್ ಫರ್ನಾಂಡೀಸ್ ಅವರು ೨೦೧೯ರ ಜನವರಿ ೨೯ರಂದು ದೆಹಲಿಯ ಆಸ್ಪತ್ರೆಯೊಂದರಲ್ಲಿ ಕೊನೆಯುಸಿರೆಳೆದರು),

◆◆

೧೨

ಸಜ್ಜನ ಹೋರಾಟಗಾರ ಕಿಷನ್ ಪಟ್ನಾಯಕ್

ಡಿ.ಎಸ್. ನಾಗಭೂಷಣ

ಭಾರತದ ಸಮಾಜವಾದಿ ಚಳುವಳಿಯಲ್ಲಿ ಲೋಹಿಯಾ ನಿಧನಾ ನಂತರ ಚಿಂತನೆ ಮತ್ತು ಹೋರಾಟಗಳ ಒಂಟಿ ಪಯಣ ನಡೆಸಿ, ಪ್ರಧಾನ ಲಹರಿ ರಾಜಕೀಯ ಪಕ್ಷಗಳ ಮತ್ತು ಮಾಧ್ಯಮಗಳ ದೃಷ್ಟಿಗೇ ಬೀಳದೆ ಅಜ್ಞಾತರಂತೆ ಸಾವನ್ನಪ್ಪಿದ ಸಮಾಜವಾದಿ ನಾಯಕ ಕಿಷನ್ ಪಟ್ನಾಯಕ್, ಬಹುಶಃ ಲೋಹಿಯಾ ನಂತರ ಸಮಾಜವಾದಿಗಳಲ್ಲೇ ಅತ್ಯಂತ ಸೃಜನಶೀಲ ಮನಸ್ಸಿನ ಪ್ರತಿಭಾವಂತರಾಗಿದ್ದರು. ಕರ್ನಾಟಕದ ಯುವ ಸಮಾಜವಾದಿಗಳಿಗೆ ಮತ್ತು ದಲಿತ ಹಾಗೂ ರೈತ ಚಳುವಳಿಯ ನಾಯಕರು ಮತ್ತು ಕಾರ್ಯಕರ್ತರಿಗೆ ಹಿರಿಯ ಮಾರ್ಗದರ್ಶಿಯಾಗಿದ್ದ, 'ಕಿಷನ್‌ಜಿ' ಎಂದೇ ಎಲ್ಲರಿಂದ ಪ್ರೀತಿಪೂರ್ವಕ ಗೌರವಗಳೊಂದಿಗೆ ಕರೆಯಲ್ಪಡುತ್ತಿದ್ದ ಈ ನಾಯಕ ಕರ್ನಾಟಕದಲ್ಲಿ ಮಾತ್ರವಲ್ಲ, ಕಳೆದ ಐವತ್ತು ವರ್ಷಗಳಲ್ಲಿ ರಾಷ್ಟ್ರಾದ್ಯಂತ ವಿವಿಧ ರಾಜ್ಯಗಳಲ್ಲಿ ಸಾವಿರಾರು ಪಕ್ಷೇತರ ಯುವ ಸಮಾಜವಾದಿ ಕಾರ್ಯಕರ್ತರನ್ನು ಬೆಳೆಸಿ ಹೋಗಿದ್ದಾರೆ.

೧೯೩೦ರ ಜೂನ್ ೩೦ರಂದು ಒರಿಸ್ಸಾದ ಕಾಳಹಂಡಿ ಜಿಲ್ಲೆಯ ಭವಾನಿಪಟ್ನದಲ್ಲಿ ಪ್ರಾಥಮಿಕ ಶಾಲಾ ಮಾಸ್ತರರ ಮಗನಾಗಿ ಜನಿಸಿದ ಕಿಷನ್ ತಮ್ಮೂರಿನ ಶಾಲೆಯಲ್ಲೇ ಶಾಲಾಶಿಕ್ಷಣ ಮುಗಿಸಿ ಬೊಲಾಂಗಿರ್‌ನ ರಾಜೇಂದ್ರ ಕಾಲೇಜಿಗೆ ಸೇರಿದರು. ನಂತರ ತಮ್ಮ ತಾಯಿಯ ತಮ್ಮನ ನೆರವಿನೊಂದಿಗೆ ನಾಗಪುರಕ್ಕೆ ತೆರಳಿ ಅಲ್ಲಿನ ವಿಶ್ವವಿದ್ಯಾಲಯ ದಿಂದ ಪದವಿ ಮತ್ತು ಸ್ನಾತಕೋತ್ತರ ಪದವಿಗಳನ್ನು ಪಡೆದು ೧೯೫೧ರಲ್ಲಿ ಬೊಲಾಂಗಿರ್‌ಗೆ ಹಿಂದಿರುಗಿ ಸ್ವಲ್ಪ ಕಾಲ ಪ್ರೌಢಶಾಲಾ ಶಿಕ್ಷಕರಾಗಿ ಕೆಲಸ ಮಾಡಿದರು.

ಆದರೆ ಹುಟ್ಟು ಬಂಡಾಯ ಪ್ರವೃತ್ತಿಯವರಾದ ಕಿಷನ್ ತಮ್ಮ ಹುಟ್ಟು ಪ್ರದೇಶವಾದ ಕಾಳಹಂಡಿಯಲ್ಲಿ ಜನ ಹಸಿವಿನಿಂದ ಸಾಯುವ ದೃಶ್ಯಗಳನ್ನು ಕಂಡು ತಲ್ಲಣಿಸಿ ಆದಿವಾಸಿ ಜನರ ಶೋಷಣೆಯ ವಿರುದ್ಧ ಜನಸಂಘಟನೆಗೆ ತೊಡಗಿ ಬಹುಬೇಗ ಹೋರಾಟಗಾರನೆಂದು ಪ್ರಸಿದ್ಧಿ ಪಡೆದರು. ಈ ಸಂದರ್ಭದಲ್ಲಿ ಆಗಿನ ಒರಿಸ್ಸಾ ಕಾಂಗ್ರೆಸ್ಸಿನ ಅಧಿಪತಿಯಂತಿದ್ದ ಮುಖ್ಯಮಂತ್ರಿ ಬಿಜು ಪಟ್ನಾಯಕ್ ಅವರೊಂದಿಗೆ ನೇರ ಸಂಘರ್ಷಕ್ಕಿಳಿದು, ಅವರು ತೊಂದರೆಗೊಳಪಟ್ಟು ಆಗಿನ ಮದ್ರಾಸ್ ಪಟ್ಟಣ ಸೇರಿ ಸಣ್ಣಪುಟ್ಟ ಉದ್ಯೋಗ ಮಾಡಿಕೊಂಡಿದ್ದರು. ಆಗ ಅಲ್ಲಿ ತಮ್ಮ ಊರಿನ ಕೆಚ್ಚಿನ ಹೋರಾಟದ ಯುವಕ ಕಿಷನ್‌ರನ್ನು ಕಂಡ ಒರಿಸ್ಸಾ ಸಮಾಜವಾದಿ ಪಕ್ಷದ ನಾಯಕ ಸುರೇಂದ್ರ ದ್ವಿವೇದಿ ೧೯೫೫ರಲ್ಲಿ ಅವರನ್ನು ಹೈದರಾಬಾದ್‌ಗೆ ಒಯ್ದು ತಮ್ಮ ನಾಯಕ ರಾಮಮನೋಹರ ಲೋಹಿಯಾಗೆ ಪರಿಚಯ ಮಾಡಿಕೊಟ್ಟರು. ಅಲ್ಲಿಂದ ಆರಂಭವಾದ ಲೋಹಿಯಾ-ಕಿಷನ್‌ರ ಗುರು-ಶಿಷ್ಯ ಬಾಂಧವ್ಯ ೧೯೬೭ರಲ್ಲಿನ ಲೋಹಿಯಾರ ಸಾವಿನವರೆಗೂ ಅವಿಚ್ಛಿನ್ನವಾಗಿ ಮುಂದುವರೆಯಿತು.

ಹೈದರಾಬಾದ್‌ನಲ್ಲಿ ಲೋಹಿಯಾರ ಸಮಾಜವಾದಿ ಪಕ್ಷದ ಮುಖ್ಯ ಕಛೇರಿಯನ್ನೇ ತಮ್ಮ ನೆಲೆಯನ್ನಾಗಿ ಮಾಡಿಕೊಂಡ ಕಿಷನ್ ಬಹುಬೇಗ ತಮ್ಮ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ರಾಜಕೀಯ ಬೆಳವಣಿಗೆಗಳ ತಿಳುವಳಿಕೆಯ ಮೂಲಕ ಲೋಹಿಯಾರ ಗಮನ ಸೆಳೆದ ಪರಿಣಾಮವಾಗಿ ಪಕ್ಷದ ಮುಖವಾಣಿಯಾಗಿ ಆರಂಭಿಸಿದ್ದ 'ಮ್ಯಾನ್‌ಕೈಂಡ್' ಎಂಬ ಅಂತಾರಾಷ್ಟ್ರೀಯ ಪತ್ರಿಕೆಯ ಸಂಪಾದಕ ಬಳಗ ಸೇರಿದರು. ಜೊತೆಗೆ ಲೋಹಿಯಾರ ಪ್ರವಾಸ-ಪತ್ರ-ವ್ಯವಹಾರಗಳ ಉಸ್ತುವಾರಿಯನ್ನು ವಹಿಸಿಕೊಂಡರು. ೧೯೬೦ರ ದಶಕದಲ್ಲಿ ಮತ್ತೆ ಒರಿಸ್ಸಾಗೆ ಹೋಗಿ ಜನಸಂಘಟನೆಯಲ್ಲಿ ತೊಡಗಿಕೊಂಡ ಅವರು ಲೋಹಿಯಾರ ಪ್ರೇರಣೆ ಮೇರೆಗೆ ೧೯೬೨ರ ಸಾರ್ವತ್ರಿಕ ಚುನಾವಣೆಗಳಲ್ಲಿ ಸಂಭಲ್‌ಪುರ ಲೋಕಸಭಾ ಕ್ಷೇತ್ರದಿಂದ ಪ್ರಜಾ ಸೋಷಲಿಸ್ಟ್ ಪಕ್ಷದ ಅಭ್ಯರ್ಥಿಯಾಗಿ ನಿಂತು ಗೆದ್ದೂಬಿಟ್ಟರು! ಆಗ ಕಿಷನ್ ಮೂರನೇ ಲೋಕಸಭೆಗೆ ಆಯ್ಕೆಯಾದ ಅತ್ಯಂತ ಕಿರಿಯ ವಯಸ್ಸಿನ ಸಂಸದರಾಗಿದ್ದರು.

ಆ ಚುನಾವಣೆಗಳಲ್ಲಿ ತಮ್ಮ ಗುರು ಲೋಹಿಯಾ ಸೋತಿದ್ದರೂ, ಅವರ ನಾಯಕತ್ವದ ಸ್ಫೂರ್ತಿಯಲ್ಲಿ ಕಿಷನ್ ಲೋಕಸಭೆಯಲ್ಲಿ ಜನಪರ ಚರ್ಚೆಗಳನ್ನು ಎತ್ತಿದರು. ಪ್ರಧಾನಿ ನೆಹರೂರಂತಹ ನೆಹರೂರನ್ನೇ ಎದುರು ಹಾಕಿಕೊಂಡು ಅವರ ಗಮನ ಸೆಳೆದರು. ಲೋಹಿಯಾ ಎತ್ತಿದ ಭಾರತೀಯ ಪ್ರಜೆಯ ದಿನಕ್ಕೆರಡು ಆಣೆಗಳ ನಿಕೃಷ್ಟ ಸರಾಸರಿ ಆದಾಯ ಮತ್ತು ಅದಕ್ಕೆದುರಾಗಿ ನೆಹ್ರೂ ಅವರ ದುಬಾರಿ ಜೀವನ ಶೈಲಿ ಮತ್ತು ವೆಚ್ಚದ ಪ್ರಶ್ನೆಗಳನ್ನು ಲೋಕಸಭೆಯಲ್ಲಿ ಚರ್ಚೆಗೆ ತಂದವರೂ ಕಿಷನ್ ಪಟ್ನಾಯಕ್‌ರೇ. ಹೀಗೆ ಲೋಕಸಭೆಯಲ್ಲಿ ಅತ್ಯಂತ ದಿಟ್ಟ ಮತ್ತು ಚುರುಕಿನ ಮಾತುಗಾರಿಕೆಯ ಸದಸ್ಯರಾಗಿ ರಾಷ್ಟ್ರದ ಗಮನ ಸೆಳೆದಿದ್ದ ಕಿಷನ್ ಪಟ್ನಾಯಕ್ ೧೯೬೭ರ ಚುನಾವಣೆಗಳಲ್ಲಿ ಅದೇ

ಕ್ಷೇತ್ರದಿಂದ ನಿಂತು ಸೋತದ್ದು ಮಾತ್ರ ವಿಪರ್ಯಾಸ. ಇದಕ್ಕೆ ಭಾರತದ ರಾಜಕಾರಣದ ವಿಚಿತ್ರ ಒಳಸುಳಿಗಳು ಎಷ್ಟು ಕಾರಣವೋ ಅಷ್ಟೇ ಕಾರಣ, ಆ ಚುನಾವಣೆಗಳಲ್ಲಿ ಲೋಹಿಯಾ ಆ ಕ್ಷೇತ್ರದಲ್ಲಿ ಗಣನೀಯ ಮುಸ್ಲಿಂ ಮತದಾರರಿದ್ದುದನ್ನು ಗಮನಿಸಿಯೂ ಸಮಾನ ನಾಗರಿಕ ಸಂಹಿತೆಯ ಪರವಾಗಿ ಪ್ರಚಾರ ಮಾಡಿದ್ದೂ ಒಂದು ಕಾರಣ ಎಂದು ಕಿಷನ್ ಹೇಳುತ್ತಾರೆ. ಆ ಬಗ್ಗೆ ಅವರಿಗೆ ವಿಷಾದವೇನೂ ಇಲ್ಲ ಎಂಬುದು ಬೇರೆ ಮಾತು.

ಅಲ್ಲಿಂದಾಚೆಗೆ ಬಹುಕಾಲ ಚುನಾವಣೆಗಳ ಗೋಜಿಗೆ ಹೋಗದ ಕಿಷನ್ ಸಮಾಜವಾದಿ ತಾತ್ವಿಕ ಚಿಂತನೆಯಲ್ಲಿ ಹೆಚ್ಚು ತೊಡಗಿಕೊಂಡರು. 'ಮ್ಯಾನ್‌ಕೈಂಡ್'ಗೆ ಹಲವು ಲೇಖನಗಳನ್ನು ಬರೆದರು. ಈ ಮಧ್ಯೆ ೧೯೬೭ರಲ್ಲಿ ತಮ್ಮ ನಾಯಕ ಲೋಹಿಯಾ ಅಕಾಲಿಕ ಮರಣಕ್ಕೆ ತುತ್ತಾದ ನಂತರ ಅನಾಥರಂತಾದ ಅವರು ಪಕ್ಷದ ತಮ್ಮ ಮಿತ್ರರು ವಿವಿಧ ಸಮಾಜವಾದಿ ಗುಂಪುಗಳಾಗಿ ಹರಿದುಹಂಚಿಹೋದುದನ್ನು ವಿಷಾದದಿಂದ ಗಮನಿಸಿ, ಲೋಹಿಯಾ ವಿಚಾರಗಳ ಬೆಳವಣಿಗೆಗಾಗಿ ತಮ್ಮ ಮಿತ್ರ ಹೈದರಾಬಾದ್‌ನ ಪ್ರೊ. ಕೇಶವರಾವ್ ಜಾಧವ್ ಅವರೊಂದಿಗೆ ಸೇರಿ ಪಕ್ಷಾತೀತವಾದ 'ಲೋಹಿಯಾ ವಿಚಾರ ಮಂಚ್'ನ್ನು ಸ್ಥಾಪಿಸಿದರು. ಅದರ ಅಡಿಯಲ್ಲಿ ಸಮಾವೇಶಗಳಿಗೆ ಯುವಜನರನ್ನು ಆಕರ್ಷಿಸುತ್ತಾ ಸಮಾಜವಾದಿ ತಾತ್ವಿಕತೆಯ ಹೊಸ ಚರ್ಚೆಗಳನ್ನು ಹುಟ್ಟು ಹಾಕಿದರು. ಜಾತಿ, ಭಾಷೆ, ಅಭಿವೃದ್ಧಿ ಮಾದರಿ ಮತ್ತು ವಿಕೇಂದ್ರೀಕರಣಗಳನ್ನು ಕುರಿತಂತೆ ಲೋಹಿಯಾ ವಿಚಾರಗಳ ಹೊಸ ಮಂಥನಕ್ಕೆ ಅವರು ನಾಂದಿ ಹಾಡಿದರು.

ಎಪ್ಪತ್ತರ ದಶಕದ ಮಧ್ಯಭಾಗದ ಹೊತ್ತಿಗೆ ವಿದ್ಯಾರ್ಥಿ ಆಂದೋಲನ ಆರಂಭವಾಗಿ, ಜೆಪಿಯವರು 'ಸಂಪೂರ್ಣ ಕ್ರಾಂತಿ' ಆಂದೋಲನ ಆರಂಭಿಸಿದಾಗ ಕಿಷನ್ ಜೆಪಿಯವರೊಂದಿಗೆ ಕೈಜೋಡಿಸಿದರು. ಜೆಪಿ ಬಿಹಾರದಾದ್ಯಂತ ವಿದ್ಯಾರ್ಥಿ ಮತ್ತು ಯುವಜನ ಜಾಲವೊಂದನ್ನು(ಛಾತ್ರ ಯುವ ಸಂಘರ್ಷ ವಾಹಿನಿ) ನಿರ್ಮಿಸುವ ಕೆಲಸಕ್ಕಾಗಿ ಕಿಷನ್ ಅವರನ್ನು ನಿಯೋಜಿಸಿದಾಗ ಅವರು ತಮ್ಮ ಕೇಂದ್ರ ಸ್ಥಳವನ್ನು ಸಂಭಲಪುರದಿಂದ ಪಟ್ನಾಗೆ ವರ್ಗಾಯಿಸಿಕೊಂಡರು. ಆದರೆ ಜೆಪಿ ಆಂದೋಲನ ಜನತಾ ಪಕ್ಷದ ಒಡಕಿನ ಫಲವಾಗಿ ಕಾಂಗ್ರೆಸ್ಸಿಗೆ ಒಂದು ಸೂಕ್ತ ರಾಜಕೀಯ ಪರ್ಯಾಯ ಒದಗಿಸಲು ವಿಫಲವಾದಾಗ, ಕಿಷನ್ ಧೃತಿಗೆಡದೆ ತಮ್ಮದೇ ಯುವಜನ ಸಮೂಹವನ್ನು ಕಟ್ಟಿಕೊಂಡು ಒಂದು ತಾತ್ವಿಕ ರಾಜಕೀಯ ಪರ್ಯಾಯ ರೂಪಿಸಲು ರಾಷ್ಟ್ರಾದ್ಯಂತ ಪ್ರವಾಸ ಕೈಗೊಂಡರು. ಅವರು ೧೯೭೭ರಲ್ಲಿ ಹಿಂದಿಯಲ್ಲಿ ಆರಂಭಿಸಿದ 'ಸಾಮಯಿಕ್ ವಾರ್ತಾ' ಮತ್ತು ಒರಿಯಾದಲ್ಲಿ ಆರಂಭಿಸಿದ 'ಬಿಕಲ್ಪ್ ವಿಚಾರ್' ಅವರಿಗೆ ಈ ದಿಸೆಯಲ್ಲಿ ಕೈದೀವಿಗೆಗಳಾಗಿದ್ದವು.

೧೯೮೦ರಲ್ಲಿ ಕಿಷನ್ ಬೆಂಗಳೂರಿನಲ್ಲಿ ಒಂದು ಹೊಸ ರಾಜಕೀಯ ಪರ್ಯಾಯ ರೂಪಿಸುವ ಪ್ರಯತ್ನವಾಗಿ ಅವರು 'ಸಮತಾ ಸಮಾವೇಶ'ವನ್ನು ಆಯೋಜಿಸಿದರಾದರೂ ಅದು ಸಫಲವಾಗಲಿಲ್ಲ. ನಂತರ ಅವರು ಕರ್ನಾಟಕದ ರೈತ ಮತ್ತು ದಲಿತ ಚಳುವಳಿ, ಮಧ್ಯಪ್ರದೇಶದ ನರ್ಮದಾ ಅಣೆಕಟ್ಟು ನಿರಾಶ್ರಿತರ ಹೋರಾಟ, ಮಧ್ಯ ಭಾರತದ ಆದಿವಾಸಿಗಳ ಬದುಕಿನ ಹಕ್ಕಿನ ಹೋರಾಟ ಇತ್ಯಾದಿ ಜನಪರ ಹೋರಾಟಗಳ ನಡುವೆ ಸಮನ್ವಯ ಸಾಧಿಸುವ ಪ್ರಯತ್ನಗಳನ್ನು ಮಾಡಿದರು. ಇದರ ಭಾಗವಾಗಿ ಕರ್ನಾಟಕವೂ ಸೇರಿದಂತೆ ರಾಷ್ಟ್ರದ ವಿವಿಧ ಭಾಗಗಳಲ್ಲಿ ಅನೇಕ ಯುವ ಜನರಲ್ಲಿ ಸಮಾಜವಾದದ ವಿಚಾರ ಬಿತ್ತಿ ಅವರಲ್ಲಿ ನಾಯಕತ್ವದ ಗುಣಗಳನ್ನು ಬೆಳೆಸಿದರು. ಅವರು ಯಾವುದೇ ವಿಷಯದ ಬಗ್ಗೆ ಮಾತನಾಡಿದರೂ ಅದು ತಲಸ್ಪರ್ಶಿಯೂ ಮತ್ತು ಅತ್ಯಂತ ಸರಳ ಭಾಷೆಯಲ್ಲಿ ಇರುತ್ತಿತ್ತು. ಇವುಗಳ ಜೊತೆಗೆ ಅವರ ಅನೌಪಚಾರಿಕ ವರ್ತನೆ ಯುವಜನರನ್ನು ಅವರತ್ತ ಸೆಳೆಯುತ್ತಿದ್ದವು. ಈ ಮಧ್ಯೆ ೧೯೮೯ರಲ್ಲಿ ತಮ್ಮ ಊರಾದ ಕಾಳಹಂಡಿಯಲ್ಲಿ ಜನ ಹಸಿವಿನಿಂದ ಸಾಯತೊಡಗಿದ್ದಾಗಲೂ ಸರ್ಕಾರ ಏನೂ ಕ್ರಮ ಕೈಗೊಳ್ಳದಿದ್ದಾಗ ಕಿಷನ್ ಒರಿಸ್ಸಾ ಶ್ರೇಷ್ಠ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿಯ ಅರ್ಜಿ ಸಲ್ಲಿಸಿ ಕಾನೂನು ಹೋರಾಟ ಮಾಡಿ ಅಲ್ಲಿನ ಜನತೆಗೆ ಪರಿಹಾರದ ವ್ಯವಸ್ಥೆಯ ಭರವಸೆಯನ್ನು ಪಡೆದರು.

ಜಾಗತೀಕರಣದ ವಿರುದ್ಧದ ಜಾಗತಿಕ ಹೋರಾಟವೆನಿಸಿದ 'ಇನ್ನೊಂದು ಜಗತ್ತು ಸಾಧ್ಯ' ಚಳುವಳಿಯ ಭಾರತದ ಪ್ರಮುಖ ಧ್ವನಿಯಾಗಿದ್ದ ಕಿಷನ್, ಮೇಧಾ ಪಾಟ್ಕರ್, ಯೋಗೇಂದ್ರ ಯಾದವ್, ದಿ. ಸುನೀಲ್ ಗುಪ್ತ ಮುಂತಾದವರೊಂದಿಗೆ ಸೇರಿ ಸಮಾಜವಾದಿ ಜನಪರಿಷದ್, ಜನಪರ ಹೋರಾಟಗಳ ರಾಷ್ಟ್ರೀಯ ಮೈತ್ರಿಕೂಟ (National alliance for People's movements) ಸಂಚಾಲಕರಾಗಿ ತಮ್ಮ ಅನಾರೋಗ್ಯ ಮತ್ತು ಹಿರಿ ವಯಸ್ಸನ್ನು ಲೆಕ್ಕಿಸದೆ ರಾಷ್ಟ್ರಾದ್ಯಂತ ಪ್ರವಾಸ ಮಾಡುತ್ತಿದ್ದರು. ಇಂತಹ ಒಂದು ಪ್ರವಾಸದ ಸಂದರ್ಭದಲ್ಲಿ ಹೈದರಾಬಾದ್‌ನಲ್ಲಿ ಅವರ ಆರೋಗ್ಯ ತೀವ್ರ ಹದಗೆಟ್ಟು ಅವರನ್ನು ಭುವನೇಶ್ವರಕ್ಕೆ ಒಯ್ಯಲಾಯಿತು. ಅಲ್ಲಿ ಅವರು ೨೦೦೪ರ ಸೆಪ್ಟಂಬರ್ ೨೭ರಂದು ತಮ್ಮ ೭೪ನೇ ವಯಸ್ಸಿನಲ್ಲಿ ಕೊನೆಯುಸಿರೆಳೆದರು.

ತಮ್ಮ ಗುರು ಲೋಹಿಯಾರಂತೆಯೇ ಸರಳ ಬದುಕು ಬಾಳಿದ ಕಿಷನ್‌ಗೆ ಯಾವುದೇ ಬ್ಯಾಂಕ್ ಖಾತೆಯಾಗಲೀ, ಖಾಸಗಿ ಆಸ್ತಿಯಾಗಲೀ ಇರಲಿಲ್ಲ. ಅವರು ಲೋಕಸಭಾ ಸದಸ್ಯತ್ವದ ಸಂಬಂಧದ ಪಿಂಚಣಿ ಪಡೆಯಲಿಲ್ಲ. ಅವರ ಇಡೀ ಬದುಕು ಶಾಲಾ ಸಂಗೀತ ಉಪಾಧ್ಯಾಯಿನಿಯಾಗಿದ್ದ ಅವರ ಪತ್ನಿ ಶ್ರೀಮತಿ ವಾಣಿ ಮಂಜರಿ ಅವರ ಸಂಬಳ ಮತ್ತು ಅಭಿಮಾನಿಗಳು ನೀಡುತ್ತಿದ್ದ ಸಣ್ಣಪುಟ್ಟ ದೇಣಿಗೆಗಳ ಮೇಲೆ ನಡೆಯುತ್ತಿತ್ತಷ್ಟೆ. ೨೦೦೨ರಲ್ಲಿ ಕರ್ನಾಟಕದ ಅವರ ಶಿಷ್ಯರು ಅವರಿಗೆ ಸುಮಾರು

ಒಂದೂವರೆ ಲಕ್ಷ ರೂಪಾಯಿಗಳ ಹಮ್ಮಿಣಿ ಅರ್ಪಿಸಿ ಅಭಿನಂದಿಸಿದ್ದರು. ಆ ಹಣವನ್ನೂ ಕಿಷನ್ ಸಂಘಟನೆಗಾಗಿಯೇ ಖರ್ಚು ಮಾಡಿದ್ದರು.

ಕಿಷನ್ ಪಟ್ನಾಯಕರು ಹಿಂದಿ, ಒರಿಯಾ ಮತ್ತು ಇಂಗ್ಲಿಷ್‌ಗಳಲ್ಲಿ ಅನೇಕ ಲೇಖನಗಳನ್ನು ಬರೆದಿರುವರಾದರೂ, ಪುಸ್ತಕಗಳಾಗಿ ಮುಖ್ಯವಾಗಿ ಹೊರಬಂದದ್ದು ಹಿಂದಿಯ 'ವಿಕಲ್ಪ್‌ಹೀನ್ ನಹೀ ಹೈ ದುನಿಯಾ' (ಈ ಜಗತ್ತಿಗೆ ಪರ್ಯಾಯವಿಲ್ಲದಿಲ್ಲ) ಮತ್ತು 'ಕಿಸಾನ್ ಆಂದೋಲನ್: ದಶಾ ಔರ್ ದಿಶಾ' ಇವುಗಳಲ್ಲಿ ಮೊದಲನೆಯದು ಲೋಹಿಯಾ ಪ್ರಕಾಶನದಿಂದ ಕನ್ನಡಕ್ಕೆ 'ಪ್ರತಿಚಿಂತನೆ' ಎಂದು ಅನುವಾದಿತವಾಗಿ (ಅನುವಾದ: ಹಸನ್‌ನಯೀಂ ಸುರಕೋಡ) ಪ್ರಕಟವಾಗಿದೆ. ಇತರೆಡೆಗಳಲ್ಲಿರಲಿ, ಕರ್ನಾಟಕದಲ್ಲಿ ಸಮಾಜವಾದದ ಹೆಸರು ಎಲ್ಲಿಯವರೆಗೆ ಇರುವುದೋ ಅಲ್ಲಿಯವರೆಗೆ ಕಿಷನ್ ಪಟ್ನಾಯಕ್ ಅವರ ಹೆಸರು ಚಿರಸ್ಥಾಯಿಯಾಗಿರುವುದು.

◆◆

೧೩

ಅನುಪಮ ಸಂಸದೀಯ ಪಟು ನಾಥ್ ಪೈ

ಡಿ.ಎಸ್. ನಾಗಭೂಷಣ

ಭಾರತದ ಸಮಾಜವಾದಿಗಳಲ್ಲಿ ಅನೇಕರು ಸಂಸತ್ ಸದಸ್ಯರಾಗಿ ತಮ್ಮ ಬಹುಶ್ರುತ ಪಾಂಡಿತ್ಯ, ಅನುಪಮ ಭಾಷಾ ವೈಖರಿ ಹಾಗೂ ಉಜ್ವಲ ಪ್ರತಿಭೆಗಳ ಮೂಲಕ ತಮ್ಮ ಜನಪರ ಚಿಂತನೆ ಮತ್ತು ಹೋರಾಟಗಳನ್ನು ಸದನದಲ್ಲೂ ಮುಂದುರೆಸಿ ಅದರ ಘನತೆ-ಗೌರವಗಳನ್ನು ಹೆಚ್ಚಿಸಿದ್ದಾರೆ. ಅಂಥವರಲ್ಲಿ ಎದ್ದು ಕಾಣುವ ಒಂದು ವ್ಯಕ್ತಿತ್ವವೆಂದರೆ ಬ್ಯಾರಿಸ್ಟರ್ ನಾಥ್ ಪೈ. ಅವರು ಲೋಕಸಭೆಯಲ್ಲಿ ಪ್ರಧಾನಿ ಪಂಡಿತ್ ನೆಹ್ರೂ ಅವರನ್ನು ಸಂಸದೀಯ ಗೌರವ ಮತ್ತು ಘನತೆಗಳಿಗೆ ಚ್ಯುತಿ ಬಾರದಂತೆ ವಾದ-ಪ್ರತಿವಾದಗಳ ಮೂಲಕ ಎದುರಿಸಿದ ಬಗೆ ರೀತಿ ನೀತಿಗಳಿಂದ ರಾಷ್ಟ್ರದ ಗಮನವನ್ನು ಸೆಳೆದಿದ್ದರು.

ನಾಥ್ ಪೈ ಅವರು ಸಂಸತ್ತಿನಲ್ಲಿ ಮಂಡಿಸಿದ ಖಾಸಗಿ ಸದಸ್ಯರ ಮಸೂದೆಗಳು ಇಂದಿಗೂ ಸಂಸತ್ ಕಾರ್ಯಕಲಾಪಗಳನ್ನು ಅಧ್ಯಯನ ಮಾಡಬಯಸುವವರಿಗೆ ಅಮೂಲ್ಯ ದಾಖಲೆಗಳಾಗಿವೆ. ವಿಶೇಷವಾಗಿ ಮೂಲಭೂತ ಹಕ್ಕೆಂದು ಪರಿಗಣಿತವಾಗಿದ್ದ ಆಸ್ತಿ ಹಕ್ಕಿಗೆ ಸಂಬಂಧಿಸಿದಂತೆ ಗೋಲಕ್‌ನಾಥ್ ಪ್ರಕರಣದಲ್ಲಿ ರಾಷ್ಟ್ರದ ಸರ್ವೋಚ್ಛ ನ್ಯಾಯಾಲಯ ನೀಡಿದ ತೀರ್ಪನ್ನು ಸಂಸತ್ತಿನಲ್ಲಿ ತಮ್ಮ ಸಂವಿಧಾನ ತಿದ್ದುಪಡಿ ಮಸೂದೆ ಮೂಲಕ ಸಮರ್ಥವಾಗಿ ಪ್ರಶ್ನಿಸಿದ ಅವರ ಕಾನೂನು ಜ್ಞಾನ ಮತ್ತು ರಾಜಕೀಯ ಧೀಮಂತಿಕೆ ಐತಿಹಾಸಿಕವಾದದ್ದೆಂದೇ ಹೇಳಬೇಕು. ಈ ಮಸೂದೆ ಮೇಲಿನ ಚರ್ಚೆಯಲ್ಲಿ ಅವರು ಘೋಷಿಸಿದ 'ಸಂವಿಧಾನದ ಆತ್ಯಂತಿಕ ಉಸ್ತುವಾರಿ

ಜನರದ್ದೇ–ಅಂದರೆ ಸದನದ್ದೇ– ಹೊರತು ಸರ್ವೋಚ್ಚ ನ್ಯಾಯಾಲಯದ್ದಲ್ಲ' ಎಂಬ ಮಾತು ಸರ್ವೋಚ್ಚ ನ್ಯಾಯಾಲಯದ ಆತ್ಮಸಾಕ್ಷಿಯನ್ನೂ ಮುಟ್ಟಿತು. ಅದು ತನ್ನ 'ಮೂಲಭೂತ ಹಕ್ಕುಗಳನ್ನು ಮುಟ್ಟುವ ಹಾಗಿಲ್ಲ' ಎಂಬ ತನ್ನ ತೀರ್ಪನ್ನು 'ಯಾರೂ ಸಂವಿಧಾನದ ಮೂಲ ಸ್ವರೂಪವನ್ನು ಮುಟ್ಟುವ ಹಾಗಿಲ್ಲ' ಎಂದು ಬದಲಾಯಿಸಿ ಕೊಳ್ಳಲು ಇದನ್ನೇ ಸ್ಫೂರ್ತಿಯಾಗಿಸಿಕೊಂಡ ಪ್ರಧಾನಿ ಇಂದಿರಾ, ಮುಂದೆ ಬ್ಯಾಂಕುಗಳ ರಾಷ್ಟ್ರೀಕರಣ ಮತ್ತು ರಾಜಧನ ರದ್ದತಿಗಳನ್ನು ಸರ್ವೋನ್ನತ ನ್ಯಾಯಾಲಯ ಅಸಿಂಧುಗೊಳಿಸಿದಾಗ ಸಂವಿಧಾನ ತಿದ್ದುಪಡಿ ಮಾಡಿ ಈ ಸಮಾಜವಾದಿ ಕಾರ್ಯಕ್ರಮ ಗಳನ್ನು ಸಿಂಧುಗೊಳಿಸಲು ಸಾಧ್ಯವಾಯಿತೆಂಬುದು ಸಮಾಜವಾದಿ ಸಂಸದೀಯ ಪರಂಪರೆಯ ಹೆಗ್ಗಳಿಕೆಯೇ ಆಗಿದೆ.

ಇಂತಹ ಹೆಗ್ಗಳಿಕೆಯನ್ನು ಸಮಾಜವಾದಿಗಳಿಗೆ ತಂದಿತ್ತ ನಾಥ್ ಪೈ ಹುಟ್ಟಿದ್ದು ಮಹಾರಾಷ್ಟ್ರದ ಕೊಂಕಣ ಪ್ರದೇಶದ ರತ್ನಗಿರಿ ಬಳಿಯ ಕುಗ್ರಾಮವೊಂದರಲ್ಲಿ, ಓರ್ವ ಅಂಚೆ ಮಾಸ್ತರನ ಮಗನಾಗಿ, ೧೯೨೨ರ ಸೆಪ್ಟಂಬರ್ ೨೫ರಂದು. ಪ್ರಾಥಮಿಕ ಶಾಲಾ ಶಿಕ್ಷಣವನ್ನು ತನ್ನೂರಿನಲ್ಲಿ ಮುಗಿಸಿದ ಪೈ ಉನ್ನತ ಶಿಕ್ಷಣಕ್ಕಾಗಿ ಬೆಳಗಾವಿಗೆ ಬಂದು ಅಲ್ಲಿ ೧೯೪೨ರ 'ಭಾರತ ಬಿಟ್ಟು ತೊಲಗಿ' ಚಳುವಳಿಯಲ್ಲಿ ಅಂಚೆ ಕಛೇರಿ ಮೇಲೆ ದಾಳಿ ನಡೆಸಿ ಪೋಲೀಸರಿಗೆ ಸಿಕ್ಕಿಬಿದ್ದರು. ಇದರಿಂದಾಗಿ ಅವರ ಶಿಕ್ಷಣಕ್ಕೆ ತಾತ್ಕಾಲಿಕ ಅಡ್ಡಿಯಾದರೂ, ಅವರು ಆ ಹೊತ್ತಿಗಾಲೇ ಮಹಾರಾಷ್ಟ್ರ ಸಮಾಜವಾದಿ ಚಳುವಳಿಯಿಂದ ಸಮಾಜವಾದದ ದೀಕ್ಷೆ ಪಡೆದಿದ್ದರು. ೧೯೪೭ರ ಹೊತ್ತಿಗೆ ಪದವಿ ಪಡೆದ ನಾಥ್ ಪೈ, ಬ್ಯಾರಿಸ್ಟರ್ ಪದವಿಗಾಗಿ ಇಂಗ್ಲೆಂಡ್‌ಗೆ ಪ್ರಯಾಣ ಬೆಳೆಸಿದರು.

ಇಂಗ್ಲೆಂಡ್‌ನಲ್ಲಿ ವಿದ್ಯಾರ್ಥಿಯಾಗಿ ತಮ್ಮ ಸಮಾಜವಾದಿ ಚಟುವಟಿಕೆಗಳನ್ನು ಮುಂದುವರೆಸಿದ ಪೈ ಅಲ್ಲಿನ ಸಮಾಜವಾದಿ ನಾಯಕರಾದ ಕ್ಲೆಮೆಂಟ್ ಅಟ್ಲೀ, ಬ್ರೈಲ್ಸ್‌ಫರ್ಡ್ ಮುಂತಾದವರೊಂದಿಗೆ ಸಂಪರ್ಕವಿರಿಸಿಕೊಂಡರು. ಭಾರತದಲ್ಲಿ ೧೯೫೨ರ ಮಹಾಚುನಾವಣೆ ಘೋಷಿತವಾದಾಗ ಬೆಳಗಾವಿ ನಗರ ಕ್ಷೇತ್ರದಿಂದ ಮುಂಬೈ ವಿಧಾನಸಭೆಗೆ ಸ್ಪರ್ಧಿಸಲು ತಮ್ಮ ಸಮಾಜವಾದಿ ಗೆಳೆಯರಿಂದ ಆಹ್ವಾನಿತರಾದ ಅವರು ಆ ಚುನಾವಣೆಯಲ್ಲಿ ಸೋಲುಂಡು ಇಂಗ್ಲೆಂಡ್‌ಗೆ ಹಿಂದಿರುಗಿ ತಮ್ಮ ಕಾನೂನು ಶಿಕ್ಷಣವನ್ನು ಮುಂದುವರೆಸಿದರು. ೧೯೫೪ರಲ್ಲಿ ಕೋಪನ್‌ಹೇಗನ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ಸಮಾಜವಾದಿ ಸಂಸ್ಥೆಯ ಯುವ ಶಾಖೆಯಾದ ಸಮಾಜ ವಾದಿ ಯುವಜನರ ಅಂತಾರಾಷ್ಟ್ರೀಯ ಒಕ್ಕೂಟದ ಅಧ್ಯಕ್ಷರಾಗಿ ಆಯ್ಕೆಯಾದರು.

ತಮ್ಮ ಅಂತಾರಾಷ್ಟ್ರೀಯ ಪ್ರವಾಸದ ಸಂದರ್ಭದಲ್ಲಿ ಆಸ್ಟ್ರಿಯಾದ ಯುವ ಸಮಾಜವಾದಿ ಕ್ರಿಸ್ಟೆಲ್ ಅವರನ್ನು ಪ್ರೀತಿಸಿ ಮದುವೆಯಾದ ನಾಥ್ ಪೈ ಬ್ಯಾರಿಸ್ಟರ್ ಆಗಿ ಭಾರತಕ್ಕೆ ಹಿಂದಿರುಗಿದರು. ೧೯೫೭ರ ಚುನಾವಣೆಗಳಲ್ಲಿ ರತ್ನಗಿರಿ ಕ್ಷೇತ್ರದಿಂದ ಲೋಕಸಭೆಗೆ ಸ್ಪರ್ಧಿಸಿ ಗೆದ್ದು ಸದನದಲ್ಲಿ ಪ್ರಜಾ ಸಮಾಜವಾದಿ ಪಕ್ಷದ

ಉಪನಾಯಕರಾದರು. ನಂತರದ ಎರಡೂ ಚುನಾವಣೆಗಳಲ್ಲಿ ಆ ಕ್ಷೇತ್ರದಿಂದಲೇ ಗೆದ್ದ ಅವರು, ಮುಂದೆ ರಾಜಾಪುರ್ ಎಂದು ಹೆಸರು ಬದಲಾಯಿಸಿಕೊಂಡ ಆ ಕ್ಷೇತ್ರವನ್ನು ತಮ್ಮ ಜನಪರ ಹೋರಾಟ ಮತ್ತು ಕೆಲಸ-ಕಾರ್ಯಗಳ ಮೂಲಕ ಸಮಾಜವಾದಿಗಳ ಭದ್ರಕೋಟೆಯನ್ನಾಗಿ ಮಾಡಿದರು. ಮುಂದೆ ಇದೇ ಕ್ಷೇತ್ರದಿಂದಲೇ ಮತ್ತೋರ್ವ ಸಮಾಜವಾದಿ ನಾಯಕ ಮಧುದಂಡವತೆಯವರು ಐದು ಬಾರಿ ಲೋಕಸಭೆಗೆ ಆಯ್ಕೆಯಾದದ್ದು. ೧೯೬೦ರಲ್ಲಿ ಕೇಂದ್ರ ಸರ್ಕಾರದ ನೌಕರರ ಮುಷ್ಕರವನ್ನು ಸಂಘಟಿಸಿದ್ದ ನಾಥ್ ಪೈ ಅಂಚೆ ಮತ್ತು ರೈಲ್ವೆ ನೌಕರರ ಸಂಘಟನೆಗಳಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದರು.

ಕೊಂಕಣ ರೈಲ್ವೇ ಮತ್ತು ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂಬುದು ನಾಥ್ ಪೈ ಅವರ ಎರಡು ದೊಡ್ಡ ಕನಸುಗಳಾಗಿದ್ದವು. ಮೊದಲ ಕನಸೇನೋ ಮತ್ತೋರ್ವ ಸಮಾಜವಾದಿ ನಾಯಕ ಜಾರ್ಜ್ ಫರ್ನಾಂಡಿಸ್ ರೈಲ್ವೇ ಮಂತ್ರಿಯಾಗಿದ್ದಾಗ ನನಸಾಯಿತು. ಆದರೆ ಎರಡನೇ ಕನಸನ್ನು ನನಸು ಮಾಡಲು ಹೋರಾಡುತ್ತಿದ್ದ ಸಂದರ್ಭದಲ್ಲಿ ಅವರು ಅಸುನೀಗಿದ್ದು ಅವರ ಬದುಕಿನ ಒಂದು ದುರಂತವೇ ಸರಿ. ಅವರು ೧೯೭೧ರ ಜನವರಿ ೧೭ರಂದು ಬೆಳಗಾವಿಯಲ್ಲಿ ಇದೇ ಹೋರಾಟದಲ್ಲಿ ಹುತಾತ್ಮರ ದಿನಾಚರಣೆಯ ಸಂದರ್ಭದಲ್ಲಿ ಮಾತನಾಡುತ್ತಿದ್ದಾಗಲೇ ಆಯಾಸಗೊಂಡು ಕುಸಿದುಬಿದ್ದರು. ಹೃದಯಾಘಾತದಿಂದ ಕೊನೆಯುಸಿರೆಳೆದರು.

◆◆

೧೪

ಬಹುಮುಖ ಹೋರಾಟಗಾರ, ಜನಸ್ನೇಹಿ ಆಡಳಿತಗಾರ ಮಧು ದಂಡವತೆ

ಡಿ.ಎಸ್. ನಾಗಭೂಷಣ

ಸ್ವಾತಂತ್ರ್ಯ ಹೋರಾಟಗಾರ, ಭೌತಶಾಸ್ತ್ರ ಅಧ್ಯಾಪಕ, ಕಾಲೇಜೊಂದರ ಉಪ ಪ್ರಾಂಶುಪಾಲ, ಭೂ ಸತ್ಯಾಗ್ರಹಿ, ರಾಜ್ಯ ಏಕೀಕರಣ ಹೋರಾಟಗಾರ, ಕಾರ್ಮಿಕ ನಾಯಕ, ಶಾಸಕ, ಸಂಸತ್ ಸದಸ್ಯ, ಕೇಂದ್ರ ಸಚಿವ, ಯೋಜನಾ ಆಯೋಗದ ಉಪಾಧ್ಯಕ್ಷ, ಲೇಖಕ ಹೀಗೆ ವೈವಿಧ್ಯಮಯ ಜವಾಬ್ದಾರಿಗಳನ್ನು ತಮ್ಮ ಬದುಕಿನಲ್ಲಿ ಯಶಸ್ವಿಯಾಗಿ ನಿರ್ವಹಿಸಿದ ಅನನ್ಯ ಪ್ರತಿಭೆಯ ಸಮಾಜವಾದಿ ಮಧು ದಂಡವತೆ. (೨೧, ಜನವರಿ, ೧೯೨೪-೧೨, ನವೆಂಬರ್, ೨೦೦೫) ನಮ್ಮ ತಲೆಮಾರಿನ ಜನ ಅವರನ್ನು ನೆನೆಯುವುದು ಅವರು ಸಾಮಾನ್ಯ ವರ್ಗದ ರೈಲ್ವೇ ಪ್ರಯಾಣಿಕರಿಗೆ ಒದಗಿಸಿದ ಸುಖ ಪ್ರಯಾಣದ ಸೌಲಭ್ಯಗಳಿಗಾಗಿ; ಅದಕ್ಕಿಂತ ಹೆಚ್ಚಾಗಿ ಅವರ ಸಜ್ಜನಿಕೆ ಮತ್ತು ಸರಳ ಜೀವನಕ್ಕಾಗಿ. ನಾನು ೧೯೭೭ರಲ್ಲಿ ಅವರು ಲೋಕಸಭೆಗೆ ಆಯ್ಕೆಯಾಗಿ ವಿಠಲಭಾಯಿ ಭವನದಲ್ಲಿನ ಅವರ ವಸತಿ ನೆಲೆಯಲ್ಲಿ ಕಂಡಾಗ ಅವರು ಸ್ವತಃ ತಾವೇ ತಮ್ಮ ಅಂಗಿಯನ್ನು ಒಗೆದು ಒಣಹಾಕುತ್ತಿದ್ದರು!

ಮಹಾರಾಷ್ಟ್ರದ ಅಹಮದ್‌ನಗರದಲ್ಲಿ ಕಾಲೇಜು ವಿದ್ಯಾರ್ಥಿಯಾಗಿದ್ದಾಗಲೇ ಸಮಾಜವಾದಿ ವಿಚಾರಗಳಿಗೆ ಒಲಿದು 'ಭಾರತ ಬಿಟ್ಟು ತೊಲಗಿ' ಚಳುವಳಿಯಲ್ಲಿ ಭಾಗವಹಿಸಿ ಸೆರೆಮನೆ ಸೇರಿದ ದಂಡವತೆ ಬಹುಬೇಗ ಸಮಾಜವಾದಿ ಆಂದೋಲನದ

ನಾಯಕತ್ವದ ಎತ್ತರದ ಶ್ರೇಣಿಗಳನ್ನು ಏರುತ್ತಾ ಹೋದದ್ದು ಆಶ್ಚರ್ಯದ ಸಂಗತಿ ಏನಲ್ಲ. ಮುಂಬೈನ ರಾಯಲ್ ಇನ್‌ಸ್ಟಿಟ್ಯೂಟ್ ಸೈನ್ಸ್‌ನಿಂದ ಭೌತಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದ ನಂತರ ಮುಂಬೈನ ಕಾಲೇಜೊಂದರಲ್ಲಿ ಉಪನ್ಯಾಸಕರಾಗಿ ವೃತ್ತಿ ಆರಂಭಿಸಿದ ಮಧು ದಂಡವತೆಯವರು ಬೋಧನೆ ಮತ್ತು ಸಮಾಜವಾದಿ ಹೋರಾಟವನ್ನು ಜೊತೆ ಜೊತೆಯಾಗಿಯೇ ನಿರ್ವಹಿಸಿಕೊಂಡು ಹೋದವರು. ಇದಕ್ಕೆ ಅವರಿಗೆ ಜೊತೆಯಾದವರು ಸಮಾಜವಾದಿಯೇ ಆಗಿದ್ದ ಮತ್ತು ಮುಂದೆ ಸಂಸತ್ ಸದಸ್ಯೆಯೂ ಆದ ಪತ್ನಿ ಪ್ರಮೀಳಾ ಅವರು. ೧೯೪೮ರಿಂದಲೂ ಪ್ರಜಾ ಸಮಾಜವಾದಿ ಪಕ್ಷದ ಮಹಾರಾಷ್ಟ್ರ ಘಟಕದ ಅಧ್ಯಕ್ಷರಾಗಿದ್ದ ಅವರು ನಂತರ ಪಕ್ಷದ ರಾಷ್ಟ್ರೀ ಜಂಟಿ ಕಾರ್ಯದರ್ಶಿ ಆಗಿದ್ದರು. ಐವತ್ತರ ದಶಕದ ಗೋವಾ ಹೋರಾಟ ಮತ್ತು ಮಹಾರಾಷ್ಟ್ರ ರಾಜ್ಯ ರಚನಾ ಹೋರಾಟಗಳ ಮುಂಚೂಣಿಯಲ್ಲಿದ್ದ ದಂಡವತೆ ೧೯೬೯ರ ಭೂ ಸುಧಾರಣಾ ಹೋರಾಟದಲ್ಲೂ ಸಕ್ರಿಯವಾಗಿ ಭಾಗವಹಿಸಿದ್ದರು.

೧೯೭೦ರಲ್ಲಿ ಮಹಾರಾಷ್ಟ್ರದ ವಿಧಾನ ಪರಿಷತ್ತಿನ ಸದಸ್ಯರಾಗಿ ಸಂಸದೀಯ ಬದುಕನ್ನು ಪ್ರವೇಶಿಸಿದ ಮಧು ದಂಡವತೆ ೧೯೭೧ರಲ್ಲಿ ತಮ್ಮ ರಾಜಕೀಯ ಗುರು ನಾಥ್ ಪೈ ಅವರ ನಿಧನಾನಂತರ ಕೊಂಕಣದ ರಾಜಾಪುರ ಕ್ಷೇತ್ರದಿಂದ ಲೋಕಸಣೆಗೆ ಆಯ್ಕೆಯಾದವರು ೧೯೯೦ರವರೆಗೆ ಸತತವಾಗಿ ಐದು ಬಾರಿ ಸಂಸತ್ತಿನಲ್ಲಿ ಆ ಕ್ಷೇತ್ರವನ್ನು ಪ್ರತಿನಿಧಿಸುವಷ್ಟು ಜನಮನ್ನಣೆ ಗಳಿಸಿದ್ದರು. ಈ ಮಧ್ಯೆ ಅವರು ೧೯೭೫ರ ತುರ್ತು ಪರಿಸ್ಥಿತಿ ಸಮಯದಲ್ಲಿ ಸುಮಾರು ಎರಡು ವರ್ಷಗಳ ಕಾಲ ಬೆಂಗಳೂರಿನ ಕೇಂದ್ರೀಯ ಸೆರೆಮನೆ ಮತ್ತು ಪುಣೆಯ ಯೆರವಾಡಾ ಸೆರೆಮನೆಯಲ್ಲಿ ಬಂದಿಯಾಗಿದ್ದರು.

೧೯೭೭ರಲ್ಲಿ ಜನತಾ ಸರ್ಕಾರ ರಚನೆಯಾದಾಗ ಪ್ರಧಾನ ಮಂತ್ರಿ ಮುರಾರ್ಜಿ ದೇಸಾಯಿಯವರ ಸಂಪುಟದಲ್ಲಿ ರೈಲ್ವೇ ಮಂತ್ರಿಯಾಗಿ ನೇಮಕವಾದಾಗ ರೈಲ್ವೇ ನಿಜವಾಗಿ ಜನಸಾಮಾನ್ಯರ ಸಾರಿಗೆ ಮಾಧ್ಯಮವಾಯಿತು ಎಂದು ಹೇಳಬೇಕು. ಪ್ರಯಾಣಿಕರಿಗೆ ಮೆದು ಆಸನ, ಸುಧಾರಿತ ಗುಣಮಟ್ಟದ ಊಟ-ತಿಂಡಿ, ಸುಲಭ ಟಿಕೆಟ್ ಕಾಯ್ದಿರಿಸುವಿಕೆ ವ್ಯವಸ್ಥೆಗಳಲ್ಲದೆ, ಇಲಾಖೆಯ ಉದ್ಯೋಗಿಗಳಿಗೂ ಸಂಬಳ-ಭತ್ಯೆಗಳ ಹೆಚ್ಚಳ ಮತ್ತು ಉದ್ಯೋಗ ಭದ್ರತೆಯ ಕ್ರಮಗಳನ್ನು ಕೈಗೊಳ್ಳಲಾಯಿತು. ಕೆಲವೇ ವರ್ಷಗಳ ಹಿಂದೆ ಇನ್ನೋರ್ವ ಸಮಾಜವಾದಿ ನಾಯಕ ಜಾರ್ಜ್ ಫರ್ನಾಂಡೀಸ್ ಅವರ ನಾಯಕತ್ವದಲ್ಲಿ ನಡೆದಿದ್ದ ಐತಿಹಾಸಿಕ ರೈಲ್ವೇ ಮುಷ್ಕರದಲ್ಲಿ ಪಾಲ್ಗೊಂಡು ಉದ್ಯೋಗ ಕಳೆದುಕೊಂಡಿದ್ದ ಹಲವು ನೌಕರರಿಗೆ ನ್ಯಾಯ ಒದಗಿಸಲಾಯಿತು.

೧೯೮೯ರಲ್ಲಿ ವಿ.ಪಿ.ಸಿಂಗ್ ಅವರು ಪ್ರಧಾನಂತ್ರಿಯಾದಾಗ ಅವರ ಸಚಿವ ಸಂಪುಟದಲ್ಲಿ ಹಣಕಾಸು ಮಂತ್ರಿಯಾಗಿ ಎರಡು ಬಾರಿ ಜನಸ್ನೇಹಿ ಸಮತೋಲಿತ

ಮುಂಗಡ ಪತ್ರ ಮಂಡಿಸಿದ ಮಧು ದಂಡವತೆಯವರು ನಂತರ ಕೇಂದ್ರ ಯೋಜನಾ ಆಯೋಗದ ಉಪಾಧ್ಯಕ್ಷರಾಗಿ ಎರಡು ಅವಧಿಗಳಲ್ಲಿ ಸಮಾಜವಾದಿ ಯೋಜನಾ ನಕ್ಷೆಗಳನ್ನು ಸರ್ಕಾರದ ಮುಂದೆ ಬಿಡಿಸಿಟ್ಟರು.

ಸಮಾಜವಾದಿಯಾಗಿ ಕಾರ್ಮಿಕ ಕ್ಷೇಮಾಭ್ಯುದಯ ಕ್ಷೇತ್ರದಲ್ಲಿ ಕೆಲಸ ಮಾಡಿದ ದಂಡವತೆಯವರು ತಾವು ನಿಧನರಾಗುವವರೆಗೂ ಸತತವಾಗಿ ೨೪ ವರ್ಷಗಳ ಕಾಲ ಭಾರತೀಯ ಜೀವವಿಮಾ ನಿಗಮದ ನೌಕರರ ಸಂಘದ ಅಧ್ಯಕ್ಷರಾಗಿದ್ದರು. ತಮ್ಮ ಸಮಾಜವಾದಿ ಗೆಳೆಯ ಜಾರ್ಜ್ ಫರ್ನಾಂಡೀಸರ ಮಹತ್ವಾಕಾಂಕ್ಷೆಯ ಯೋಜನೆ ಕೊಂಕಣ ರೈಲ್ವೇ ಆರಂಭಕ್ಕೆ ರೈಲ್ವೇ ಮಂತ್ರಿಯಾಗಿ ಜಾರ್ಜ್ ಎಷ್ಟು ಕಾರಣರೋ ಅದಕ್ಕಾಗಿ ಹೋರಾಟ ರೂಪಿಸಿ ಜನ ಸಂಘಟನೆ ಮಾಡಿದ ಮಧು ದಂಡವತೆಯವರಂತಹ ಜನ ನಾಯಕರೂ ಕಾರಣವೆನ್ನಬಹುದು. ಭೌತಶಾಸ್ತ್ರದಲ್ಲಿ ಉನ್ನತ ಶಿಕ್ಷಣ ಪಡೆದು ರಾಜಕೀಯ ಮತ್ತು ಸಮಾಜ ಸುಧಾರಣೆಗಳ ವಿಷಯದಲ್ಲಿ ಆಸಕ್ತರಾಗಿದ್ದ ಅವರು ಹಲವು ವಿದ್ವತ್ಪೂರ್ಣ ಗ್ರಂಥಗಳನ್ನೂ ರಚಿಸಿದ್ದಾರೆ. 'ಮಾರ್ಕ್ಸ್ ಮತ್ತು ಗಾಂಧಿ' ಕನ್ನಡಕ್ಕೂ ಅನುವಾದವಾಗಿ ಬಂದಿದೆ. ಸಂಸತ್ತಿನ ಭವಿಷ್ಯ, ಲಿಂಗ ತಾರತಮ್ಯ ಮೀಮಾಂಸೆ, ಸಮಾಜವಾದಿ ತತ್ವ ವಿಕಾಸ ಮುಂತಾದ ವಿಷಯಗಳಲ್ಲದೆ ಜ್ಯೋತಿಬಾ ಫುಲೆ, ಜಯಪ್ರಕಾಶ್ ನಾರಾಯಣ್, ಯೂಸುಫ್ ಮೆಹರಲಿಯವರ ಬದುಕು ಮತ್ತು ವಿಚಾರಗಳ ಕುರಿತೂ ಇಂಗ್ಲಿಷ್ ಮತ್ತು ಮರಾಠಿಗಳಲ್ಲಿ ಕೃತಿ ರಚಿಸಿದ್ದಾರೆ

ಅಲ್ಪಕಾಲದ ಅಸ್ವಸ್ಥತೆಯ ನಂತರ ೨೦೦೫ರ ನವೆಂಬರ್ ೧೬ರಂದು ಕೊನೆಯುಸಿರೆಳೆದ ದಂಡವತೆಯವರ ಪಾರ್ಥಿವ ಶರೀರವನ್ನು ಅವರ ಇಚ್ಛೆಯಂತೆಯೇ ಮುಂಬೈನ ಜೆ.ಜೆ. ಆಸ್ಪತ್ರೆಗೆ ದಾನ ಮಾಡಲಾಯಿತು. ವಿ.ಪಿ.ಸಿಂಗ್ ಅವರು ಹೇಳಿದಂತೆ ಮಧು ದಂಡವತೆಯವರು ತಮ್ಮ ದೇಹವನ್ನು ಅಕ್ಷರಶಃ ಸಾರ್ವಜನಿಕ ಉಪಯೋಗಕ್ಕೆ ಅರ್ಪಿಸಿದ್ದರು.

◆◆

೧೫

ನಗುಮೊಗದ ಸೌಮ್ಯ ಸಮಾಜವಾದಿ ರಬಿ ರಾಯ್

ಡಿ.ಎಸ್.ನಾಗಭೂಷಣ

ಒರಿಸ್ಸಾ ರಾಜ್ಯದ ಅತ್ಯಂತ ಹಿರಿಯ ಸಮಾಜವಾದಿ ನಾಯಕರಲ್ಲೊಬ್ಬರಾದ ರಬಿರಾಯ್, ೧೯೮೯ರಲ್ಲಿ ಜನತಾದಳ ಸರ್ಕಾರ ರಚಿಸಿದಾಗ ಲೋಕಸಭೆಯ ಅಧ್ಯಕ್ಷರಾಗಿ ಆ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ತೋರಿದ ದಕ್ಷತೆ ಮತ್ತು ಘನತೆಗಳಿಗಾಗಿ ಈಗಲೂ ಸಂಸದೀಯ ಆಡಳಿತ ವಲಯಗಳಲ್ಲಿ ಹೆಸರಾದವರು.

ಒರಿಸ್ಸಾದ ಪುರಿ ಜಿಲ್ಲೆ ಬನಾರಾಗಢ ಎಂಬ ಹಳ್ಳಿಯ ರೈತ ಕುಟುಂಬವೊಂದರಲ್ಲಿ ೧೯೨೬ರ ನವಂಬರ್ ೨೬ರಂದು ಜನಿಸಿದ ರಬಿ ರಾಯ್, ಕಟಕ್‌ನ ರವೇನ್ಸಾ ಕಾಲೇಜಿನಲ್ಲಿ ಇತಿಹಾಸ ಪದವಿ ಓದುತ್ತಿದ್ದಾಗಲೇ ೧೯೪೭ರಲ್ಲಿ ವಿದ್ಯಾರ್ಥಿ ಚಳುವಳಿಯಲ್ಲಿ ಭಾಗವಹಿಸಲಾರಂಭಿಸಿದರು. ಕಾಲೇಜಿನ ಕಟ್ಟಡದ ಮೇಲೆ ಭಾರತದ ತ್ರಿವರ್ಣ ಧ್ವಜ ಹಾರಿಸುವ ಪ್ರಯತ್ನದಲ್ಲಿದ್ದಾಗ ಬ್ರಿಟಿಷ್ ಪ್ರಭುತ್ವದ ಪೊಲೀಸರಿಂದ ಬಂಧನಕ್ಕೊಳಗಾದರು. ಆದರೆ ರಬಿ ರಾಯ್ ನೇತೃತ್ವದ ವಿದ್ಯಾರ್ಥಿ ಚಳುವಳಿ ಎಷ್ಟು ದೃಢವಾಗಿತ್ತೆಂದರೆ ಅಂತಿಮವಾಗಿ ಕಾಲೇಜು ಕಟ್ಟಡದ ಮೇಲೆ ತ್ರಿವರ್ಣ ಧ್ವಜ ಹಾರಿಸಿಯೇ ತೀರಿತು. ಆರಂಭದಿಂದಲೇ ಸಮಾಜವಾದಿ ವಿಚಾರಗಳಿಗೆ ಮಾರು ಹೋಗಿದ್ದ ರಾಯ್, ನಂತರ ಕಟಕ್‌ನ ಮಧುಸೂಧನ ಕಾಲೇಜಿನಲ್ಲಿ ಕಾನೂನು ಪದವಿ ಅಭ್ಯಾಸ ಮಾಡುತ್ತಿದ್ದಾಗಲೇ ಸಮಾಜವಾದಿ ಪಕ್ಷದ ನಾಯಕರ ಸಂಪರ್ಕ ಪಡೆದು ಒರಿಸ್ಸಾದಲ್ಲಿ ಆ ಪಕ್ಷ ಬೇರು ಬಿಡುವಲ್ಲಿ ಮುಖ್ಯ ಪಾತ್ರ ವಹಿಸಿದರು. ಪಕ್ಷದ ಸಂಘಟನೆಯಲ್ಲಿ ತೋರಿದ ಶ್ರದ್ಧೆ

ಮತ್ತು ನಾಯಕತ್ವದ ಗುಣಗಳು ಅವರನ್ನು ೧೯೫೩ರಲ್ಲಿ ಸಮಾಜವಾದಿ ಯುವ ಸಭಾದ ಜಂಟಿ ಕಾರ್ಯದರ್ಶಿ ಹುದ್ದೆಗೇರಿಸಿತು.

ನಂತರದ ದಿನಗಳಲ್ಲಿ ಸಮಾಜವಾದಿ ಆಂದೋಲನ ಹಲವು ಸ್ಥಿತ್ಯಂತರಗಳನ್ನು ಕಂಡು ೧೯೫೫ರಲ್ಲಿ ಅದರ ಪ್ರಮುಖ ನಾಯಕರಲ್ಲೊಬ್ಬರಾದ ರಾಮಮನೋಹರ ಲೋಹಿಯಾ ತೀವ್ರ ತಾತ್ವಿಕ ಭಿನ್ನಾಭಿಪ್ರಾಯಗಳೊಂದಿಗೆ ತಮ್ಮದೇ ಸಮಾಜವಾದಿ ಪಕ್ಷವನ್ನು ಸ್ಥಾಪಿಸಿದಾಗ ರಬಿ ರಾಯ್ ಅವರಿಗೆ ಬೆಂಬಲ ಘೋಷಿಸಿ ಆ ಹೊಸ ಸಮಾಜವಾದಿ ಪಕ್ಷದ ಸಂಘಟನೆಯಲ್ಲಿ ತೊಡಗಿಕೊಂಡರು. ಆ ಅವಧಿಯಲ್ಲಿ ಹಲವು ವಿದ್ಯಾರ್ಥಿ, ರೈತ ಮತ್ತು ಕಾರ್ಮಿಕ ಹೋರಾಟಗಳನ್ನು ಸಂಘಟಿಸಿದ ಅವರು ಬಹು ಬೇಗನೇ ಜನನಾಯಕರೆನಿಸಿಕೊಂಡರು. ತಮ್ಮ ಪಕ್ಷದ ಸಂಸದೀಯ ಕಾರ್ಯಕಾರಿಣಿಯ ಸದಸ್ಯರಾಗಿಯೂ ಕೆಲಸ ಮಾಡಿದ ಅವರು ೧೯೬೦ರಲ್ಲಿ ಪಕ್ಷದ ಪ್ರಧಾನ ಕಾರ್ಯದರ್ಶಿಯೂ ಆದರು.

೧೯೬೭ ರಬಿ ರಾಯ್ ಅವರ ರಾಜಕೀಯ ಜೀವನದ ಪರ್ವ ಕಾಲ ಎನ್ನಬಹುದು. ಆ ವರ್ಷ ಅವರು ಒರಿಸ್ಸಾದ ಪುರಿ ಕ್ಷೇತ್ರದಿಂದ ೪ನೇ ಲೋಕಸಭೆಗೆ ಆಯ್ಕೆಯಾದರು. ಆ ಹೊತ್ತಿಗೆ ಒಡೆದ ಸಮಾಜವಾದಿ ಪಕ್ಷದ ಗುಂಪುಗಳು ಮರುಹೊಂದಾಣಿಕೆ ಮಾಡಿಕೊಂಡು ರಚಿತವಾಗಿದ್ದ ಸಂಯುಕ್ತ ಸಮಾಜವಾದಿ ಪಕ್ಷದ ಸಂಸದೀಯ ಸಮೂಹದ ನಾಯಕರಾಗಿ ಅವರು ಲೋಕಸಭೆಯಲ್ಲಿ ನಿರ್ವಹಿಸಿದ ಅತ್ಯಂತ ಪರಿಣಾಮಕಾರಿ ಪಾತ್ರ ಅವರನ್ನೊರ್ವ ರಾಷ್ಟ್ರೀಯ ನಾಯಕರೆಂದು ಪರಿಗಣಿಸಲು ಕಾರಣವಾಯಿತು. ೧೯೭೪ರಲ್ಲಿ ಒರಿಸ್ಸಾ ವಿಧಾನ ಸಭೆಯಿಂದ ರಾಜ್ಯಸಭೆಗೆ ಆಯ್ಕೆಯಾದ ಅವರು ತುರ್ತು ಪರಿಸ್ಥಿತಿಯ ವಿರುದ್ಧ ಸಂಸತ್ತಿನ ಒಳಗೂ ಮತ್ತು ಹೊರಗೂ ಹೋರಾಟ ನಡೆಸಿ ತಮ್ಮ ರಾಜ್ಯದಲ್ಲಿ ಜೆಪಿ ಚಳುವಳಿಯನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಇದರ ಫಲವಾಗಿ ೧೯೭೭ರಲ್ಲಿ ಸಮಾಜವಾದಿ ಪಕ್ಷ ವಿಸರ್ಜನೆಗೊಂಡು ಜನತಾ ಪಕ್ಷ ರೂಪುಗೊಂಡಾಗ ಅದರ ಪ್ರಧಾನ ನಾಯಕರಲ್ಲೊಬ್ಬ ರಾಗಿ ಮೂಡಿದ ರಾಯ್ ೧೯೭೯ರಲ್ಲಿ ಮೊರಾರ್ಜಿ ದೇಸಾಯಿಯವರ ಸರ್ಕಾರದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾಗಿ ಕೆಲಸ ಮಾಡಿದರು.

ಸರಳ, ಸ್ವಚ್ಛ ಮತ್ತು ನೇರ ವ್ಯಕ್ತಿತ್ವದ ಸದಾ ನಗುಮೊಗದ ರಬಿರಾಯ್ ಜನತಾ ಪಕ್ಷದ ಒಡಕಿನ ದಿನಗಳಲ್ಲಿ ರಾಜಕಾರಣದಲ್ಲಿ ಅಷ್ಟೇನೂ ಸಕ್ರಿಯರಾಗಿರದಿದ್ದವರು ಈ ಎಲ್ಲ ಗೊಂದಲಗಳು ಮುಗಿದು ಜನತಾದಳ ರೂಪುಗೊಂಡಾಗ ಆ ಪಕ್ಷದ ಅಭ್ಯರ್ಥಿಯಾಗಿ ಕೇಂದ್ರಪಾಡ ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾದರು ಮತ್ತು ಅದರ ಅಧ್ಯಕ್ಷರೂ ಆಗಿ ಆ ಸ್ಥಾನವನ್ನು ಅಲಂಕರಿಸಿದರು. ಅವರು ಆ ಸ್ಥಾನಕ್ಕೆ ಸರ್ವ ಪಕ್ಷಗಳ ಒಮ್ಮತ ಅಭ್ಯರ್ಥಿಯಾಗಿದ್ದರು ಎಂಬುದು ಅವರು ತಮ್ಮ ರಾಜಕೀಯ ಜೀವನದಲ್ಲಿ, ನಿರ್ದಿಷ್ಟವಾಗಿ ಸಂಸದೀಯ ಜೀವನದಲ್ಲಿ ಕಾಪಾಡಿಕೊಂಡು ಬಂದಿದ್ದ

ಘನ ಮೌಲ್ಯಗಳ ದ್ಯೋತಕವೇ ಆಗಿತ್ತು. ಈ ಲೋಕಸಭೆಯ ಅವಧಿ ರಾಜಕೀಯ ಅನಿಶ್ಚಿತತೆಯಿಂದಾಗಿ ಕಿರಿದಾಯಿತಾದರೂ, ಆ ಅವಧಿಯಲ್ಲೇ ತಮ್ಮ ಜವಾಬ್ದಾರಿಯನ್ನು ಅತ್ಯಂತ ನಿಷ್ಪಕ್ಷಪಾತವಾಗಿ ನಿರ್ವಹಿಸಿ ಸಂಸದೀಯ ಮೌಲ್ಯಗಳನ್ನು ಎತ್ತಿಹಿಡಿದ ಕೆಲವೇ ಕೆಲವರ ಪೈಕಿ ರಬಿರಾಯ್ ಪ್ರಮುಖರು ಎಂದು ಹೆಸರಾಗಲು ಕಾರಣವಾಯಿತು. ಇದೇ ಅವರು ಮತ್ತೆ ೧೯೯೧ರಲ್ಲಿ ಅದೇ ಕೇಂದ್ರಪಾಡ ಕ್ಷೇತ್ರದಿಂದ ಲೋಕಸಭೆಗೆ ಮರುಆಯ್ಕೆಯಾಗಲೂ ಕಾರಣವಾಯಿತು.

ಈ ಲೋಕಸಭಾ ಅವಧಿಯ ನಂತರ ಸಕ್ರಿಯ ರಾಜಕಾರಣದಲ್ಲಿ ಆಸಕ್ತಿ ಕಳೆದುಕೊಂಡ ರಬಿ ರಾಯ್ ಲೋಕಶಕ್ತಿ ಅಭಿಯಾನ ಎಂಬ ರಾಜಕೀಯೇತರ ವೇದಿಕೆಯನ್ನು ರಚಿಸಿ ದೇಶದಲ್ಲಿ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಕುರಿತ ಜನಜಾಗೃತಿ ಕೆಲಸಗಳಲ್ಲಿ ತೊಡಗಿಕೊಂಡರು. ಸಾರ್ವಜನಿಕ ಜೀವನದಲ್ಲಿನ ಭ್ರಷ್ಟಾಚಾರ ರಾಜಕೀಯ ಅಧಿಕಾರಗಳ ಕೇಂದ್ರೀಕರಣ ಮತ್ತು ಕೊಳ್ಳುಬಾಕ ಸಂಸ್ಕೃತಿ ಇವು ಈ ಅಭಿಯಾನ ಜನಜಾಗೃತಿಗಾಗಿ ಆಯ್ದುಕೊಂಡಿದ್ದ ಮೂರು ಮುಖ್ಯ ವಿಷಯಗಳಾಗಿದ್ದವು. ಇದಕ್ಕಾಗಿ ಅವರು ದೇಶಾದ್ಯಂತ ವ್ಯಾಪಕ ಪ್ರವಾಸ ಮಾಡಿದರಲ್ಲದೆ ಒರಿಯಾ, ಹಿಂದಿ ಮತ್ತು ಇಂಗ್ಲಿಷ್‌ಗಳಲ್ಲಿ ಪತ್ರಿಕಾ ಲೇಖನಗಳನ್ನೂ ಬರೆದರು.

ನಂತರದ ದಿನಗಳಲ್ಲಿ ಸಾರ್ವಜನಿಕ ಜೀವನದಿಂದ ಸಂಪೂರ್ಣ ದೂರವಾದ ರಬಿರಾಯ್, ಸ್ವಲ್ಪ ಕಾಲದ ಅಸ್ವಸ್ಥತೆಯ ನಂತರ ತಮ್ಮ ೯೦ನೆಯ ವಯಸ್ಸಿನಲ್ಲಿ ೨೦೧೭ರ ಮಾರ್ಚ್ ೨೦ರಂದು ಕೊನೆಯುಸಿರೆಳೆದರು. ಅವರ ಪತ್ನಿ ಸ್ವೈನ್ ವೈದ್ಯಕೀಯ ಕಾಲೇಜೊಂದರಲ್ಲಿ ಪ್ರಾಧ್ಯಾಪಕಿಯಾಗಿದ್ದರು. ರಾಯ್ ಅವರ ನಿಧನದ ಸಂದರ್ಭದಲ್ಲಿ ಅವರನ್ನು ಆಗಿನ ರಾಷ್ಟ್ರಪತಿ ಪ್ರಣಬ್‌ಕುಮಾರ್ ಮುಖರ್ಜಿ, 'ಜನ ನಿಕಟ ನಾಯಕನೆಂದೂ, ಒರಿಸ್ಸಾದ ಮುಖ್ಯಮಂತ್ರಿ ನವೀನ್ ಪಟ್ನಾಯಕ್, 'ಒರಿಸ್ಸಾದ ವರಪುತ್ರ ಮತ್ತು ನಿಜ ಸಮಾಜವಾದಿ' ಎಂದು ಬಣ್ಣಿಸಿದ್ದು ಉತ್ಪ್ರೇಕ್ಷೆಯ ಮಾತುಗಳೇನೂ ಆಗಿರಲಿಲ್ಲ

◆◆

೧೬

ಸರಳ ಸಜ್ಜನ ನಾಯಕ ಸುರೇಂದ್ರಮೋಹನ್

ಖಾದ್ರಿ ಎಸ್. ಅಚ್ಯುತನ್

೧೯ನೇ ಶತಮಾನ ಮನುಜ ಬುದ್ಧಿ ವಿಕಾಸದಲ್ಲಿ ಬಲು ದೊಡ್ಡ ಮಜಲು. ಖ್ಯಾತ ಮನಶ್ಶಾಸ್ತ್ರಜ್ಞ ಎರಿಕ್ ಫ್ರೋಮ್ ತಿಳಿಸಿದಂತೆ ಸಮಾಜವಾದಿ ಚಳವಳಿ ಆ ಶತಮಾನದ ಅತಿ ಮಹತ್ತಾದ ನೈತಿಕ ಆಂದೋಲನವಾಗಿತ್ತು. ಆದರೆ ಅದರ ತಾತ್ವಿಕ ಪರಿಕರಗಳ ಭಾಗವಾಗಿ ನೈತಿಕತೆ ಇರಲಿಲ್ಲ. ಇದನ್ನು ತುಂಬಿಕೊಡುವ ಅಗತ್ಯವಾಗಿ ಜಯಪ್ರಕಾಶ್ ನಾರಾಯಣ್ ವ್ಯಕ್ತಿ ಸ್ವಾತಂತ್ರ್ಯದೊಡನೆ ಭಾರೀ ಪ್ರಮಾಣದ ಸಾಮಾಜಿಕ ಯೋಜನೆಯನ್ನು ಸರಿಹೊಂದಿಸುವ ರೀತಿಯಲ್ಲಿ ಕೇಂದ್ರೀಕರಣ ಮತ್ತು ವಿಕೇಂದ್ರೀಕರಣಗಳನ್ನೊಳಗೊಂಡ ಸಂತುಲಿತ ವ್ಯವಸ್ಥೆಯನ್ನು ವಿಕಸಿತಗೊಳಿಸುವುದು ಅತ್ಯಗತ್ಯ ಎಂದರು. ಈ ಮೌಲ್ಯವನ್ನು ಗಟ್ಟಿಯಾಗಿ ಪ್ರತಿಪಾದಿಸಿ ಜನತಾಂತ್ರಿಕ ಸಮಾಜವಾದದ ದೀವಟಿಗೆಯನ್ನು ಇಂದಿನ ತಲೆಮಾರಿಗೆ ಹಸ್ತಾಂತರಿಸಿದವರು ಸರಳ ಜೀವನದ ಜ್ವಲಂತ ನಿದರ್ಶನವಾಗಿದ್ದ ಸಮಾಜವಾದಿ ಸುರೇಂದ್ರ ಮೋಹನ್.

ನವ ಉದಾರೀಕರಣದ ಭರಾಟೆಗೆ ಎದುರಾಗಿ ಈಜಿದ ಸುರೇಂದ್ರ ಮೋಹನ್ ಅವರಿಗೆ ಬಡ ಹಾಗೂ ಅಂಚುಗಳಲ್ಲಿ ಮರೆಯಾಗಿಹೋಗಿದ್ದ ಜನಸಮೂಹದ ತುಡಿತಗಳೇ ಪ್ರಧಾನವಾಗಿತ್ತು. ಹಾಗಾಗಿಯೇ ಅವರು ದೇಶದಲ್ಲಿ ಉದಾರೀಕರಣದ ವಿರುದ್ಧದ ಚಳವಳಿಯ ಮುಂಚೂಣಿಯಲ್ಲಿ ಕೊನೆಯ ತನಕ ತೊಡಗಿಸಿಕೊಂಡಿದ್ದರು. ಉದಾರೀಕರಣದ ವಿರುದ್ಧದ ಎಲ್ಲ ಶಕ್ತಿಗಳೂ, ಸಹ ಯಾತ್ರಿಗಳು ಎಂದೇ ಅವರು ನಿಶ್ಚಿತವಾಗಿ ನಂಬಿದ್ದರಿಂದ ಅವರ ಮಿತ್ರ ಬಳಗದಲ್ಲಿ ಗಾಂಧೀವಾದಿಗಳಿದ್ದಂತೆ

ಎಡಪಂಥೀಯ ಕಾರ್ಯಕರ್ತರೂ ಗಮನಾರ್ಹ ಸಂಖ್ಯೆಯಲ್ಲಿ ಇದ್ದರು. ದಲಿತರು, ಮಹಿಳೆಯರು, ಬುಡಕಟ್ಟು ಜನ, ಅಲ್ಪಸಂಖ್ಯಾತರು, ರೈತರು ಈ ಎಲ್ಲ ವಂಚಿತ ಅಂಚಿನ ಸಮುದಾಯಗಳ ಆಶೋತ್ತರಗಳೊಡನೆ ಗುರುತಿಸಿಕೊಂಡಿದ್ದ ಸುರೇಂದ್ರ ಮೋಹನ್ ತಮ್ಮ ಚಟುವಟಿಕೆಗಳಿಂದ ಸಮಾಜವಾದಿ ವಿಚಾರಧಾರೆಯ ವ್ಯಾಖ್ಯೆಯನ್ನೇ ವಿಸ್ತರಿಸಿದರು. ಸತತವಾಗಿ ಅಂಕಣಗಳ ಮೂಲಕ, ಪತ್ರಿಕೆಗಳಲ್ಲಿ ಬರವಣಿಗೆ ಜತೆಗೆ ಆಂದೋಲನಗಳಲ್ಲಿ ಕ್ರಿಯಾಶೀಲರಾಗಿ ಇರುತ್ತಿದ್ದ ಅವರು, ಸಾಮಾಜಿಕ, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ವಿದ್ಯಮಾನಗಳ ಜತೆಯೂ ನಿಕಟ ನಂಟನ್ನು ಹೊಂದಿದ್ದರು. ಸುರೇಂದ್ರ ಮೋಹನ್ ಅವರ ಬದುಕಿನ ವಿವಿಧ ಘಟ್ಟಗಳು ದೇಶದ ಸಮಾಜವಾದಿ ಹಾಗೂ ಸ್ವಾತಂತ್ರ್ಯ ಆಂದೋಲನಗಳೊಡನೆ ತಳುಕು ಹಾಕಿಕೊಂಡಿವೆ. ವಿದ್ಯಾರ್ಥಿ ದೆಸೆಯಿಂದಲೇ ದೇಶದ ಈ ಆಂದೋಲನಗಳೊಡನೆ ಎಳೆಯ ಸುರೇಂದ್ರ ಮೋಹನ್ ಗುರುತಿಸಿಕೊಂಡಿದ್ದರು.

ಡಿಸೆಂಬರ್ ೪, ೧೯೨೬ರಲ್ಲಿ ಈಗಿನ ಹರ್ಯಾಣಾದ ಅಂಬಾಲಾದಲ್ಲಿ ಜನಿಸಿದ ಸುರೇಂದ್ರ ಮೋಹನ್‌ಗೆ ೧೯೪೨ರ 'ಕ್ವಿಟ್ ಇಂಡಿಯಾ' ಚಳವಳಿ ಕಾಲದಲ್ಲೇ ಸಮಾಜವಾದಿ ಚಳವಳಿಯೊಡನೆ ನಂಟು ಆರಂಭವಾಯಿತು. ಆಗ ಅವರು ೧೧ನೇ ತರಗತಿಯಲ್ಲಿ ಓದುತ್ತಿದ್ದ ವಿದ್ಯಾರ್ಥಿ. ಆಗಲೇ ಆ ಎಳೆಯ ಸುರೇಂದ್ರ ಮೋಹನ್‌ಗೆ ಜಯಪ್ರಕಾಶ್ ನಾರಾಯಣ್, ರಾಮ್‌ಮನೋಹರ್ ಲೋಹಿಯಾ ಅವರ ಹೆಸರು ಪರಿಚಯವಾಗಿ, 'ಕ್ವಿಟ್ ಇಂಡಿಯಾ' ಚಳವಳಿಯಲ್ಲಿನ ಅವರಿಬ್ಬರ ಐತಿಹಾಸಿಕ ಪಾತ್ರದ ಬಗ್ಗೆಯೂ ತಿಳಿದುಕೊಂಡಿದ್ದರು. ೧೯೪೬ರಲ್ಲಿ ಕಾಂಗ್ರೆಸ್ ಸೋಷಿಯಲಿಸ್ಟ್ ಪಕ್ಷದ (ಸಿಎಸ್‌ಪಿ) ಜತೆ ಅವರ ಸಂಬಂಧ ಏರ್ಪಟ್ಟಿತು. ಸಿಎಸ್‌ಪಿ ನಾಯಕ ಮುನ್ಷಿ ಅಹ್ಮದ್ ದಿನ್, ಜಲಂಧರ್‌ನ ಡಿಎವಿ ಕಾಲೇಜಿಗೆ ಭೇಟಿ ನೀಡಿದಾಗ, ಸುರೇಂದ್ರ ಮೋಹನ್ ಆ ಕಾಲೇಜಿನಲ್ಲಿ ಬಿ.ಎಸ್ಸಿ ಅಂತಿಮ ವರ್ಷದ ವಿದ್ಯಾರ್ಥಿ ಹಾಗೂ ಪಂಜಾಬ್ ವಿದ್ಯಾರ್ಥಿ ಕಾಂಗ್ರೆಸ್‌ನ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ. ೧೯೪೬ರ ಮೇ ತಿಂಗಳಲ್ಲಿ ಪಂಜಾಬ್ ಸಿಎಸ್‌ಪಿಯ ಸಂಘಟಕ ಸರ್ದಾರ್ ಗುರುಭಕ್ಷ್ ಸಿಂಗ್ ಅಂಬಾಲಾಗೆ ಭೇಟಿ ಕೊಟ್ಟು ಅಲ್ಲಿ ಸಿಎಸ್‌ಪಿಯ ಘಟಕ ಸ್ಥಾಪಿಸಿದಾಗ ಸುರೇಂದ್ರ ಮೋಹನ್ ಅದರ ಜಿಲ್ಲಾ ಕಾರ್ಯದರ್ಶಿಯಾಗಿ ಆಯ್ಕೆಯಾದರು. ೧೯೪೮ರಲ್ಲಿ ಸಿಎಸ್‌ಪಿ ಕಾಂಗ್ರೆಸ್‌ನಿಂದ ಹೊರಬಂದು ಸೋಷಿಯಲಿಸ್ಟ್ ಪಾರ್ಟಿ ಸ್ಥಾಪನೆಯಾದಾಗ ಅವರು ತಮ್ಮ ಸ್ವಂತ ಊರು ಅಂಬಾಲಾದಲ್ಲಿ ಪಕ್ಷದ ಪೂರ್ಣಾವಧಿ ಕಾರ್ಯಕರ್ತರಾಗಿ ನಂತರ ಅದರ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗುವರು. ೧೯೫೦ರ ಜೂನ್‌ನಲ್ಲಿ ಕೃಷಿ ಕಾರ್ಮಿಕರ ಎತ್ತಂಗಡಿ ವಿರುದ್ಧ ಯಮುನಾ ನಗರದ ಬಳಿಯ ಕರೇಹ್ರಾ ಗ್ರಾಮದಲ್ಲಿ ನಡೆದ ಸತ್ಯಾಗ್ರಹದಲ್ಲಿ ಪಾಲ್ಗೊಂಡು ಬಂಧಿತರಾಗುವ ಯುವಕ ಸುರೇಂದ್ರ ಮೋಹನ್ ಎರಡೂವರೆ ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆಗೆ ಗುರಿಯಾಗುತ್ತಾರೆ. ಜಯಪ್ರಕಾಶ್ ನಾರಾಯಣ್ ಹಾಗೂ ಪ್ರೊ. ತಿಲಕ್‌ರಾಜ್ ಛಡ್ಡಾ

ಅವರ ಮಧ್ಯಪ್ರವೇಶದಿಂದ ೧೯೫೧ರ ಜನವರಿ ಕೊನೆಗೆ ಏಳು ತಿಂಗಳ ಕಾರಾಗೃಹ ಶಿಕ್ಷೆಯ ನಂತರ ಸುರೇಂದ್ರ ಮೋಹನ್ ಬಿಡುಗಡೆಯಾಗುತ್ತಾರೆ. ನಂತರದಲ್ಲೇ ಅವರು ೧೯೫೨ರ ಜುಲೈನಲ್ಲಿ ರೂಪಡ್‌ನಲ್ಲಿ (ಇಂದಿನ ರೂಪ್‌ನಗರ್) ಪಂಜಾಬ್ ಸೋಷಿಯಲಿಸ್ಟ್ ಪಾರ್ಟಿಯ ರಾಜ್ಯ ಸಮ್ಮೇಳನವನ್ನು ಸಂಘಟಿಸುತ್ತಾರೆ. ಇದನ್ನು ಉದ್ಘಾಟಿಸಿದವರು ಡಾ.ರಾಮ್‌ಮನೋಹರ್ ಲೋಹಿಯಾ.

೧೯೫೨ರ ಅಕ್ಟೋಬರ್‌ನಲ್ಲಿ ಉನ್ನತ ಶಿಕ್ಷಣಕ್ಕಾಗಿ ಡೆಹರಾಡೂನ್‌ಗೆ ತೆರಳಿದ ಸುರೇಂದ್ರ ಮೋಹನ್ ಅವರು ಸಮಾಜಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದು ೧೯೫೫ರಲ್ಲಿ ಕಾಶೀ ವಿದ್ಯಾಪೀಠದಲ್ಲಿ ಸಮಾಜಶಾಸ್ತ್ರ ಉಪನ್ಯಾಸಕರಾಗಿ ಸೇರಿಕೊಳ್ಳುತ್ತಾರೆ. ಎರಡು ವರ್ಷ ಬೋಧನೆ ಮಾಡಿ ಅಲ್ಲಿಂದ ಹೊರಬಂದು ಸಮಾಜವಾದಿ ಚಳುವಳಿಯ ಮುಖವಾಣಿ 'ಜನತಾ' ಸಾಪ್ತಾಹಿಕಕ್ಕೆ ಬರೆಯಲಾರಂಭಿಸಿ ಅದರ ಸಹಸಂಪಾದಕ ರಾಗಿಯೂ ಸೇವೆ ಆರಂಭಿಸುತ್ತಾರೆ. ಪತ್ರಿಕಾ ರಿಜಿಸ್ಟ್ರಾರರು ಒಬ್ಬರೇ ಸಂಪಾದಕರಿರಬೇಕೆಂದು ನಿಯಮ ಹೇರಿದಾಗ ಸಹಸಂಪಾದಕತ್ವದ ಹುದ್ದೆ ಬಿಟ್ಟುಕೊಡುತ್ತಾರೆ.

೧೯೫೮ರ ಜೂನ್‌ನಲ್ಲಿ ಪ್ರಜಾ ಸೋಶಿಲಿಸ್ಟ್ ಅಂದಿನ ಜಂಟಿ ಕಾರ್ಯದರ್ಶಿ ಪ್ರೇಮ್ ಭಾಸಿನ್ ಅವರ ಕೋರಿಕೆಯ ಮೇರೆಗೆ ಸಮಾಜವಾದಿ ಯುವಕ ಸಭಾದ (ಎಸ್‌ವೈಎಸ್) ಪೂರ್ಣಾವಧಿ ಕಾರ್ಯಕರ್ತರಾಗಿ ಪಕ್ಷದ ಕೇಂದ್ರ ಕಚೇರಿ ಸೇರುತ್ತಾರೆ. ಪ್ರಜಾ ಸೋಷಿಯಲಿಸ್ಟ್ ಪಕ್ಷ, ಅದರ ನಂತರ ಸಂಯುಕ್ತ ಸೋಷಿಯಲಿಸ್ಟ್ ಪಕ್ಷದ ಅಡಿಯಲ್ಲಿ ಎಸ್‌ವೈಎಸ್‌ನ್ನು ಸಂಘಟಿಸಿ ತಮ್ಮ ಕತೃತ್ವ ಶಕ್ತಿಯನ್ನು ತೋರಿದ ಸುರೇಂದ್ರ ಮೋಹನ್ ೧೯೬೫-೭೧ರ ಅವಧಿಯಲ್ಲಿ ಸೋಷಿಯಲಿಸ್ಟ್ ಪಕ್ಷದ ಮೊದಲ ಜಂಟಿ ಕಾರ್ಯದರ್ಶಿಯಾಗುತ್ತಾರೆ. ಪಕ್ಷ ಸಂಘಟನೆಯಲ್ಲಿ ತಮ್ಮ ಛಾಪನ್ನು ಮೂಡಿಸಿದ ಸುರೇಂದ್ರ ಮೋಹನ್ ೧೯೭೨-೭೭ರಲ್ಲಿ ಅದರ ಪ್ರಧಾನ ಕಾರ್ಯದರ್ಶಿ ಹುದ್ದೆಯವರೆಗೆ ಏರುತ್ತಾರೆ.

೧೯೭೭ರಲ್ಲಿ ಸೋಶಿಲಿಸ್ಟ್ ಪಕ್ಷ ವಿಸರ್ಜನೆಯಾಗಿ ಜನತಾ ಪಕ್ಷದ ಸ್ಥಾಪನೆಯಾದಾಗ ತುರ್ತು ಪರಿಸ್ಥಿತಿಯ ಕಾಲದಲ್ಲಿ ತುರಂಗವಾಸ ಅನುಭವಿಸಿದ್ದ ಸುರೇಂದ್ರ ಮೋಹನ್ ಅದರ ಸ್ಥಾಪಕ ಪ್ರಧಾನಕಾರ್ಯದರ್ಶಿಗಳಲ್ಲಿ ಒಬ್ಬರಾಗಿ ನೇಮಕವಾಗಿ, ಇಂದಿರಾ ಗಾಂಧಿ ವಿರುದ್ಧ ಜನತಾ ಪಕ್ಷದ ಐತಿಹಾಸಿಕ ವಿಜಯದಲ್ಲಿ ಗುರುತರ ಪಾತ್ರ ವಹಿಸುತ್ತಾರೆ. ಮೊರಾರ್ಜಿ ದೇಸಾಯಿ ಸರ್ಕಾರದಲ್ಲಿ ಸಚಿವರಾಗುವಂತೆ ಬಂದ ಆಮಂತ್ರಣವನ್ನು ವಿನಯಪೂರ್ವಕ ನಿರಾಕರಿಸಿ ಪಕ್ಷದ ಸಂಘಟನೆಯಲ್ಲೇ ತೊಡಗಿಸಿಕೊಳ್ಳುತ್ತಾರೆ.

೧೯೭೮-೮೪ರವರೆಗೆ ರಾಜ್ಯಸಭಾ ಸದಸ್ಯರಾಗಿ ತಮ್ಮ ಸಂಸದೀಯ ಪಟುತ್ವ ಸಾಬೀತುಪಡಿಸುವ ಸುರೇಂದ್ರ ಮೋಹನ್ ಜನತಾ ಪರಿವಾರದಿಂದ ಹೋಳಾಗಿ ಮೂಡಿದ ವಿಭಿನ್ನ ಗುಂಪುಗಳ ಸಾಕ್ಷಿ ಪ್ರಜ್ಞೆಯಾಗಿದ್ದವರು. ದೇವೇಗೌಡ ಹಾಗೂ ವಿ.ಪಿ.ಸಿಂಗ್ ಪ್ರಧಾನಮಂತ್ರಿಗಳಾಗಿದ್ದಾಗ ಅವರೊಡನೆಯೂ ನಿಕಟವಾಗಿ ಕೆಲಸ ಮಾಡಿ ಮಂಡಲ್ ಆಯೋಗದ ಜಾರಿಯಲ್ಲಿ ಮಹತ್ವದ ಪಾತ್ರ ವಹಿಸಿದರು.

◆◆

೧೭

ವರ್ಣರಂಜಿತ ವ್ಯಕ್ತಿತ್ವದ ರಾಜ್‌ನಾರಾಯಣ್

ಡಿ.ಎಸ್. ನಾಗಭೂಷಣ

ಭಾರತದ ಸಮಾಜವಾದಿ ಆಂದೋಲನದ ಅತ್ಯಂತ ವರ್ಣಮಯ ವ್ಯಕ್ತಿತ್ವಗಳಲ್ಲಿ ಒಂದೆಂದು ಪ್ರಸಿದ್ಧರಾದ ರಾಜ್ ನಾರಾಯಣ್ ಸೋಲು ಕಾಣದ ನಾಯಕಿ ಎನಿಸಿದ್ದ ಇಂದಿರಾ ಗಾಂಧಿಯವರನ್ನು ಚುನಾವಣಾ ಮೊಕದ್ದಮೆಯೊಂದರಲ್ಲಿ ಮತ್ತು ನಂತರದ ಚುನಾವಣೆಯಲ್ಲಿ ಸೋಲಿಸಿದ ಸಮಾಜವಾದಿ ಸರದಾರ ಎನಿಸಿಕೊಂಡವರು. ರಾಜ್‌ನಾರಾಯಣ್‌ರದ್ದು ಸಿಂಹದ ಶೌರ್ಯ; ಆದರೆ ಗಾಂಧಿಯ ಹೃದಯ ಪಡೆದವರೆಂದೂ ಮತ್ತು ಇವರಂಥವರು ಮೂರು ಜನರಿದ್ದರೂ ಸಾಕು, ಭಾರತದಲ್ಲಿ ಸರ್ವಾಧಿಕಾರ ಸುಳಿಯಲಾರದು ಎಂದೂ ಅವರ ರಾಜಕೀಯ ಗುರು ಲೋಹಿಯಾ ಬಣ್ಣಿಸಿದ್ದರು. ಅವರ ಆ ಮಾತು ನಿಜವಾಗಲು ಬಹುಕಾಲವೇನೂ ಬೇಕಾಗಲಿಲ್ಲ. ೧೯೭೧ರ ಚುನಾವಣೆಯಲ್ಲಿ ರಾಯ್‌ಬರೇಲಿಯಿಂದ ಇಂದಿರಾ ವಿರುದ್ಧ ಸೋತರೂ, ಅವರ ವಿರುದ್ಧ ಚುನಾವಣಾ ಭ್ರಷ್ಟಾಚಾರದ ಮೊಕದ್ದಮೆ ಹೂಡಿ ಗೆದ್ದರು. ಇದೇ ನೆಪವಾಗಿ ಇಂದಿರಾ ದೇಶದ ಮೇಲೆ ತುರ್ತು ಪರಿಸ್ಥಿತಿ ಹೇರಿದರು. ತುರ್ತು ಪರಿಸ್ಥಿತಿಗೆ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ವಿರೋಧ ಹೆಚ್ಚಿದಾಗ ಇಂದಿರಾ ತುರ್ತು ಪರಿಸ್ಥಿತಿಯನ್ನು ಸಡಿಲಿಸಿ ಚುನಾವಣೆ ಘೋಷಿಸಿದರು. ೧೯೭೭ರ ಆ ಚುನಾವಣೆಯಲ್ಲಿ ರಾಜ್‌ನಾರಾಯಣ್ ರಾಯ್‌ಬರೇಲಿಯಿಂದಲೇ ಸ್ಪರ್ಧಿಸಿ ಇಂದಿರಾರನ್ನು ಸೋಲಿಸಿ ಸರ್ವಾಧಿಕಾರ ಕೊನೆಗೊಳ್ಳಲು ಕಾರಣರಾದರು. ನಂತರ ಜನತಾ ಸರ್ಕಾರದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಯಾಗಿ ಬರಿಗಾಲ

ವೈದ್ಯರ ಪರಿಕಲ್ಪನೆಯನ್ನು ಆಧರಿಸಿದ ಗ್ರಾಮೀಣ ಆರೋಗ್ಯ ಸೇವೆ ಆರಂಭಿಸಿದರು. ಆದರೆ ಜನತಾ ಪಕ್ಷದ ಒಡಕಿನ ರಾಜಕಾರಣದಲ್ಲಿ ಆ ಸೇವೆ ಸಾಕಾರಗೊಳ್ಳಲಿಲ್ಲ ಎಂಬುದು ಬೇರೆ ಮಾತು.

೧೯೧೭ರ ನವೆಂಬರ್‌ನಲ್ಲಿ ಉತ್ತರ ಪ್ರದೇಶದ ವಾರಾಣಾಸಿ ಬಳಿಯ ಮೋತಿಕೋಟ್ ಎಂಬ ಗ್ರಾಮದಲ್ಲಿ ವಾರಾಣಾಸಿ ರಾಜಮನೆತನಕ್ಕೆ ಸೇರಿದ ಶ್ರೀಮಂತ ಜಮೀನ್ದಾರಿ (ಭೂಮಿಹಾರ್) ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದ ರಾಜ್‌ನಾರಾಯಣ್ ಬನಾರಸ್ ಹಿಂದು ವಿಶ್ವವಿದ್ಯಾಲಯದಲ್ಲಿ ಎಂ.ಎ., ಎಲ್.ಎಲ್.ಬಿ. ಪದವಿ ಪಡೆಯುವ ಹೊತ್ತಿಗೆ ತೀವ್ರ ಎಡಪಂಥೀಯ ರಾಜಕೀಯ ಕಾರ್ಯಕರ್ತರಾಗಿದ್ದರು. ೧೯೩೪ರಲ್ಲೇ ಕಾಂಗ್ರೆಸ್ ಸಮಾಜವಾದಿ ಪಕ್ಷ ಸೇರಿ ೧೯೪೨ರಲ್ಲಿ 'ಭಾರತ ಬಿಟ್ಟು ತೊಲಗಿ' ಚಳುವಳಿಯಲ್ಲಿ ಭೂಗತ ಚಳುವಳಿ ನಡೆಸಿ ಸೆರೆಮನೆ ಸೇರಿ ಪ್ರಸಿದ್ಧರಾದರು.

ತಮ್ಮ ಪಾಲಿನ ೮೦೦ ಬಿಘಾ ಜಮೀನನ್ನು ಬಡಜನರಿಗೆ ಹಂಚಿ 'ಲೋಕಬಂಧು' ಎಂಬ ಜನಪ್ರೀತಿಗೆ ಪಾತ್ರರಾಗಿದ್ದ ರಾಜನಾರಾಯಣ್ ೧೯೫೨ರಲ್ಲಿ ಉತ್ತರ ಪ್ರದೇಶದ ವಿಧಾನಸಭಾ ಸದಸ್ಯರಾದರು. ಅವರು ಮುಂದೆ ೧೫ ವರ್ಷಗಳ ಕಾಲ ಸತತವಾಗಿ ವಿರೋಧ ಪಕ್ಷದ ನಾಯಕರಾಗಿ ಸದನದ ಹೊರಗೆ ಮತ್ತು ಒಳಗೆ ಬಡಜನತೆಯ ಪರವಾಗಿ ನಡೆಸಿದ ಹೋರಾಟದಲ್ಲಿ ಅವರು ದಾಖಲೆಯ ಒಟ್ಟು ೫೮ ಬಾರಿ ಸೆರೆಮನೆವಾಸ ಅನುಭವಿಸಬೇಕಾಗಿ ಬಂದು ರಾಷ್ಟ್ರಾದ್ಯಂತ ಪ್ರಸಿದ್ಧರಾದರು. ಲೋಹಿಯಾ ಆರಂಭಿಸಿದ ಚೀನಾ ನೀತಿ ವಿರೋಧಿ, ಜಾತಿ ವಿನಾಶ, ಇಂಗ್ಲಿಷ್ ತೊಲಗಿಸಿ, ಬೆಲೆ ನಿಯಂತ್ರಣ ಚಳುವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಲೋಹಿಯಾರ ಪ್ರಿಯ ಶಿಷ್ಯರಾದರು.

ಲೋಹಿಯಾ ನಿಧನರಾದ ನಂತರ ಚರಣ ಸಿಂಗ್‌ರ ಭಾರತೀಯ ಕ್ರಾಂತಿ ದಳ ಸೇರಿ ೧೯೭೫ರ ಜೆಪಿ ಆಂದೋಲನದ ಜೊತೆ ಕೈಜೋಡಿಸಿ ಮತ್ತೆ ರಾಜಕೀಯ ಮಹತ್ವ ಗಳಿಸಿಕೊಂಡರು. ಅವರು ಆರೋಗ್ಯ ಮಂತ್ರಿಯಾಗಿದ್ದಾಗಲೇ ತಮ್ಮ ಗುರು ಲೋಹಿಯಾ ನಿಧನರಾದ ನವದೆಹಲಿಯ ವೆಲ್ಲಿಂಗ್ಡನ್ ಆಸ್ಪತ್ರೆಯನ್ನು ಡಾ.ರಾಮಮನೋಹರ ಲೋಹಿಯಾ ಆಸ್ಪತ್ರೆ ಎಂದು ಅಧಿಕೃತವಾಗಿ ಮರುನಾಮಕರಣ ಮಾಡಿದ್ದು. ಜನತಾ ಪಕ್ಷ ಒಡೆದುಹೋದ ನಂತರ ಮತ್ತೆ ಹಲವು ಪಕ್ಷ ಸೇರಿ ಬಿಟ್ಟು ಕೊನೆಗೆ ೧೯೮೬ರ ಡಿಸೆಂಬರ್ ೩೧ರಂದು ತಮ್ಮ ಇಹಲೋಕ ಪ್ರಯಾಣವನ್ನು ಮುಗಿಸಿದರು. ಕೋಟ್ಯಾಧೀಶನಾಗಿ ಹುಟ್ಟಿ ನಾಲ್ಕು ಮಕ್ಕಳ ತಂದೆಯಾಗಿದ್ದ ರಾಜ್‌ನಾರಾಯಣ್ ಕೊನೆಯುಸಿರೆಳೆದಾಗ ಅವರ ಬ್ಯಾಂಕ್ ಖಾತೆಯಲ್ಲಿದ್ದ ಹಣ ಒಂದೂವರೆ ಸಾವಿರ ರೂಪಾಯಿಗಳು ಮಾತ್ರ.

◆◆

೧೮

ಜನ ನಾಯಕ ಕರ್ಪೂರಿ ಠಾಕೂರ್

ಡಿ.ಎಸ್. ನಾಗಭೂಷಣ

ಲೋಹಿಯಾ ಪರಂಪರೆಯ ಸಮಾಜವಾದಿ ಚಳುವಳಿಯಲ್ಲಿನ ಇನ್ನೊಂದು ಉಜ್ವಲ ಹೆಸರು ಕರ್ಪೂರಿ ಠಾಕೂರ್. ಮೇಲ್ಜಾತಿಗಳ ಆಡುಂಬೊಲವಾಗಿದ್ದ ಬಿಹಾರದ ರಾಜಕಾರಣದಲ್ಲಿ ತನ್ನ ನಾಯಕತ್ವ ಗುಣದಿಂದ ಮೇಲೆದ್ದು ಬಂದು ಮೂರು ಬಾರಿ ರಾಜ್ಯದ ಮುಖ್ಯಮಂತ್ರಿಯಾದ ಕರ್ಪೂರಿ ಠಾಕೂರ್ ಕ್ಷೌರಿಕ ಕುಲವೃತ್ತಿಯ ಕುಟುಂಬವೊಂದಕ್ಕೆ ಸೇರಿದವರು. ಬಿಹಾರದ ಸಮಸ್ತಿಪುರ ಜಿಲ್ಲೆಯ ಪಿತೌಂಝಿಯಾ ಎಂಬ ಕುಗ್ರಾಮದಲ್ಲಿ(ಈಗ ಇದಕ್ಕೆ ಕರ್ಪೂರಿ ಗ್ರಾಮ ಎಂದು ಮರುನಾಮಕರಣ ಮಾಡಲಾಗಿದೆ) ೧೯೨೪ರ ಫೆಬ್ರುವರಿ ೨೪ ರಂದು ಕರ್ಪೂರಿ ಠಾಕೂರ್ ಜನಿಸಿದರು. ಸಮಸ್ತಿಪುರದಲ್ಲಿ ಕಾಲೇಜು ಓದುತ್ತಿದ್ದಾಗ 'ಭಾರತ ಬಿಟ್ಟು ತೊಲಗಿ' ಚಳುವಳಿ ಸೇರಿ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದರು. ಇದರ ಪರಿಣಾಮವಾಗಿ ಅವರು ೨೬ ತಿಂಗಳುಗಳ ಕಾಲ ಸೆರೆಮನೆವಾಸ ಅನುಭವಿಸಬೇಕಾಯಿತು.

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಸಮಾಜವಾದಿ ನಾಯಕ ಜಯಪ್ರಕಾಶ್ ನಾರಾಯಣ ಅವರ ಪ್ರಭಾವದಲ್ಲಿ ರಾಜಕೀಯ ಕಾರ್ಯಕರ್ತನಾಗಿ ಬೆಳೆದ ಕರ್ಪೂರಿ, ಸ್ವಲ್ಪ ಕಾಲ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಕೆಲಸ ಮಾಡಿದರು. ನಂತರ ೧೯೫೨ರ ಚುನಾವಣೆಗಳಲ್ಲಿ ಬಿಹಾರ ವಿಧಾನಸಭೆಯ ಪ್ರಜಾಸಮಾಜವಾದಿ ಪಕ್ಷದ ಸದಸ್ಯರಾಗಿ ಆಯ್ಕೆಯಾದರು. ಐವತ್ತರ ದಶಕದಲ್ಲಿ ಪಕ್ಷ ಇಬ್ಭಾಗವಾದಾಗ ಲೋಹಿಯಾ ಬಣದೊಂದಿಗೆ ಗುರುತಿಸಿಕೊಂಡ

ಅವರು ೧೯೬೦ರಲ್ಲಿ ಅಖಿಲ ಭಾರತ ಅಂಚೆ ಮತ್ತು ತಂತಿ ಇಲಾಖೆ ನೌಕರರ ಬೃಹತ್ ಮುಷ್ಕರವನ್ನು ಸಂಘಟಿಸಿ ಹೆಸರು ಮಾಡಿದರು.

೧೯೬೭ರ ಚುನಾವಣೆಗಳಲ್ಲಿ ಬಿಹಾರದಲ್ಲಿ ಕಾಂಗ್ರೆಸ್ ಸೋತು ಸಮಾಜವಾದಿ ಪಕ್ಷದ ನೇತೃತ್ವದ ಸಂಯುಕ್ತ ವಿಧಾಯಕ ದಳದ ಸರ್ಕಾರ ರಚಿತವಾದಾಗ ಅದರಲ್ಲಿ ಶಿಕ್ಷಣ ಮಂತ್ರಿಯಾದ ಠಾಕೂರ್ ಅವರು ಶಾಲಾ ಶಿಕ್ಷಣದಿಂದ ಕಡ್ಡಾಯ ಇಂಗ್ಲಿಷ್ ಕಲಿಕೆಯನ್ನು ತೆಗೆದುಹಾಕಿ ದೊಡ್ಡ ಕೋಲಾಹಲಕ್ಕೆ ಕಾರಣರಾದರು. ರಾಜ್ಯದ ಹಿಂದುಳಿದ ಪ್ರದೇಶಗಳಲ್ಲಿ ಹೊಸದಾಗಿ ಶಾಲಾ ಕಾಲೇಜುಗಳನ್ನು ಸ್ಥಾಪಿಸಿದರು. ನಂತರದಲ್ಲೇ, ೧೯೭೦ರಲ್ಲಿ ರಾಜ್ಯದ ಮುಖ್ಯಮಂತ್ರಿಯಾದ ಅವರು ಭೂಸುಧಾರಣೆ ಮತ್ತು ಪಾನನಿಷೇಧ ಜಾರಿಗೆ ತಂದು ಪಟ್ಟಭದ್ರರ ಕೆಂಗಣ್ಣಿಗೆ ಗುರಿಯಾಗಿ ಅಧಿಕಾರ ಕಳೆದುಕೊಂಡರು. ಅವರು ಮುಖ್ಯಮಂತ್ರಿಯಾಗಿದ್ದಾಗ ಅವರ ತಂದೆ ಅವರ ಹಳ್ಳಿಯಲ್ಲಿ ಕ್ಷೌರಿಕ ವೃತ್ತಿ ಮಾಡಿಕೊಂಡೇ ಜೀವನ ಸಾಗಿಸುತ್ತಿದ್ದರೆಂಬುದು ಈ ನಾಯಕನ ಪ್ರಾಮಾಣಿಕತೆಗೊಂದು ಸಾಕ್ಷಿ ಎಂದು ಹೇಳಲಾಗುತ್ತದೆ.

೧೯೭೦ರಲ್ಲಿ ಮುಖ್ಯಮಂತ್ರಿ ಸ್ಥಾನ ಕಳೆದುಕೊಂಡ ನಂತರ ಟೆಲ್ಕೋ ಕಾರ್ಮಿಕರ ಹಿತರಕ್ಷಣೆಗಾಗಿ ೨೮ದಿನಗಳ ಆಮರಣಾಂತ ಉಪವಾಸ ಮಾಡಿ ಜನಮನ ಗೆದ್ದರು. ಲೋಹಿಯಾ ನಿಧನಾನಂತರ ಪಕ್ಷದಲ್ಲಾದ ಗೊಂದಲಗಳಿಂದಾಗಿ ಚರಣ್‌ಸಿಂಗ್‌ರ ಭಾರತೀಯ ಕ್ರಾಂತಿ ದಳ ಸೇರಿದ ಕರ್ಪೂರಿ ಠಾಕೂರ್ ೧೯೭೪ರ ಜಯಪ್ರಕಾಶ್ ನಾರಾಯಣರ 'ಸಂಪೂರ್ಣ ಕ್ರಾಂತಿ' ಆಂದೋಲನದಲ್ಲಿ ಭಾಗವಹಿಸಿ ೧೯೭೭ರ ಚುನಾವಣೆಗಳಲ್ಲಿ ಬಿಹಾರ ವಿಧಾನ ಸಭೆಗೆ ಜನತಾ ಪಕ್ಷದ ಸದಸ್ಯರಾಗಿ ಆಯ್ಕೆಯಾಗಿ ರಾಜ್ಯದ ಮುಖ್ಯಮಂತ್ರಿಯಾದರು. ರಾಜ್ಯದ ದಲಿತರ ಮತ್ತು ಹಿಂದುಳಿದ ಜಾತಿಗಳ ಜನಪ್ರಿಯ ನಾಯಕರಾಗಿದ್ದ ಅವರು ಲಾಲೂ ಪ್ರಸಾದ್ ಯಾದವ್, ರಾಂ ವಿಲಾಸ್ ಪಾಸ್ವಾನ್, ಶಿವಾನಂದ ತಿವಾರಿ, ನಿತೀಶ್ ಕುಮಾರ್ ಮುಂತಾದ ಯುವ ನಾಯಕರನ್ನು ಬೆಳೆಸಿದರು. ೧೯೭೮ರಲ್ಲಿ ಹಿಂದುಳಿದ ಜಾತಿಗಳಿಗೆ ಉದ್ಯೋಗ ಮೀಸಲಾತಿ ಕಾರ್ಯ ಕ್ರಮವನ್ನು ಜಾರಿಗೆ ತಂದರು. ಇದು ಮತ್ತೆ ಅವರ ಸ್ಥಾನಕ್ಕೆ ಮುಳುವಾಯಿತು. ನಂತರದ ಜನತಾ ಪಕ್ಷದ ಒಡಕಿನ ರಾಜಕಾರಣದಲ್ಲಿ ಹೆಚ್ಚು ದಿನ ಬಾಳಲಾರದೆ 'ನೇತಾಜಿ' ಎಂದೇ ಪ್ರಸಿದ್ಧರಾಗಿದ್ದ ಕರ್ಪೂರಿ ಠಾಕೂರ್ ೧೯೮೮ರಲ್ಲಿ ನಿಧನ ಹೊಂದಿದರು.

◆◆

೧೯

ಸಾಹಸಮಯ ಬದುಕಿನ ಮುತ್ಸದ್ದಿ ಸಿ.ಜಿ.ಕೆ.ರೆಡ್ಡಿ

ಖಾದ್ರಿ ಎಸ್. ಅಚ್ಯುತನ್

ದೇಶಕ್ಕೆ ಸ್ವಾತಂತ್ರ್ಯ ಬರುವ ವೇಳೆಗೆ ಸರಿಯಾಗಿ ಕಾಂಗ್ರೆಸ್ಸಿನಲ್ಲಿ ಹಿರಿಯ ನಾಯಕರೆನಿಸಿದವರ ಸಂಖ್ಯೆ ಗಣನೀಯವಾಗಿ ತಗ್ಗಿತ್ತು. ಆದರೆ ಹೋರಾಟದ ಕೆಚ್ಚಿನ ಯುವನಾಯಕರ ದಂಡೇ ಸಮಾಜವಾದಿ ಆಂದೋಳನದಲ್ಲಿ ಕ್ರಿಯಾಶೀಲವಾಗಿತ್ತು. ಜೆ.ಪಿ., ಆಚಾರ್ಯ ನರೇಂದ್ರದೇವ, ರಾಮಮನೋಹರಲೋಹಿಯಾ, ಪಟವರ್ಧನ್ ಸಹೋದರರು ಅಶೋಕ್‌ಮೆಹ್ತಾ, ಎಸ್.ಎಂ. ಜೋಶಿ ತರುಣ ಸಮಾಜವಾದಿಗಳಿಗೆ ಸ್ಫೂರ್ತಿಯ ಸೆಲೆಯಾಗಿದ್ದರು. ಸಮಾಜವಾದಿ ಆಂದೋಲನ ಮೊದಲನೆಯ ಸಾರ್ವತ್ರಿಕ ಚುನಾವಣೆಯ ನಂತರ ಕುಸಿಯಲಾರಂಭಿಸಿತಾದರೂ ಎರಡನೇ ಸಾಲಿನ ಸಮಾಜವಾದಿ ಕಟ್ಟಾಳುಗಳ ಕೊರತೆ ಏನಿರಲಿಲ್ಲ. ಅವರ ಪೈಕಿ ಮಧುದಂಡವತೆ, ರಬಿರೇ, ಮಧುಲಿಮೆಯೆ, ಜಾರ್ಜ್‌ಫರ್ನಾಂಡೀಸ್ ಹಾಗೂ ಸಿ.ಜಿ.ಕೆ ರೆಡ್ಡಿ ಅವರ ಹೆಸರುಗಳು ಇಂದಿಗೂ ನೆನಪಿನಲ್ಲಿ ಹಸಿರಾಗಿದೆ.

೪೦ ವರ್ಷಗಳ ಹಿಂದೆ ದೇಶ ಇಂದಿರಾಗಾಂಧಿ ಅವರ ತುರ್ತುಪರಿಸ್ಥಿತಿ ಘೋಷಣೆಯಿಂದ ಸ್ವಾತಂತ್ರ್ಯವನ್ನು ಸ್ವಲ್ಪಕಾಲ ಕಳೆದುಕೊಂಡಿತ್ತು. ಆಗ ಭೂಗತರಾಗಿ ಬಂಡಾಯಕ್ಕೆ ಹಕ್ಕು ಹೂಡಿ ಜಾರ್ಜ್‌ಫರ್ನಾಂಡೀಸ್ ಅವರಿಗೆ ಸಾಥ್ ನೀಡಿದವರೆಂದರೆ ಸಿ.ಜಿ.ಕೆ. ರೆಡ್ಡಿಯವರು. ೨೫ನೇ ವಯಸ್ಸಿನಲ್ಲಿ ಸುಭಾಷ್ ಚಂದ್ರಬೋಸ್‌ರ ಇಂಡಿಯನ್ ನ್ಯಾಷನಲ್ ಆರ್ಮಿ ಸೇರಿ ಬ್ರಿಟಿಷ್ ಪ್ರಭುತ್ವದ ವಿರುದ್ಧ ತೋರಿದ್ದ ಕೆಚ್ಚನ್ನು ಅವರು ತಮ್ಮ ೫೪ನೇ ವಯಸ್ಸಿನಲ್ಲಿ ಮತ್ತೆ ಇಂದಿರಾರ ಸರ್ವಾಧಿಕಾರದ ವಿರುದ್ಧ ತೋರಿದರು.

ಈ ಅಗ್ರಗಣ್ಯ ಸಮಾಜವಾದಿಯ ಬದುಕು ಮತ್ತು ವ್ಯಕ್ತಿತ್ವ ಬಲು ರೋಚಕ. ೧೯೬೫ರ ಮೇ ತಿಂಗಳಲ್ಲಿ ಉದ್ಯೋಗ ಅರಸಿಕೊಂಡು ಬೆಂಗಳೂರಿಗೆ ಬಂದಾಗ ಈ ಲೇಖಕನಿಗೆ ಸಮಾಜವಾದಿ ಬಾಸು ಕೃಷ್ಣಮೂರ್ತಿಯವರು ತಡವಾಗಿ ಮದುವೆಯಾದ ಸಮಾರಂಭದಲ್ಲಿ ಸಿ.ಜಿ.ಕೆ.ರೆಡ್ಡಿಯವರನ್ನು ನೋಡುವ ಅವಕಾಶ ದೊರಕಿತು. ಈ ಸಿ. ಗೋಪಾಲಕೃಷ್ಣಮೂರ್ತಿರೆಡ್ಡಿ ಅವರ ಜನನ ಜನವರಿ ೧೨, ೧೯೨೧ರಂದು ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ಕಟಮಂಚಿಯಲ್ಲಿ. ಪ್ರೌಢಶಾಲೆ ಶಿಕ್ಷಣ ಚಿತ್ತೂರಿನಲ್ಲಿ ನಂತರ ಮದರಾಸ್ ಕಾಲೇಜಿಗೆ ಸೇರ್ಪಡೆ. ಸೋದರ, ಸೋದರಿಯರಲ್ಲೆಲ್ಲಾ ಕಿರಿಯ. ಆದರೆ ಅವರೆಲ್ಲರನ್ನೂ ಮೀರಿಸಿದ ಪ್ರತಿಭೆ. ಹುಟ್ಟು ಬಂಡಾಯಗಾರ. ಏಕಾಂತಪ್ರಿಯ. ಸಂಪ್ರದಾಯ, ಕಂದಾಚಾರ, ಗೊಡ್ಡುನಿಯಮಗಳ ವಿರುದ್ಧ ಸಿಡಿದೇಳುವ ಪ್ರವೃತ್ತಿ. 'ಹದಿವಯಸ್ಸಿಗೆ ಮುನ್ನವೇ ದೇವರಲ್ಲಿ ನಂಬಿಕೆಯನ್ನು ತೊರೆದಿದ್ದೆ. ಅದೇ ಕಾಲದಲ್ಲಿ ಬ್ರಿಟಿಷ್ ವಿರೋಧಿಯಾದೆ. ಎಲ್ಲ ರೂಪದ ಅಧಿಕಾರಶಾಹಿಯನ್ನು ದ್ವೇಷಿಸತೊಡಗಿದೆ'. ಎಂದು 'ಬರೋಡ ಡೈನಮೈಟ್ ಸಂಚು- ಬಂಡಾಯದ ಹಕ್ಕು' ಪುಸ್ತಕದಲ್ಲಿ ಅವರೇ ಬರೆದುಕೊಂಡಿದ್ದಾರೆ.

ಸಮುದ್ರ ಶಾಸ್ತ್ರ ಇಂಜಿನಿಯರ್ ಆಗಿ ಶಿಕ್ಷಣ ಪಡೆದಿದ್ದ ರೆಡ್ಡಿವರು ೩೦ರ ದಶಕದ ಕೊನೆಯ ಭಾಗದಲ್ಲಿ ಡಫರಿನ್ ತರಬೇತಿ ಹಡಗಿನಲ್ಲಿ ಕ್ಯಾಡೆಟ್ ಆಗಿದ್ದಾಗ ಮೇಲಿನವರ ಅಸಮಾಧಾನಕ್ಕೆ ಗುರಿಯಾಗಿ ನೌಕಾಪಡೆಗೆ ಆಯ್ಕೆಯಾಗಲಿಲ್ಲ. ಗಾಂಧಿ ಅನುಯಾಯಿ ಎಂಬ ರಹಸ್ಯ ವರದಿ ಇದಕ್ಕೆ ಕಾರಣ. ನಂತರ ಕಲ್ಕತ್ತೆಯಲ್ಲಿ ನೌಕಾ ಕಂಪನಿಯಲ್ಲಿ ಕಿರಿಯ ಇಂಜಿನಿಯರಾಗಿ ನೌಕರಿ ಹಿಡಿದರು. ಇದು ಅವರ ರಾಜಕೀಯ ಮತ್ತು ವಿಚಾರಯಾತ್ರೆಗೆ ಅಡಿಗಲ್ಲಾಯಿತು. ೧೯೩೮-೪೦ರ ಸಮಯ, ಸಮೀಪದ ನೇತಾಜಿ ಸುಭಾಷ್ ಚಂದ್ರ ಬೋಸರ ಮನೆ ಅವರನ್ನು ಆಕರ್ಷಿಸಿತು. ಆಗಾಗ ನೇತಾಜಿ ಜತೆ ಸಂಪರ್ಕ. ನೇತಾಜಿ ದೇಶ ಬಿಟ್ಟು ಪರಾರಿಯಾದಾಗ ಪೊಲೀಸರು ಸಿ.ಜಿ.ಕೆ.ಯನ್ನು ಬಂಧಿಸಿ ಗೌರವಿಸಿದರು. ಮತ್ತೆ ೧೯೪೨ರಲ್ಲಿ ನೇತಾಜಿ ಜತೆ ನಂಟು. ಆಜಾದ್ ಹಿಂದ್ ಫೌಜ್‌ಗೆ ಸೇರ್ಪಡೆ. ಅದರ ಮೊದಲ ತಂಡದಲ್ಲಿದ್ದ ೨೦ ಜನರಲ್ಲಿ ಸಿ.ಜಿ.ಕೆ. ಸಹ ಒಬ್ಬರು. ಸಮುದ್ರದ ಮೇಲೆ ಸಾಗುತ್ತಿದ್ದಾಗ ಅವರ ಹಡುಗು ಜಪಾನಿ ಸೇನೆಯ ದಾಳಿಗೆ ಸಿಕ್ಕಾಗ ತನ್ನ ಸಹ ಸೈನಿಕರನ್ನು ರಕ್ಷಿಸಿಕೊಳ್ಳಲು ಹೋರಾಡಿ ಸಮುದ್ರದ ಮೇಲೇ ಅನ್ನಾಹಾರಗಳಿಲ್ಲದೆ ದಿನಗಳನ್ನು ಕಳೆದ ಧೀರ ಅವರು. ಚಿತ್ತಗಾಂಗ್ ಜಿಲ್ಲೆಯ ಟೆಕ್ನಾಫ್ ಎಂಬ ಊರನ್ನು ಪ್ರವೇಶಿಸಿ ಕಲ್ಕತ್ತೆಗೆ ಸಾಗುತ್ತಿದ್ದಂತೆ ಬಂಧನ. ದೆಹಲಿಯ ಕೆಂಪುಕೋಟೆಯಲ್ಲಿ ಹಾಗೂ ಮದರಾಸಿನ ಕೋಟೆಯ ಡಂಜನ್ನುಗಳಲ್ಲಿ ಸೆರೆವಾಸ. ಬ್ರಿಟಿಷ್ ಚಕ್ರವರ್ತಿಯ ವಿರುದ್ಧ ಯುದ್ಧ ಸಾರಿದ್ದಕ್ಕೆ ವಿಚಾರಣೆಗೆ ಗುರಿ. ಎಲ್ಲಾ ೧೯ ತರುಣರನ್ನು ಗಲ್ಲಿಗೆ ಹಾಕಲು ಇಷ್ಟಪಡದ ನ್ಯಾಯಾಧೀಶರು ನಾಲ್ವರನ್ನು ಮಾತ್ರ ಮರಣದಂಡನೆಗೆ ಗುರಿ ಮಾಡಿದರು. ಸಹವರ್ತಿಗಳು ನೇಣುಗಂಬಕ್ಕೆ ಹೊರಟ ದೃಶ್ಯ

ಸಿ.ಜಿ.ಕೆ. ಅವರಿಗೆ ಸಾವಿನ ಎಲ್ಲ ಅಂಜಿಕೆಯನ್ನು ತೊಡೆದುಹಾಕಿಬಿಟ್ಟಿತು. ೧೯೪೫ರ ಡಿಸೆಂಬರ್ ತನಕ ಸೆರೆಮನೆವಾಸ.

ಇದು ಅವರಲ್ಲಿ ಸಮಾಜವಾದ ಕುರಿತು ಶ್ರದ್ಧೆ ಕುದುರಿಸಲು ಬುನಾದಿಯಾಯಿತು. ಕಾರ್ಮಿಕ ಸಂಘಟನೆಯತ್ತ ದೃಷ್ಟಿ. ೧೯೪೬ರ ಏಪ್ರಿಲ್‌ನಲ್ಲಿ ಕೋಲ್ಕತಾದಲ್ಲಿ ಡಾ.ರಾಮನೋಹರ ಲೋಹಿಯಾ ಭೇಟಿ. ೧೯೬೭ರಲ್ಲಿ ಡಾಕ್ಟರ್ ಸಾಹೇಬ್ ವಿಧಿವಶವಾಗುವವರೆಗೂ ಈ ಬಂಧುತ್ವಕ್ಕೆ ಚ್ಯುತಿ ಬರಲಿಲ್ಲ. "ನನ್ನ ಕಡೆಯಿಂದ ಮೆಚ್ಚಿಗೆ, ಅವರ ಕಡೆಯಿಂದ ಪ್ರೀತಿ ಮತ್ತು ನಂಬಿಕೆ ನಮ್ಮ ಸಂಬಂಧಗಳನ್ನು ಬೆಸೆದು ಬೆಳೆಸಿತು ಎನ್ನುವ ಸಿ.ಜಿ.ಕೆ., 'ರಾಜಕೀಯ ತೀಕ್ಷ್ಣದೃಷ್ಟಿ ಶೋಧಕ ಪ್ರವೃತ್ತಿ, ಯಾವುದನ್ನೂ ಪ್ರಶ್ನಿಸದೆ ಅಂಗೀಕರಿಸದ ಮನೋಧರ್ಮ ನನಗೆ ಬಂದುದು ಡಾ.ಲೋಹಿಯಾ ಅವರಿಂದಲೇ. ಅವರ ಶ್ರದ್ಧೆಯ ಪರಾಕ್ರಮ ಮತ್ತು ಕೆಡುಕನ್ನೂ, ಅನ್ಯಾಯವನ್ನೂ ಎದುರಿಸಿ ಹೋರಾಡುವ ಅವರ ಛಲ ನನಗೆ ಸ್ಫೂರ್ತಿಯಾದವು. ಗಾಂಧೀಜಿಯ ತರುವಾಯ ದೇಶದಲ್ಲಿ ಮೂಡಿದ ಅತ್ಯುನ್ನತ ರಾಜಕೀಯ ಚಿಂತಕ ಅವರು. ನಾನು ಕಂಡ, ಎಂದಿಗೂ ಕಾಣಬಹುದಾದ ಅತ್ಯಂತ ಮಾನವೀಯ ವ್ಯಕ್ತಿ. ಜವಾಹರ್‌ಲಾಲ್ ನೆಹರೂ ಅವರ ಅಪ್ರಾಮಾಣಿಕತೆ, ಕುಯುಕ್ತಿಗಳನ್ನು ಕಾಣುವಂತೆ ಮಾಡಿದವರೂ ಡಾ.ಲೋಹಿಯಾ' ಎಂದು ಅವರು ಲೋಹಿಯಾ ಮರಣಾನಂತರ ಬರೆದ ಸ್ಮರಣ ಲೇಖನವೊಂದರಲ್ಲಿ ಬರೆದಿದ್ದಾರೆ.

ಸಿ.ಜಿ.ಕೆ. ಹಾಗೂ ಕರ್ನಾಟಕದ ನಂಟು ಸಮಾಜವಾದಿ ಚಳವಳಿ ಹಾಗೂ ಪತ್ರಿಕೋದ್ಯಮಗಳ ಮೂಲಕ. ೧೯೪೮ರ ಆಸುಪಾಸಿನಲ್ಲಿ ಮೈಸೂರಿನಲ್ಲಿ ಜೆ.ಪಿ. ಬಂದಾಗ; ನಂತರ ಪ್ರಸಿದ್ಧ ಕಾಗೋಡು ಸತ್ಯಾಗ್ರಹದಲ್ಲಿ ಭಾಗಿ. ೧೯೪೯ರಲ್ಲಿ ಬೆಂಗಳೂರಿನಲ್ಲಿ ಸೋಷಲಿಸ್ಟ್ ಪಾರ್ಟಿಯ ಕಾರ್ಯಕಾರಣಿ ಸಭೆ ಯುಸುಫ್ ಮೆಹರಲಿ ಅವರ ಅಧ್ಯಕ್ಷತೆಯಲ್ಲಿ ನಡೆದಾಗ ಸಿ.ಜಿ.ಕೆ. ಅವರ ವ್ಯಕ್ತಿತ್ವ, ಪ್ರತಿಭೆ, ಸ್ನೇಹಮಯಿಗುಣ ಎಲ್ಲರನ್ನೂ ಆಕರ್ಷಿಸಿತು. ಅದೇ ಸಮಯಕ್ಕೆ ಪತ್ರಕರ್ತರಾಗಿ ಸಿ.ಜಿ.ಕೆ. ವೃತ್ತಿ ಆರಂಭಿಸಿದರು. ೧೯೪೮ರಲ್ಲಿ ಆರಂಭವಾದ ಡೆಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕಾ ಬಳಗದ ಪ್ರಥಮ ಪ್ರಧಾನ ವ್ಯವಸ್ಥಾಪಕರಾದರು. ಈ ಪತ್ರಿಕಾ ಸಂಸ್ಥೆ ಕಟ್ಟುವಲ್ಲಿ ಅವರ ನಿರ್ವಹಣಾ ಕ್ಷಮತೆ ಮೆರೆಯಿತು. ೧೯೫೦ರ ಕೊನೆಗೆ ಹುದ್ದೆಗೆ ರಾಜೀನಾಮೆ ನೀಡಿ ಸಮಾಜವಾದಿ ಪಕ್ಷದ ಸಂಘಟನೆಗೆ ಸಂಪೂರ್ಣ ತೊಡಗಿಸಿಕೊಂಡರು. ೧೯೫೧ರಲ್ಲಿ ಮೈಸೂರು ರಾಜ್ಯ ಸೋಷಲಿಸ್ಟ್ ಪಾರ್ಟಿಯ ಅಧ್ಯಕ್ಷರಾಗಿ ಆಯ್ಕೆಯಾದರು. ೧೯೫೨ರಲ್ಲಿ ರಾಜ್ಯದಿಂದ ರಾಜ್ಯಸಭೆಗೆ ಆಯ್ಕೆಯಾದರು. ಸದನದಲ್ಲಿ ನೆಹರೂ ನೀತಿಗಳ ಕಟು ಟೀಕಾಕಾರರಾದರು. ಸೋಷಲಿಸ್ಟ್ ಪಕ್ಷದ ನೀತಿಗಳನ್ನು ಸದನದಲ್ಲಿ ಅವರು ಪ್ರತಿಪಾದಿಸುತ್ತಿದ್ದ ವೈಖರಿಯಿಂದ ಮೊದಲ ಸಾಲಿನ ಸಂಸದೀಯ ಪಟುಗಳಲ್ಲಿ ಒಬ್ಬರೆಂಬ ಹೆಸರು ಗಳಿಸಿದರು.

ಡಾ. ಲೋಹಿಯಾ ಅವರಲ್ಲಿ ಅಚಲನಿಷ್ಠೆ ಹಾಗೂ ಜತೆಯಲ್ಲೇ ಮತ್ತೊಬ್ಬ ಹಿರಿಯ ಸಮಾಜವಾದಿ ಅಶೋಕ್‌ಮೆಹ್ತಾ ಜತೆ ನಿಕಟ ಸ್ನೇಹ. ಆದರೂ ಸೋಷಲಿಸ್ಟ್ ಪಕ್ಷ ಕಿಸಾನ್ ಮಜ್ದೂರ್ ಪ್ರಜಾಪಕ್ಷದೊಡನೆ ಸೇರಿ ಪ್ರಜಾ ಸೋಷಲಿಸ್ಟ್ ಪಕ್ಷ (ಪಿಎಸ್ಪಿ)ವಾಗುವುದನ್ನು ವಿರೋಧಿಸಿ ತಮ್ಮ ಆತಂಕಗಳನ್ನು ವಿವರಿಸಿ ಅಶೋಕ್‌ಮೆಹ್ತಾಗೆ ಬರೆದ ಪತ್ರ ಜೆ.ಪಿ. ಕೈ ಸೇರಿತು. ಆಗ ಜೆ.ಪಿ. ರೆಡ್ಡಿಯವರಿಗೆ ಮನ ಒಲಿಸುವ ಪತ್ರ ಬರೆದು 'ನೀನಿಲ್ಲದ ಮೈಸೂರು ಸೋಷಲಿಸ್ಟ್ ಪಾರ್ಟಿ ನನಗೆ ಊಹಿಸಿಕೊಳ್ಳಲು ಸಾಧ್ಯವಿಲ್ಲ. ಸಂಸತ್ತಿನಲ್ಲೂ ಪಕ್ಷದ ಪ್ರತಿಷ್ಠೆಯನ್ನು ಗಮನಾರ್ಹವಾಗಿ ಹೆಚ್ಚಿಸಿರುವೆ. ನೀನು ಸಾಧಿಸಿದ್ದೆಲ್ಲವನ್ನೂ ಹಾಳುಗೆಡವಬೇಡ. ನೀನಿನ್ನೂ ತರುಣ. ನಿನಗೆ ಉತ್ತಮ ಭವಿಷ್ಯವಿದೆ 'ಎಂದಿದ್ದರು.

ನಂತರದಲ್ಲಿ ಜೆ.ಪಿ.–ನೆಹರು ಮಾತುಕತೆ ಆರಂಭವಾಗಿ ಪಿಎಸ್ಪಿಯಲ್ಲಿ ಉಂಟಾದ ತೀವ್ರ ವಿವಾದ ಸಂದರ್ಭದಲ್ಲಿ ಸಿ.ಜಿ.ಕೆ. ಡಾ.ಲೋಹಿಯಾ ಅವರ ಮುಖ್ಯ ವಕ್ತಾರರಾದರು. ಅವರೇ ಹೆಮ್ಮೆಯಿಂದ ಹೇಳಿಕೊಂಡಿರುವಂತೆ ಲೋಹಿಯಾವಾದಿಗಳಲ್ಲಿ ಒಬ್ಬರೆಂಬ ಹೆಸರು ಪಡೆದರು. ಡಾ.ಲೋಹಿಯಾ ಅವರ ಸೋಷಲಿಸ್ಟ್ ಪಕ್ಷದ ಹೈದರಾಬಾದ್ ಸಂಸ್ಥಾಪನಾ ಸಮ್ಮೇಳನದವರೆಗೆ ಲೋಹಿಯಾ ಜತೆಗಿದ್ದ ಸಿ.ಜಿ,ಕೆ. ನಂತರ ಸಕ್ರಿಯ ರಾಜಕಾರಣದಿಂದ ವಿರಮಿಸಿದರು.

ರೆಡ್ಡಿಯವರೇ ಒಂದು ಕಡೆ ಹೇಳಿರುವಂತೆ ೧೯೫೭ರಲ್ಲಿ ಸಂಸತ್ತಿನಿಂದ ನಿವೃತ್ತರಾದ ನಂತರ ಅವರ ಹಣಕಾಸು ಸ್ಥಿತಿ ಸ್ಥಿರವಾಗಿರಲಿಲ್ಲ ಮಡದಿ ಮೂವರು ಮಕ್ಕಳ ಜವಾಬ್ದಾರಿ ಜತೆಗೆ ಲೋಹಿಯಾವಾದಿಗಳೆನಿಸಿಕೊಂಡ ಕೆಲವರ ನಡಾವಳಿ ಅವರನ್ನು ರಾಜಕೀಯದಿಂದ ವಿಮುಖಗೊಳಿಸಿತು. ಆದರೆ ಲೋಹಿಯಾ ಅವರಲ್ಲಿದ್ದ ಅಚಲ ಗೌರವ ಪ್ರೀತಿ ಎಳ್ಳಷ್ಟೂ ಕುಗ್ಗಿರಲಿಲ್ಲ. ಸಿ.ಜಿ.ಕೆ. ತಮ್ಮ ಒಬ್ಬ ಮಗನಿಗೆ ರಾಮಮನೋಹರ್ ಎಂದು ಹೆಸರಿಟ್ಟಿರುವುದೇ ಇದಕ್ಕೆ ನಿದರ್ಶನ. ರಾಜಕೀಯದಿಂದ ಹೊರಬಂದ ಸಿ.ಜಿ.ಕೆ. 'ಹಿಂದು' ಪತ್ರಿಕೆಯ ವಾಣಿಜ್ಯ ಪ್ರಬಂಧಕರಾಗಿ ಅದರ ಆಧುನೀಕರಣಕ್ಕೆ ಕೊಡುಗೆ ನೀಡಿದರು. 'ಸುದ್ದಿ ಪತ್ರಿಕೆಗಳ ಅಭಿವೃದ್ಧಿಗಾಗಿ ಸಂಶೋಧನಾ ಸಂಸ್ಥೆ' ಎಂಬುದನ್ನು ಸ್ಥಾಪಿಸಿ ಗ್ರಾಮೀಣ ಪತ್ರಿಕೆಗಳ ಅಭಿವೃದ್ಧಿಗೂ ಕೆಲಸ ಮಾಡಿದರು. ಸಾಗರದಿಂದ ಪ್ರಕಟವಾಗುತ್ತಿದ್ದ 'ಮಣ್ಣಿನ ವಾಸನೆ' ಇಂತಹ ಪತ್ರಿಕೆಗಳಲ್ಲೊಂದು.

೧೯೭೫ರ ತುರ್ತು ಪರಿಸ್ಥಿತಿ ಮತ್ತೆ ಸಿ.ಜಿ.ಕೆ.ಅವರ ಸ್ವಾತಂತ್ರ್ಯದ ಕೆಚ್ಚನ್ನು ಮರುಜಾಗೃತಗೊಳಿಸಿತು. ಅವರು ಅರೆಕ್ಷಣ ಯೋಚಿಸದೆ ಪತ್ರಿಕೋದ್ಯಮ ತೊರೆದು ಜಾರ್ಜ್‌ಫರ್ನಾಂಡೀಸ್ ಜತೆ ಕೈ ಜೋಡಿಸಿದರು. ಪ್ರಸಿದ್ಧ ಬರೋಡಾ ಡೈನಮೈಟ್ ಸಂಚಿನಲ್ಲಿ ಇವರೂ ಬಂಧಿತರಾದರು. ಆ ಕುರಿತು ಅವರೇ ತಮ್ಮ ಪುಸ್ತಕದಲ್ಲಿ 'ಜೀವನದ ತೀರಾ ಆರಂಭದೆಸೆಯಲ್ಲಿ ತೊರೆದು ಬಿಟ್ಟಿದ್ದ ಭಾವನೆಗಳು ಹಾಗೂ ಸದ್ಗುಣಗಳು ಜಾಗೃತಗೊಂಡವು' ಎಂದಿದ್ದಾರೆ. ಜಾಗತಿಕ ಮಟ್ಟದಲ್ಲಿ ವಿವಿಧ ದೇಶಗಳ

ಸಮಾಜವಾದಿಗಳೊಂದಿಗೆ ನಿಕಟ ಸ್ನೇಹ-ಸಂಪರ್ಕಗಳನ್ನಿರಿಸಿಕೊಂಡು ಅದನ್ನು ಮುಂದುವರೆಸಿದ್ದ ಸಿ.ಜಿ.ಕೆ.ರೆಡ್ಡಿಯವರನ್ನು ಭಾರತದ ಸಮಾಜವಾದಿ ಚಳುವಳಿಗೆ ಜಾಗತಿಕ ಆಯಾಮ ನೀಡಿದ ಪ್ರಮುಖರಲ್ಲೊಬ್ಬರೆಂದೂ ಹೇಳಬಹುದು. ತುರ್ತು ಪರಿಸ್ಥಿತಿಯನ್ನು ತೆಗೆಯಲು ಇಂದಿರಾ ಗಾಂಧಿಯವರ ಮೇಲೆ ಒತ್ತಡ ಬಿದ್ದುದರಲ್ಲಿ ಇದೂ ಒಂದು ಕಾರಣವೆನ್ನಬಹುದು.

ರಾಜಕೀಯದಿಂದ ವಿಮುಖವಾದರೂ ತಮಗೆ ಪ್ರಿಯವಾದ ಮಾನವ ಹಕ್ಕುಗಳ ರಕ್ಷಣೆಯಲ್ಲಿ ತೊಡಗಿಸಿಕೊಂಡು ಅದರ ಕರ್ನಾಟಕ ಘಟಕದ ಅಧ್ಯಕ್ಷರಾಗಿ ಕೆಲಸ ಮಾಡಿದರು. ಸತ್ತೆಯ ಮುಂದೆ ತಲೆ ಬಾಗಲಿಲ್ಲ. ತಮ್ಮ ಕೆಳಗಿನವರ ಮೇಲೆ ದರ್ಪ ತೋರಲಿಲ್ಲ. ಶಿಷ್ಟಾಚಾರ ಸಂಪ್ರದಾಯ ಶರಣರಾಗಲೇ ಇಲ್ಲ. ಸರಳವಾಗಿ ಬದುಕಿದರು. ಮಹತ್ತನ್ನು ಸಾಧಿಸಿದರು. ಪರಿಚಯವೇ ಇಲ್ಲದವರು ಅವರ ಅಂಗಿ ಜಗ್ಗಿ ಮಾತನಾಡಿಸಬಹುದಾಗಿತ್ತು. ಶ್ರೀಮಂತರಾಗಿರುವುದಕ್ಕಿಂತ ಬಡವರು ಸಾಮಾನ್ಯರು ಅವರ ಮೌಲ್ಯ ಬದ್ಧತೆಯ ಕೇಂದ್ರಬಿಂದು. ಸಿ.ಜಿ.ಕೆ. ತಮ್ಮ ಜೀವನದ ಕೊನೆಯ ದಿನಗಳಲ್ಲಿ ಮಡದಿ ವಿಮಲ ಅವರ ಜತೆ ಅನಿಸಿಕೆ, ಆಸೆ ಹಂಚಿಕೊಂಡು 'ನನ್ನ ಮೌಲ್ಯ -ವಿಚಾರಗಳು ಒಬ್ಬ ಯುವಕನಿಗಾದರೂ ಸ್ಫೂರ್ತಿ ನೀಡಿದರೆ ನನ್ನ ಬದುಕು ಸಾರ್ಥಕ' ಎಂದಿದ್ದರು. ರೆಡ್ಡಿಯವರು ಡಿಸಂಬರ್ ೨೫, ೧೯೯೪ರಂದು ತಮ್ಮ ೭೩ನೇ ವಯಸ್ಸಿನಲ್ಲಿ ಶಸ್ತ್ರಚಿಕಿತ್ಸೆಯೊಂದು ಫಲಕಾರಿಯಾಗದೆ ನಿಧನರಾದರು. ಕ್ರಾಂತಿಕಾರಿ, ಸಮಾಜವಾದಿ, ಮನುಷ್ಯ ಪ್ರೇಮಿ ಸಿ.ಜಿ.ಕೆ. ನಮ್ಮೊಡನಿದ್ದರು ಎಂಬುದೇ ನನ್ನಂಥವರಿಗೆ ಅಭಿಮಾನದ ಸಂಗತಿ.

◆◆

೨೦

ಪಾನೀವಾಲೀ ಬಾಯಿ–ಮೃಣಾಲ್ ಗೋರೆ

ಮಂಜುಳಾ ಎಂ. ರಾಜು

ಪಾನೀವಾಲೀ ಬಾಯಿ ಎಂದೇ ಮುಂಬೈನ ಸಾಮಾನ್ಯ ಜನರಿಂದ ಪ್ರೀತಿ ಗೌರವಗಳಿಂದ ಕರೆಸಿಕೊಳ್ಳುತ್ತಿದ್ದ ಸಮಾಜವಾದಿ ನಾಯಕಿ ಮೃಣಾಲ್ ಗೋರೆ, ಮೂಲತಃ ಗಾಂಧಿ ಪ್ರಭಾವವಿದ್ದ ಕುಟುಂಬದಿಂದ ಬಂದವರು. ಆ ಪ್ರಭಾವದಿಂದಲೇ ೧೯೪೭೦ರಲ್ಲಿ ತಾವು ಅಧ್ಯಯನ ಮಾಡುತ್ತಿದ್ದ ವೈದ್ಯಕೀಯ ವೃತ್ತಿ ಶಿಕ್ಷಣವನ್ನು ತೊರೆದು ಸಮಾಜ ಸೇವೆಗೆ ತಮ್ಮನ್ನು ತೊಡಗಿಸಿಕೊಂಡವರು! ಸ್ತ್ರೀಯರಿಗೆ ಗೌರವ, ಸಮಾನತೆ, ಸ್ವಾತಂತ್ರ್ಯ ನೀಡುತ್ತಿದ್ದ ಕುಟುಂಬದಲ್ಲಿ ೧೯೨೮ರಲ್ಲಿ ಜನಿಸಿದ ಇವರ ವ್ಯಕ್ತಿತ್ವ ರೂಪಗೊಳ್ಳುತ್ತಿದ್ದ ಸಮಯದಲ್ಲಿ ಅಹಲ್ಯ ರಂಗನೇಕರ್, ಸುಶೀಲಾ ಗೋಪಾಲನ್‌ರಂತಹ ಎಡಪಂಥೀಯ ಮಹಿಳಾ ಚಳುವಳಿಕಾರರ ಪ್ರಭಾವ ಇವರ ಮೇಲಾಯಿತು.

೧೯೪೮ರಲ್ಲಿ ಸಮಾಜವಾದಿ ಧುರೀಣರಾಗಿದ್ದ ಕೇಶವ ಗೋರೆಯವರನ್ನು ವಿವಾಹವಾಗಿ ಮುಂಬೈನ ಗೋರೆಗಾಂವ್‌ನಲ್ಲಿ ಸಂಸಾರ ಹೂಡಿದರು ಮತ್ತು ಸಮಾಜವಾದಿ ಪಕ್ಷದ ಸಕ್ರಿಯ ಸದಸ್ಯರಾದರು. ಗೋರೆಗಾಂವ್ ಹಳ್ಳಿಗಾಡಿನಂತಿದ್ದು ಮೂಲಭೂತ ನಾಗರೀಕ ಸೌಲಭ್ಯಗಳಿಂದ ವಂಚಿತವಾಗಿತ್ತು. ಮೃಣಾಲ್ ಗೋರೆಯವರು ಅಲ್ಲಿ ಶೌಚಾಲಯ, ಚರಂಡಿ, ಶುದ್ಧ ಕುಡಿಯುವ ನೀರು, ಸಮುದಾಯ ಭವನ, ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಕೇಂದ್ರ, ಶಾಲೆಗಳು, ಹೆಣ್ಣು ಮಕ್ಕಳ ಶಿಕ್ಷಣ ಮುಂತಾದ ಮೂಲಭೂತ ವ್ಯವಸ್ಥೆಗಳಿಗಾಗಿ ಸತತ ಹೋರಾಟ ನಡೆಸಿ ಸಫಲರಾದರು. ಪಾದಯಾತ್ರೆ, ಸಭೆ, ಮೆರವಣಿಗೆಗಳನ್ನು ನಡೆಸಿ ಸಾರ್ವಜನಿಕರ, ರಾಜಕಾರಣಿಗಳ, ಅಧಿಕಾರಿಗಳ ಗಮನ ಸೆಳೆದರು. ಮಹಿಳೆಯರನ್ನು ಒಂದುಗೂಡಿಸಿ ತಟ್ಟೆ–ಲಟ್ಟಣಿಗೆಗಳನ್ನು

ಬಡಿಯುತ್ತಾ ಹೋಗುವ ಇವರ ಹೋರಾಟಕ್ಕೆ ವಿಶಿಷ್ಟ ಕಳೆ-ಭಾಮು ಬಂದಿತ್ತು. ೧೯೫೦ರಲ್ಲಿ ಗೋರೆಗಾಂವ್ ಮಹಿಳಾ ಮಂಡಲ ಸೇರಿದ ಇವರು ಕೇಂದ್ರ ಸರ್ಕಾರ ಕುಟುಂಬ ಯೋಜನಾ ಕಾರ್ಯಕ್ರಮ ಪ್ರಾರಂಭಿಸುವ ಮೊದಲೇ ಕುಟುಂಬ ಯೋಜನೆ ಕುರಿತು ಜಾಗೃತಿ ಮೂಡಿಸಿದ್ದರು. ೧೯೫೩ರಲ್ಲಿ ಗೋರೆಗಾಂವ್ ಪಂಚಾಯ್ತಿ ಸದಸ್ಯರಾಗಿ ಚುನಾಯಿತರಾದರು. ೧೯೫೦ರಲ್ಲಿ ಸಂಯುಕ್ತ ಮಹಾರಾಷ್ಟ್ರ ಚಳುವಳಿ, ಗೋವಾ ವಿಮೋಚನಾ ಹೋರಾಟ, ಅವರ ಆತ್ಮಸ್ಥೈರ್ಯವನ್ನು ಹೆಚ್ಚಿಸಿದವು. ಜೈಲೂ ಸೇರ ಬೇಕಾಯಿತು. ೧೯೬೧ರಲ್ಲಿ ಸಮಾಜವಾದಿ ಪಕ್ಷದಿಂದ ಮುಂಬೈ ಮುನ್ಸಿಪಲ್ ಕೌನ್ಸಿಲರ್ ಆಗಿ ಆಯ್ಕೆಯಾದ ಅವರು, ನಗರದಲ್ಲಿ ಕುಡಿಯುವ ನೀರಿನ ತೀವ್ರ ಅಭಾವ ಉಂಟಾದಾಗ ಮನೆ ಮನೆಗೆ ನೀರು ಒದಗಿಸುವ ಯೋಜನೆಯೊಂದಕ್ಕಾಗಿ ಹೋರಾಡಿ ಜಯಗಳಿಸಿ 'ಪಾನಿವಾಲಿ ಬಾಯಿ' ಎಂದೇ ಜನರ ನಡುವೆ ಪ್ರಸಿದ್ಧರಾದರು. ಇದರ ಫಲವೋ ಎಂಬಂತೆ ಅವರು ೧೯೭೨ರಲ್ಲಿ ಭಾರಿ ಬಹುಮತದೊಂದಿಗೆ ಮಹಾರಾಷ್ಟ್ರ ವಿಧಾನಸಭೆಗೆ ಆಯ್ಕೆಯಾದರು. ಸಿಕ್ಕಂತಹ ಅಧಿಕಾರವನ್ನು ರೈತರ, ದಲಿತರ, ಮಹಿಳೆಯರ, ಗುಡ್ಡಗಾಡು, ಅಲೆಮಾರಿ ಜನರ ಹಕ್ಕುಗಳ ಹೋರಾಟಗಳಿಗಾಗಿ ಬಳಸಿ ರಾಜ್ಯದ ಜನಪ್ರಿಯ ಸಮಾಜವಾದಿ ನಾಯಕಿ ಎನಿಸಿದರು.

೧೯೭೫ರಲ್ಲಿ ಇಂದಿರಾಗಾಂಧಿ ತುರ್ತುಪರಿಸ್ಥಿತಿ ಹೇರಿದಾಗ ಭೂಗತರಾದ ಮೃಣಾಲ್ ತಾಯಿ, ಭೂಗತರಾಗಿ ನಡೆಸಿದ ಹೋರಾಟದ ಪರಿಣಾಮವಾಗಿ, ನಂತರ ನಡೆದ ಚುನಾವಣೆಯಲ್ಲಿ ಲೋಕಸಭೆಗೆ ಆಯ್ಕೆಯಾದರು. ಆಗ ಜನರ ಬಾಯಲ್ಲಿ "ದಿಲ್ಲೀವಾಲೀ ಪಾನೀ ಮೇ, ಪಾನೀವಾಲೀ ದಿಲ್ಲೀ ಮೇ" ಎಂಬ ಮಾತು ಹರಿದಾಡುತ್ತಿತ್ತು.

೧೯೯೦ರಲ್ಲಿ, ಮುಕ್ತ ಮಾರುಕಟ್ಟೆ ನೀತಿ ಜಾರಿಯಾದಾಗ, ಬಂಡವಾಳಶಾಹಿಗಳಿಂದ ಬಡವರು, ಅಂಚಿಗೆ ತಳ್ಳಲ್ಪಟ್ಟವರಿಗೆ ಆಗುವ ಅನಾನುಕೂಲ, ತೊಂದರೆಗಳ ಬಗ್ಗೆ ಕಳವಳಗೊಂಡ ಅವರು ಆ ನೀತಿಯ ವಿರುದ್ಧ ಹೋರಾಟಕ್ಕಿಳಿದರು. ಹದಗೆಡುತ್ತಿದ್ದ ಆರೋಗ್ಯದ ನಡುವೆಯೂ 'ಎನ್ರಾನ್ ಕಂಪೆನಿ'ಯ ಹುನ್ನಾರದ ವಿರುದ್ಧ, ನರ್ಮದಾ ಅಣೆಕಟ್ಟು ನಿರಾಶ್ರಿತರ ಪರವಾಗಿ, ಹೋರಾಟ, ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ಶಾಸನ ಸಭೆಗಳಲ್ಲಿನ ಮಹಿಳಾ ಮೀಸಲಾತಿ ಮಸೂದೆಗಾಗಿ ಚಳುವಳಿ ನಡೆಸಿದರು. 'ಬೃಹನ್ಮುಂಬಯಿ ನಿರ್ಮಾಣ ಅಭಿಯಾನ' ಎಂಬ ಕಾರ್ಯಕ್ರಮದಡಿಯಲ್ಲಿ ಕಡಿಮೆ ಬೆಲೆಯಲ್ಲಿ ಬಡ, ಮಧ್ಯಮ ವರ್ಗದವರಿಗೆ ಕಡಿಮೆ ವೆಚ್ಚದಲ್ಲಿ ವಸತಿ ಕಲ್ಪಿಸುವ ಕಾರ್ಯ ಕೈಗೊಂಡು ಬಿಲ್ಡರ್‌ಗಳ ಕೆಂಗಣ್ಣಿಗೆ ಗುರಿಯಾದರು. ಇಡೀ ಜೀವನವನ್ನು ಜನಪರ ಹೋರಾಟಗಳಿಗೇ ಮೀಸಲಿಟ್ಟ, ಲೋಹಿಯಾ ಅನುಯಾಯಿ ಯಾಗಿದ್ದ ಮೃಣಾಲ್ ತಾಯಿ, ೨೦೧೨ರ ಜುಲೈ ೧೭ರಂದು ನಮ್ಮನ್ನಗಲಿದರು.

(ಸಂಗ್ರಹ ಅನುವಾದ)

◆◆

೨೧

'ಫೈರ್ ಬ್ರಾಂಡ್' ನಾಯಕಿ ಪ್ರಮೀಳಾ ದಂಡವತೆ

ಮಂಜುಳಾ ಎಂ. ರಾಜು

೧೯೨೮ರಲ್ಲಿ ಮುಂಬೈನ ಜನಪ್ರಿಯ ವೈದ್ಯರಲ್ಲೊಬ್ಬರಾಗಿದ್ದ ಡಾ. ಜನಾರ್ದನ ಕರಂಡೆಯವರ ಮಗಳಾಗಿ ಜನಿಸಿದ ಪ್ರಮೀಳಾ ಕರಂಡೆ ಹೆಸರಾಂತ ಸಮಾಜವಾದಿ ನಾಯಕ ಪ್ರೊ. ಮಧು ದಂಡವತೆಯವರನ್ನು ವಿವಾಹವಾದ ನಂತರ ಪ್ರಮೀಳಾ ದಂಡವತೆ ಎಂದೇ ಪ್ರಸಿದ್ಧರಾದರು. ಮುಂಬೈನ ಜೆ.ಜೆ. ಕಲಾಶಾಲೆಯ ವಿದ್ಯಾರ್ಥಿಯಾಗಿದ್ದಾಗಿನಿಂದಲೂ ಮಹಿಳಾ ಹೋರಾಟಗಳಲ್ಲಿ ತೊಡಗಿಕೊಂಡಿದ್ದ ಅವರು ಸಮಾಜವಾದಿಯಾದ ಪತಿಯ ಸಾಹಚರ್ಯದಲ್ಲಿ ದೊಡ್ಡ ಮಟ್ಟದ ಹೋರಾಟಗಾರ್ತಿಯಾಗಿ ದೊಡ್ಡ ಸಮಾಜವಾದಿ ನಾಯಕಿಯಾಗಿಯೂ ಬೆಳೆದರು. ನಾಗರಿಕ ಹಕ್ಕುಗಳ ಜನತಾ ಒಕ್ಕೂಟವೆನಿಸಿರುವ ಪಿಯುಸಿಲ್ ಮತ್ತು ಮಹಿಳಾ ಹಕ್ಕುಗಳ ಅಖಿಲ ಭಾರತ ಹೋರಾಟ ವೇದಿಕೆಯೆನಿಸಿದ 'ಮಹಿಳಾ ದಕ್ಷಾ ಸಮಿತಿ'ಯ ಸ್ಥಾಪಕ ಸದಸ್ಯರಾದ ಪ್ರಮೀಳಾ 'ಫೈರ್ ಬ್ರಾಂಡ್' ಹೋರಾಟಗಾರ್ತಿ ಎಂದೇ ಹೆಸರುವಾಸಿ. ಸತಿ, ವರದಕ್ಷಿಣೆ ಮುಂತಾದ ಸ್ತ್ರೀ ಪೀಡಕ ಪದ್ಧತಿಗಳನ್ನು ವಿರೋಧಿಸಿ ಹಲವು ಚಳುವಳಿಗಳನ್ನು ಸಂಘಟಿಸಿದ ಅವರು ಲಟ್ಟಣಿಗೆ–ತಟ್ಟೆಗಳನ್ನೇ ಬಡಿಯುತ್ತಾ, ವರದಕ್ಷಿಣೆಗಾಗಿ ದೌರ್ಜನ್ಯ ನಡೆಸಿದ ಕುಟುಂಬದ ಎದುರು ನೂರಾರು ಮಹಿಳೆಯರನ್ನು ಸೇರಿಸಿ ನಡೆಸಿದ ಹೋರಾಟದ ಮಾದರಿ ರಾಷ್ಟ್ರದ ಗಮನ ಸೆಳೆದಿತ್ತು.

೧೯೬೮ರಿಂದ ೧೯೭೪ರವರೆಗೆ ಮುಂಬೈ ನಗರ ಸಭೆಯ ಸದಸ್ಯರಾಗಿ, ನಂತರ ೧೯೮೦ರಿಂದ ೮೪ರವರೆಗೆ ಲೋಕಸಭಾ ಸದಸ್ಯರಾಗಿದ್ದ ಪ್ರಮಿಳಾ ದಂಡವತೆ

ಜನಪ್ರತಿನಿಧಿಯಾಗಿ ಈ ಎರಡೂ ಅಧಿಕಾರ ಸ್ಥಾನಗಳನ್ನು ಬಳಸಿದ್ದು ಜನರ, ವಿಶೇಷವಾಗಿ ಮಹಿಳೆಯರ ನಾಗರೀಕ ಹಕ್ಕುಗಳ ರಕ್ಷಣೆ ಮತ್ತು ಬಲವರ್ಧನೆಗಾಗಿಯೇ. ಇಂತಹ ಹೋರಾಟದ ಬದುಕಿನ ನಡುವೆಯೇ ಅವರು ೨೦೦೧ರ ಕೊನೆಯ ದಿನ ಹೃದಯಾಘಾತದಿಂದ ಕೊನೆಯುಸಿರೆಳೆದರು.

(ಸಂಗ್ರಹಾನುವಾದ)

◆◆

ಅನುಬಂಧಗಳು

೧. ಸಮಾಜವಾದಿಗಳಿಗೆ ಗಾಂಧಿ ಹಿತವಚನ
೨. ಒಳ್ಳೆಯತನಕ್ಕೆ ಸ್ಫೂರ್ತಿ ಎಲ್ಲಿಂದ?
೩. ಕರ್ನಾಟಕದ ಮಿತ್ರ ಕಿಷನ್ ಪಟ್ನಾಯಕ್: ಒಂದು ವೈಯಕ್ತಿಕ ನೋಟ

ಅನುಬಂಧ: ೧

ಸಮಾಜವಾದಿಗಳಿಗೆ ಗಾಂಧಿ ಹಿತವಚನ

(೧೯೩೪ರ ಅಕ್ಟೋಬರ್‌ನಲ್ಲಿ ಕಾಂಗ್ರೆಸ್‌ನೊಳಗೇ ಒಂದು ಉಪ ಪಕ್ಷವಾಗಿ ಕಾಂಗ್ರೆಸ್ ಸಮಾಜವಾದಿ ಪಕ್ಷ ಸ್ಥಾಪಿತವಾದಾಗ, ಅದರ ನೀತಿ ಪತ್ರದ ಬಗ್ಗೆ ಸಮಾಜವಾದಿ ನಾಯಕರು ಗಾಂಧಿಯವರ ಅಭಿಪ್ರಾಯ ತಿಳಿಯಲು ಅವರನ್ನು ಭೇಟಿಯಾದಾಗ ಗಾಂಧಿ, ಅವರಿಗೆ ಹೇಳಿದ ಮಾತುಗಳ ಆಯ್ದ ಭಾಗಗಳು ಇಲ್ಲಿವೆ)

ಸುಮಾರು ಐವತ್ತು ವರ್ಷಗಳ ಹಿಂದೆ ದಕ್ಷಿಣ ಆಫ್ರಿಕಾದಲ್ಲಿ ನಾನು ವಕೀಲ ವೃತ್ತಿಯನ್ನು ನಡೆಸುತ್ತಿರುವಾಗ ತಾವು ಸಮಾಜವಾದಿಗಳು ಎಂದು ಹೇಳಿಕೊಳ್ಳುವ ಸಾಕಷ್ಟು ಮಂದಿ ಅಲ್ಲಿ ಇದ್ದರು. ಆದರೆ ವಾಸ್ತವವಾಗಿ ಅವರು ಯಾವ ರೀತಿಯಿಂದಲೂ ನನಗಿಂತ ಹೆಚ್ಚು/ಉತ್ತಮ ಸಮಾಜವಾದಿಗಳು ಎಂದು ತೋರುತ್ತಿರಲಿಲ್ಲ. ಆಗ ನಾನು ಕೂಲಿ ಕಾರ್ಮಿಕರ ನಡುವೆ ಕೆಲಸ ಮಾಡುತ್ತಿದ್ದೆ. ಮತ್ತು ನಾನು ಈ ಕೆಲಸವನ್ನು ಜೀವನದ ಪರಮೋದ್ದೇಶವನ್ನಾಗಿ ಮಾಡಿಕೊಂಡು ಅವರಂತೆಯೇ ನನ್ನ ಬದುಕನ್ನು ನಡೆಸುತ್ತಿದ್ದೆ. ನನ್ನನ್ನು ಕಾರ್ಮಿಕರು ಮತ್ತು ರೈತರ ಸೇವಕನೆಂದೇ ತಿಳಿದು ಅವರ ನಡುವೆ ಕೆಲಸ ಮಾಡುತ್ತಲಿದ್ದೆ. ಆದರೆ ಎಂದಿಗೂ ನನ್ನನ್ನು ನಾನು ಒಬ್ಬ ಸಮಾಜ ವಾದಿಯೆಂದು ಕರೆದುಕೊಳ್ಳುವ ಅಗತ್ಯ ಕಂಡಿರಲಿಲ್ಲ. ಸಮಾಜವಾದದ ನನ್ನ ಪರಿಕಲ್ಪನೆ ಸ್ವಲ್ಪ ಬೇರೆಯೆ ಇದೆ. ಈ ವಿಷಯದಲ್ಲಿ ಉಳಿದವರಿಗೆ ಸಹಮತವಿಲ್ಲದಿದ್ದರೂ, ಅವರು ನನ್ನನ್ನು ತೊರೆದರೂ ನಾನು ಚಿಂತಿಸುವುದಿಲ್ಲ. ಅವರೆಲ್ಲರೂ ನನ್ನ ಸ್ನೇಹಿತರೆ ಆಗಿದ್ದಾರೆ. ಹಾಗಾಗಿ ಅವರಿಗೆ ನಾನು ಹೇಳುವುದೆಂದರೆ, "ಒಬ್ಬ ನಿರ್ಬಲನು ತನಗೆ ಅಗತ್ಯವಿದ್ದುದನ್ನು ಒದಗಿಸಿಕೊಳ್ಳಲಾಗದಿದ್ದರೆ ನಾನೂ ಅವುಗಳನ್ನು ವರ್ಜಿಸುತ್ತೇನೆ. ಮೊದಲಿಗೆ ಅವನ ಅಗತ್ಯಗಳನ್ನು ಪೂರೈಸುವಂತೆ ನೋಡಿಕೊಂಡು ನಂತರ ನನ್ನ ಬಗ್ಗೆ ಯೋಚಿಸುತ್ತೇನೆ". ಇದು ಸಮಾಜವಾದದ ನನ್ನ ರೀತಿ ಮತ್ತು ಪರಿಕಲ್ಪನೆ.

ಈ ಮಾದರಿಯ ಸಮಾಜವಾದವನ್ನು ತರಬೇಕೆಂದು ನೀವೂ ಇಚ್ಛಿಸಿದರೆ ನಿಮ್ಮೊಟ್ಟಿಗೆ ಕೂಡಿ ಕೆಲಸವನ್ನು ಮಾಡುವವರಲ್ಲಿ ನಾನೇ ಮೊದಲಿಗನಾಗಿರುತ್ತೇನೆ. ಒಬ್ಬ ಅರಸನೂ, ತನ್ನ ಪ್ರಜೆಗಳ ಪ್ರಾಮಾಣಿಕ ಸೇವಕನಾಗುವುದರ ಮೂಲಕ, ನಿಜವಾದ ಸಮಾಜವಾದಿ ಆಗಬಲ್ಲನೆಂದು ನನ್ನ ಬಲವಾದ ನಂಬಿಕೆ. ಹಾಗಾದರೆ ಅರಸ ಮತ್ತು ಆತನ ಪ್ರಜೆಗಳನ್ನು ಸಮಾಜವಾದಿಗಳನ್ನಾಗಿ ಮಾಡಬೇಕಾದರೆ ನಾವು ಹೇಗೆ ಕ್ರಿಯಾಶೀಲರಾಗ ಬಹುದು? ನನ್ನ ಪ್ರಕಾರ ಮೊದಲು ಸ್ವತಃ ನಾವೇ ಅಂತಹ ನಿದರ್ಶನವನ್ನು ಹಾಕಿಕೊಳ್ಳು ವುದರ ಮೂಲಕ ಉಳಿದವರಲ್ಲಿ ಪರಿವರ್ತನೆಯನ್ನು ತರಬಹುದು. ಅಂದರೆ ನಾವು ಏನು ಹೇಳುತ್ತಿದ್ದೆವೋ ಅದು ನಾವೇ ಆಗುವುದರ ಮೂಲಕ ಪರಿವರ್ತನೆ ಸಾಧ್ಯ ಎಂದು ನನ್ನ ಅಚಲ ವಿಶ್ವಾಸ.

ಒಬ್ಬ ರಾಜನನ್ನು ಬದಲಾಯಿಸಲು ಎರಡು ರೀತಿಗಳಿವೆ ಎಂದು ಹೇಳುತ್ತಾರೆ. ಒಂದೋ ಆತನನ್ನು ಮುಗಿಸಿಬಿಡುವುದು ಇಲ್ಲಾ ... ಅಧಿಕಾರದಿಂದ ಕೆಳಗಿಳಿಸುವುದು. ಆದರೆ ನನ್ನದು ಅವರನ್ನು ಪ್ರೇಮದಿಂದ ಪರಿವರ್ತಿಸುವ ವಿಧಾನ. ಕೊಲ್ಲುವುದು ಅತ್ಯಂತ ಹೇಯ ಕೃತ್ಯ. ಸಾವಿರಾರು ಜನರಿಗೆ ಕೊಲ್ಲುವುದನ್ನು ಕಲಿಸಿದರೆ ನೀವು ಸ್ಥಾಪಿಸುವುದು ಸಮಾಜವಾದದ ವ್ಯವಸ್ಥೆಯನ್ನಲ್ಲ, ಬದಲಿಗೆ ಕೊಲೆಗಡುಕರ ವ್ಯವಸ್ಥೆ. ನಮ್ಮ ಸ್ಪೀಕರ್‌ರವರು ತಮ್ಮನ್ನು ಕಾಂಗ್ರೆಸ್ಸಿಗನೆಂದು ಕರೆದುಕೊಂಡ ಹಾಗೆ ನಮ್ಮ ವೈಸರೊಯ್‌ರವರೂ ತಮ್ಮನ್ನು ಕಾಂಗ್ರೆಸ್ಸಿಗನೆಂದು ಕರೆದುಕೊಳ್ಳಬಹುದು. ಆದರೆ ತಮ್ಮ ಅಧಿಕಾರವನ್ನು ಬಿಟ್ಟುಕೊಡುವಂತೆ ಆಗ್ರಹಿಸಿದರೆ ಅವರು ಬಿಟ್ಟುಕೊಟ್ಟಾರೆಯೆ? ಅದೇ ರೀತಿ ತಮ್ಮನ್ನು ಕಾಂಗ್ರೆಸ್ಸಿಗರೆಂದು ಕರೆದುಕೊಳ್ಳುವ ಅನೇಕ ಜನರಿದ್ದಾರೆ. ಆದರೆ ಅವರನ್ನು ನೈಜ ಕಾಂಗ್ರೆಸ್ಸಿಗರೆಂದು ಒಪ್ಪಿಕೊಳ್ಳಬಹುದೇ? ಅವರನ್ನು ನಿಜ ಸಮಾಜವಾದಿಗಳೆಂದು ಕರೆಯಬಹುದೇ? ಅವರಲ್ಲನೇಕರು ತಮ್ಮನ್ನು ತಾವು ಸಂಪತ್ತಿನ ಮತ್ತು ಅದರಿಂದ ಕೊಂಡುಕೊಳ್ಳಬಹುದಾದ ಸುಖ ಮತ್ತು ಮೋಜಿನ ಹೊಳೆಯಲ್ಲಿ ಮಿಂದು ತೇಲಾಡುತ್ತಾ ಮೈಮರೆತಿದ್ದಾರೆ.

ದಕ್ಷಿಣ ಆಫ್ರಿಕಾದಲ್ಲಿ ಬಿಳಿಯರು ನನ್ನನ್ನು ವೈರಿಯಂತೆ ನಡೆಸಿಕೊಂಡರೂ ಅನೇಕ ಬಿಳಿಯರು ನನ್ನೊಡನೆ ಸ್ನೇಹವನ್ನೂ ಬೆಳೆಸಿದರು. ಸಮಾಜವಾದವೆಂಬುದು ವೈರಿಗಳನ್ನು ಸ್ನೇಹಿತರನ್ನಾಗಿ ಪರಿವರ್ತಿಸುವ ವಿಷಯವೇ ಆಗಿದ್ದರೆ ನನ್ನನ್ನು ನಿಜ ಸಮಾಜವಾದಿ ಯೆಂದು ಪರಿಗಣಿಸಬೇಕು. ಸಮಾಜವಾದದ ಈ ಪರಿಕಲ್ಪನೆ ನನ್ನದೇ ಸ್ವಂತದ್ದು. ಸಮಾಜವಾದಿಗಳೆಂದು ಹೇಳಿಕೊಳ್ಳುವ ಜನರು ಸಮಾಜವಾದವೆಂದರೇನು ಎಂದು ನನ್ನಿಂದ ಕಲಿತುಕೊಳ್ಳಬೇಕು. ಆಗ ಮಾತ್ರ ನಾವು ನಿಷ್ಠಾವಂತ ಮತ್ತು ಶ್ರದ್ಧೆಯುಳ್ಳ ಕಾರ್ಯಕರ್ತರನ್ನು ತಯಾರುಗೊಳಿಸಿ ರೈತರ ಮತ್ತು ಶ್ರಮಿಕರ ಆಡಳಿತವನ್ನು ತರಬಹುದು. ಬಹುಶಃ ನನ್ನ ಈ ಕರೆ ಅರಣ್ಯರೋಧನವೆಂದು ತಳ್ಳಿಹಾಕಿ ಯಾರು ಕೇಳಿಸಿಕೊಳ್ಳದೇ ಇರಬಹುದು. ಈ ನನ್ನ ನಿಲುವನ್ನು ಟೀಕಿಸಿ ನನ್ನನ್ನು ಒಬ್ಬ ಹುಚ್ಚ

ಎಂದು ಕರೆಯುವ ಜನರೂ ಇದ್ದಾರೆ. ಆದರೆ ಹಿಂಸೆಯಲ್ಲಿ ಎಳ್ಳಷ್ಟೂ ನಂಬಿಕೆಯಿಲ್ಲದವನಾಗಿ ಅದನ್ನೇ ನಾನು ಬೋಧಿಸಲಾರೆ. ಪ್ರಾಣವನ್ನೇ ತೆರಬೇಕಾದಂತಹ ಪರಿಸ್ಥಿತಿಯಲ್ಲೂ ಯಾರಿಗೂ ನೀವು ತಲೆ ಬಾಗಬೇಡಿ ಎಂದು ಮಾತ್ರ ನಾನು ಹೇಳುತ್ತೇನೆ. ಇದೇ ಧೈರ್ಯವಂತನ ಮತ್ತು ಧೀರತೆಯ ಲಕ್ಷಣ. ಹಿಂಸೆಯನ್ನು ಎಸಗುವುದಲ್ಲ. ಹಾಗಾಗಿ ಸಮಾಜವಾದಿ ಪಕ್ಷವು ರೂಪಿಸಿ ಪ್ರಸರಿಸುತ್ತಿರುವ ಸಮಾಜವಾದದ ಪರಿಕಲ್ಪನೆಯಲ್ಲಿ ನನಗೆ ಅಷ್ಟಾಗಿ ನಂಬಿಕೆ ಇಲ್ಲವೆಂದೇ ಹೇಳಬಹುದು.

ಈ ನಿರ್ಭಯತೆ, ಆತ್ಮಬಲ, ಛಲ ಮತ್ತು ಕೆಚ್ಚನ್ನು ನನ್ನಿಂದ ಯಾರೂ ಕಸಿದುಕೊಳ್ಳಲು ಸಾಧ್ಯವಿಲ್ಲ. ನಾನೊಬ್ಬ ಅಪ್ಪಟ ಸಮಾಜವಾದಿಯಾಗಿದ್ದೇನೆಂದು ನನ್ನ ಮರಣದ ನಂತರ ಅರಿಯುತ್ತೀರಿ. ನಾನು ಟ್ರಸ್ಟೀಷಿಪ್ ಬಗ್ಗೆ ಮಾತನಾಡಿದಾಗಲೆಲ್ಲ ಅದು ನನ್ನ ಹುಚ್ಚುತನ ಎಂದು ಜನರು ತಿಳಿಯುತ್ತಿದ್ದಾರೆ. ಆದರೆ ಈ ಹುಚ್ಚುತನದಲ್ಲೂ ಒಂದಷ್ಟು ಸತ್ಯ ಇದೆ ಎಂದು ತಿಳಿಯಿರಿ. ಸ್ವಲ್ಪ ಆಳವಾಗಿ ಆಲೋಚಿಸಿದರೆ ಅದರ ಅರ್ಥ ನಿಮಗೂ ಹೊಳೆಯುತ್ತದೆ. ಇಂದು ಈ ಎಲ್ಲಾ ಜನರ ಮಧ್ಯೆ ಯಾರಾದರೂ ಒಬ್ಬ ಅಪ್ಪಟ ಸಮಾಜವಾದಿ ಎಂಬುವವನಿದ್ದರೆ ಅದು ನಾನೇ ಎಂದು ಅತ್ಯಂತ ಖಚಿತವಾಗಿ ಹೇಳಿಕೊಳ್ಳಬಲ್ಲೆ.

ಸಮಾಜವಾದ ಪರಿಕಲ್ಪನೆಯ ಬಗೆಗಿನ ನನ್ನ ಈ ನಿಷ್ಠೆ ಮತ್ತು ತಿಳುವಳಿಕೆಯೇ ಈಗ ನಾನೇನು ಹೇಳುತ್ತಿದ್ದೇನೆಯೋ ಅದನ್ನು ಹೇಳಲು ಅರ್ಹತೆಯನ್ನೂ, ಹಕ್ಕನ್ನೂ ಕೊಟ್ಟಿದೆ ಎಂದು ತಿಳಿದಿದ್ದೇನೆ. ಒಬ್ಬ ಸಮಾಜ ಸೇವಕನ ಸಾರ್ವಜನಿಕ ಜೀವನ ಮತ್ತು ವೈಯಕ್ತಿಕ ಜೀವನ ಪರಸ್ಪರ ಬೆಸೆದುಗೊಂಡಿರುತ್ತದೆ. ವೈಯಕ್ತಿಕ ನೈತಿಕ ಪರಿಶುದ್ಧತೆ ಇಲ್ಲದೆ ಸಮಾಜವಾದ ಯಶಸ್ವಿಯಾಗಲು ಸಾಧ್ಯವಿಲ್ಲ.

ಸಮಾಜವಾದವೆಂಬುದು ಮಹಾಭಾರತದ ಕೃಷ್ಣನ ಕಾಲದಿಂದಲೂ ರೂಢಿಯಲ್ಲಿದೆ ಎಂದೇ ಹೇಳಬಹುದು. ಅವನು ಗೋಪಾಲಕರೊಡನೆ ಆಟವಾಡುತ್ತಿದ್ದ... ಅವರ ಜೊತೆಯಲ್ಲಿ ಊಟ ಮಾಡುತ್ತಿದ್ದ, ಮಲಗುತ್ತಿದ್ದ. ಸುಧಾಮನ ಜೊತೆಯಾಗಿ ಕಟ್ಟಿಗೆಯನ್ನು ತಂದ. ಇಂತಹ ಅನೇಕ ನಿದರ್ಶನಗಳು ಇವೆ. ಅವನು ಅರ್ಜುನನಿಗೆ ಸಾರಥಿಯೂ ಆಗಿ ಕೆಲಸವನ್ನು ನಿರ್ವಹಿಸಿ ಇಲ್ಲಿ ಯಾರೂ ಮೇಲೂ ಅಲ್ಲ ಕೀಳೂ ಅಲ್ಲ ಎಂಬ ಮೌಲ್ಯವನ್ನು ಪರಿಪಾಲಿಸಿದ. ತನ್ನ ಅಪ್ಪಟ ಪ್ರೇಮದಿಂದ ಗೋಪಿಕೆಯರೊಡನೆ ಯಾವುದೇ ಕಲ್ಮಶ ಭಾವವಿಲ್ಲದೆ ಒಡನಾಡಿದ.

ಹಾಗಾಗಿ, ತಾವು ಯಾವ ಸಮಾಜವಾದವೆಂಬುದು ರಶಿಯಾ ಅಥವಾ ಅಮೇರಿಕಾ ಅಥವಾ ಇಂಗ್ಲೆಂಡ್ ನವರಿಂದ ಕಲಿಯಬೇಕೆಂದು ಯೋಚಿಸುತ್ತೀರೋ ಅದು ನಮ್ಮ ಭೂಮಿಯಲ್ಲೇ ಸಾವಿರಾರು ವರ್ಷಗಳಿಂದ ನಡೆದುಕೊಂಡು ಬಂದಿದೆ. ಜಯಪ್ರಕಾಶ್ ನಾರಾಯಣ ನನ್ನ ಸ್ವಂತ ಮಗನಿದ್ದ ಹಾಗೆ ಹಾಗು ಇತರ ಅನೇಕ ಸಮಾಜವಾದಿ ಪಕ್ಷದ ನಾಯಕರು ನನಗೆ ಸ್ನೇಹಿತರೆ. ನನ್ನ ನಮ್ರ ಕೋರಿಕೆ ಏನೆಂದರೆ ನಾನು

ನಿರೂಪಿಸಿದ ರೀತಿಯ ಸಮಾಜವಾದವನ್ನು ತಮ್ಮ ಕಾರ್ಯಕ್ರಮದಲ್ಲಿ ಅಳವಡಿಸಿಕೊಂಡರೆ ಇಡೀ ದೇಶದ ಜನರು ತಮ್ಮ ಬೆಂಬಲಕ್ಕೆ ನಿಲ್ಲುತ್ತಾರೆ. ಪಶ್ಚಿಮದಿಂದ ಆಮದು ಮಾಡಿಕೊಂಡು ಜಾರಿಗೊಳಿಸಬೇಕೆಂದಿರುವ ನಿಮ್ಮ ಸಮಾಜವಾದದ ಪರಿಕಲ್ಪನೆಯನ್ನು ನಾನು ಒಪ್ಪುವುದಿಲ್ಲ ಎಂದು ಹೇಳಲು ವಿಷಾದಿಸುತ್ತೇನೆ. ಏಕೆಂದರೆ ಯಾರು ಅದನ್ನು ಪ್ರತಿಪಾದಿಸುತ್ತಿದ್ದಾರೋ ಅವರೇ ತಮ್ಮ ಜೀವಮಾನದಲ್ಲಿ ತಾವು ಹೇಳುವ ಮೌಲ್ಯಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳುವುದಿಲ್ಲವೆಂಬುದು ನನಗೆ ಚೆನ್ನಾಗಿ ಗೊತ್ತಿದೆ. ಅವರ ಸಿದ್ಧಾಂತಕ್ಕೂ ಆಚರಣೆಗೂ ಸಾಕಷ್ಟು ಅಂತರವಿದೆ. ತತ್ವಗಳನ್ನು ಕೇವಲ ಬೋಧಿಸಿದರೆ ಯಾವ ಬದಲಾವಣೆಯೂ ಸಾಧ್ಯವಿಲ್ಲ. ರಾಮಾಯಣದ ಶ್ರೀರಾಮ ೧೪ ವರ್ಷದ ವನವಾಸವನ್ನು ಸಂಪೂರ್ಣ ಪಾಲಿಸಿ ರಾಜ್ಯಕ್ಕೆ ಹಿಂದಿರುಗಿದ. ಇಂದು ನಾವು ಅವನನ್ನು ಆದರದಿಂದ ಪೂಜಿಸುತ್ತೇವೆ. ಒಂದೊಮ್ಮೆ ಅವನು ವನವಾಸಕ್ಕೆ ಹೊರಡುವ ಬದ್ಧತೆಯನ್ನು ತೋರಿಸದೆ ಕೇವಲ ಮಾತಿನಲ್ಲೇ ಮಗನಾದವನು ತಂದೆಯ ಆಜ್ಞಾನುಧಾರಕನಾಗಿರಬೇಕು ಎಂದು ಬೋಧಿಸಿಕೊಂಡಿದ್ದುಬಿಟ್ಟಿದ್ದರೆ ಅವನನ್ನು ಈಗ ಯಾರು ನೆನೆಸಿಕೊಳ್ಳುತ್ತಿದ್ದರು?

ಇಂದಿನ ಈ ಸಮಾಜದಲ್ಲಿ ಎಲ್ಲೆಲ್ಲಿಯೂ ಕೊಲೆ-ಸುಲಿಗೆ,ಲೋಟಿ, ಬಲಾತ್ಕಾರದಂತ ಕೆಡಕುಗಳೇ ತಾಂಡವವಾಡುತ್ತಿದೆ. ನನ್ನ ಮಾತು ಯಾರಿಗೂ ಕೇಳಿಸುತ್ತಿಲ್ಲ. ನಾನೊಬ್ಬ ಹುಚ್ಚನೆಂದು ತಿಳಿಯುತ್ತಿದ್ದೀರಿ. ಒಂದು ಏಟಿಗೆ ಎರಡನ್ನು ತಿರುಗಿಸಿ ಕೊಡುವಂತೆ ನಾನು ಬೋಧಿಸಬೇಕೆಂದು ನಿರೀಕ್ಷಿಸುತ್ತಿದ್ದೀರಿ. ನಾನು ಹಾಗೆ ಮಾಡಲು ಸಾಧ್ಯವೇ ಇಲ್ಲ. ಆದರೆ ಇಷ್ಟನ್ನು ಮಾತ್ರ ಹೇಳಬಲ್ಲೆ, "ಗೆಳೆಯ, ನನ್ನನ್ನು ಕೊಲ್ಲುವುದಾದರೆ ಹಾಗೇ ಮಾಡು. ಆದರೆ ನಾನು ಮಾತ್ರ ಯಾರನ್ನು ಹಿಂಸಿಸುವುದಿಲ್ಲ" ಹಾಗೂ ಕೊನೆಯವರೆಗೂ ಇದೇ ರೀತಿಯ ಧೈರ್ಯವಂತಿಕೆಯನ್ನು ನನ್ನಲ್ಲಿ ತುಂಬಿರು ಎಂದು ಆ ದೇವರಲ್ಲಿ ಪ್ರಾರ್ಥಿಸಬಹುದು. ಯಾರು ಇಂಥ ನಿರ್ಭಯತೆಯನ್ನು ರೂಢಿಸಿ ಕೊಂಡಿರುತ್ತಾರೋ ಅವರನ್ನು ಮಣಿಸಲು ಯಾರಿಂದಲೂ ಸಾಧ್ಯವಿಲ್ಲ.

ಸಮಾಜವಾದ ಎಂಬುದು ಒಂದು ಸುಂದರವಾದ ಪರಿಕಲ್ಪನೆ ಮತ್ತು ನನಗೆ ತಿಳಿದ ಹಾಗೆ ಈ ವ್ಯವಸ್ಥೆಯಲ್ಲಿ ಮೇಲು - ಕೀಳು ಎಂಬ ಯಾವ ಭೇದ ಭಾವವಿಲ್ಲದೆ ಎಲ್ಲಾ ಜನರ ನಡುವೆಯ ಸಮಾನತೆಯೇ ಮೂಲ ಆಶಯ ಮತ್ತು ಮಂತ್ರವಾಗಿದೆ. ಹೇಗೆ ಒಂದು ದೇಹದಲ್ಲಿ ತಲೆಯ ಭಾಗವು ಎತ್ತರದಲ್ಲಿದ್ದ ಕಾರಣಕ್ಕೆ ಅದು ಮೇಲೂ, ಪಾದವು ಅತೀ ಕೆಳಗೆ ಇದ್ದು ನೆಲವನ್ನು ಸ್ಪರ್ಶಿಸುತ್ತಿರುವುದರಿಂದಾಗಿ ಕೀಳು ಎಂದು ಪರಿಭಾವಿಸಲಿಕ್ಕೆ ಆಗುವುದಿಲ್ಲವೋ ಮತ್ತು ದೇಹದ ಪ್ರತಿಯೊಂದು ಭಾಗವೂ ಸಮಾನ ವಾಗಿ ಮುಖ್ಯ ಹೇಗೋ, ಹಾಗೆ ಒಂದು ಸಮಾಜದ ಎಲ್ಲಾ ಜನರೂ ಸಮಾನರೂ ಹಾಗು ಮುಖ್ಯರೂ ಆಗಿರುತ್ತಾರೆ. ಅದೇ ಸಮಾಜವಾದ ಎಂದು ನಾನು ತಿಳಿದಿದ್ದೇನೆ. ಈ ವ್ಯವಸ್ಥೆಯಲ್ಲಿ ಒಬ್ಬ ಅರಸನೂ-ಅಗಸನೂ, ರೈತನೂ-ಉದ್ಯಮಿಯೂ,

ಶ್ರೀಮಂತನೂ-ಬಡವನೂ, ಉದ್ಯೋಗಿಯೂ-ಯಜಮಾನನೂ, ಎಲ್ಲರೂ ಸಮಾನ ಸ್ತರದಲ್ಲಿ ಇರುತ್ತಾರೆ. ಧರ್ಮದ ವಿಷಯಕ್ಕೆ ಬಂದರೆ ನನ್ನ ಪರಿಕಲ್ಪನೆಯ ಸಮಾಜವಾದ ದಲ್ಲಿ ದ್ವಂದ್ವಕ್ಕೆ ಅವಕಾಶವೇ ಇಲ್ಲ. ಸಂಪೂರ್ಣ ಐಕ್ಯತೆ ನೆಲೆಗೊಂಡಿರುತ್ತದೆ.

ನಾವು ಪ್ರತಿಪಾದಿಸುತ್ತಿರುವ ಆದರ್ಶಗಳನ್ನು ನಮ್ಮ ವೈಯಕ್ತಿಕ ಬದುಕಿನಲ್ಲಿ ಮೊದಲಿಗೆ ಆಚರಣೆಗೆ ತರದೆ ವ್ಯವಸ್ಥೆಯಲ್ಲಿ ಬದಲಾವಣೆ ತರಲು ಆಶಿಸುತ್ತಾ, ಹದ್ದು ಗಳು ತನ್ನ ಬೇಟೆಯನ್ನು ಹಿಡಿಯಲು ಕಾಯುತ್ತಾ ಕುಳಿತ ಹಾಗೆ, ಅಧಿಕಾರದ ಅವಕಾಶವನ್ನು ನಿರೀಕ್ಷಿಸುತ್ತಲಿದ್ದರೆ ಯಾವ ಮೂಲಭೂತ ಬದಲಾವಣೆಯನ್ನು ತರಲು ಸಾಧ್ಯವಿಲ್ಲ. ಹೀಗೆ ನಮ್ಮ ದಾರಿಯಲ್ಲಿ ಬರುವ ಅವಕಾಶಕ್ಕಾಗಿ ಕಾಯುತ್ತ ಕುಳಿತಿರುವ ಧೋರಣೆಯನ್ನು ನಾನು ಸಮಾಜವಾದ ಎಂದು ಖಂಡಿತಾ ಹೇಳುವುದಿಲ್ಲ. ಸಮಾಜವಾದವೆಂಬುದನ್ನು ನಾವು ವಶಪಡಿಸಿಕೊಳ್ಳಬೇಕಾಗಿರುವ ಒಂದು ರಾಜ್ಯಾಧಿಕಾರದ ಆಟವೆಂದು ಬಗೆದಷ್ಟೂ ಈ ಉದಾತ್ತ ಪರಿಕಲ್ಪನೆಯ ಆದರ್ಶಗಳು ಕಣ್ಮರೆಯಾಗುತ್ತಾ ಹೋಗುತ್ತವೆ.

ತಮ್ಮ ಬದುಕಿನಲ್ಲಿ ಅಗತ್ಯ ಪರಿವರ್ತನೆಯನ್ನು ಯಾರು ಮೊದಲು ತಂದುಕೊಳ್ಳು ತ್ತಾರೋ ಅವರಿಂದಲೇ ಸಮಾಜವಾದ ಪ್ರಾರಂಭವಾಗುತ್ತದೆ. ಅಂತಃ ಒಬ್ಬನು ಹತ್ತು, ನೂರು, ಸಾವಿರ ಜನರಲ್ಲಿ ಪ್ರಭಾವ ಬೀರುತ್ತಾ ಹೋಗುತ್ತಾನೆ. ಆದರೆ ತಮ್ಮ ಬದುಕಿ ನಲ್ಲಿ ಯಾವ ಮಾರ್ಪಾಟುಗಳನ್ನೂ ತಂದುಕೊಳ್ಳದೆ ಕೇವಲ ಆದರ್ಶ ಹೇಳಿಕೊಂಡಿದ್ದರೆ ಫಲಿತಾಂಶವು/ಸಾಧನೆಯು ಶೂನ್ಯಮಯವಾಗಿರುತ್ತದೆ. ನಮ್ಮೆಲ್ಲಾ ಬುದ್ಧಿ, ಶಕ್ತಿ ಮತ್ತು ಸಮಯದ ಅಪವ್ಯಯವಾಗಿರುತ್ತದೆ ಅಷ್ಟೇ. ಈ ಸಮಾಜವಾದವೆಂಬುದು ಸ್ಫಟಿಕದಷ್ಟೇ ಪರಿಶುದ್ಧವಾಗಿರುವಂಥ ಆದರ್ಶ ವ್ಯವಸ್ಥೆ. ಹಾಗಾಗಿ ಅದನ್ನು ಸಾಧಿಸಲು ಅಷ್ಟೇ ಪರಿಶುದ್ಧ ಮಾರ್ಗವೂ ಬಹಳ ಮುಖ್ಯ ಎಂದು ನಾವು ಮನಗಾಣಬೇಕು.

ಗುರಿಯನ್ನು ಸಾಧಿಸುವುದಕ್ಕಿಂತ ಮಾರ್ಗದ ಪರಿಶುದ್ಧತೆ ಬಹಳ ಮುಖ್ಯ. ತಪ್ಪು ಮಾರ್ಗಗಳು ತಪ್ಪು ಗುರಿಗಳೆಡೆಗೆ ಕೊಂಡೊಯ್ಯುತ್ತವೆ. ಆದ್ದರಿಂದ ಒಬ್ಬ ರಾಜಕುಮಾರನ ಅಥವಾ ಒಬ್ಬ ಉದ್ಯೋಗದಾತನ ತಲೆ ತೆಗೆಯುವುದರಿಂದ ಅವರ ಮತ್ತು ರೈತರ ಅಥವಾ ಕಾರ್ಮಿಕರ ನಡುವೆ ಸಮಾನತೆಯನ್ನು ಸ್ಥಾಪಿಸಿದಂತಾಗುವುದಿಲ್ಲ. ಸತ್ಯವನ್ನು ಅಸತ್ಯದ ನಡೆಗಳಿಂದ ತಲುಪಲಾಗುವುದಿಲ್ಲ. ಅಹಿಂಸೆ ಮತ್ತು ಸತ್ಯ ಬೇರ್ಪಡಿಸಲಾಗದಂತೆ ಒಂದರೊಳಗೊಂದು ಮಿಳಿತಗೊಂಡಿರುವಂತದ್ದು. ಹಾಗಾಗಿಯೇ ಅವು ಒಂದೇ ನಾಣ್ಯದ ಎರಡು ಮುಖಗಳು ಆ ನಾಣ್ಯದ ಯಾವುದೇ ಬದಿಯನ್ನು ಓದಿ. ಪದ ಮತ್ತು ಅಕ್ಷರಗಳು ಮಾತ್ರ ಬೇರೆಯಾಗಿರುತ್ತದೆ. ಆದರೆ ಬೆಲೆ ಮಾತ್ರ ಒಂದೇ. ಇಂತಹ ಆಳವಾದ ಒಳನೋಟವನ್ನು ಮತ್ತು ಅನುಗ್ರಹೀತ ಭಾವವನ್ನು ಹೊಂದಲು ಸಂಪೂರ್ಣ ವೈಯಕ್ತಿಕ ಪರಿಶುದ್ಧತೆಯಿಂದ ಮಾತ್ರ ಸಾಧ್ಯ. ನಮ್ಮ ದೇಹ ಮತ್ತು ಮನಸ್ಸಿನಲ್ಲಿ ಮಲಿನತೆಯನ್ನು /ಕಲ್ಮಶವನ್ನು ತುಂಬಿಕೊಂಡರೆ ಸಹಜ ಪರಿಣಾಮದಂತೆ

ಹಿಂಸೆ ಮತ್ತು ಅಸತ್ಯಗಳು ಹೊರ ಹೊಮ್ಮುತ್ತವೆ. ಆದುದರಿಂದ ಕೇವಲ ಸತ್ಯವಂತಿಕೆಯ, ಅಹಿಂಸಾತ್ಮಕ ಮತ್ತು ಪರಿಶುದ್ಧ ಹೃದಯವಂತಿಕೆಯುಳ್ಳ ಸಮಾಜವಾದಿಗಳಿಂದ ಮಾತ್ರ ಸಮತೆಯ ಸಮಾಜವನ್ನು ಸ್ಥಾಪಿಸಲು ಸಾಧ್ಯ. ನನಗೆ ತಿಳಿದ ಹಾಗೆ ಜಗತ್ತಿನಲ್ಲಿ ಈಗ ಎಲ್ಲಿಯೂ ನಿಜವಾದ ಅರ್ಥದ ಸಮಾಜವಾದಿ ಎನಿಸಿಕೊಳ್ಳುವ ಸಮಾಜ ಇಲ್ಲ. ನಾನು ಮೇಲೆ ವಿವರಿಸಿದ ಮಾರ್ಗವನ್ನು ಹೊರತುಪಡಿಸಿ ಅಂತಹ ಸಮಾಜವನ್ನು ಅಸ್ತಿತ್ವಕ್ಕೆ ತರಲು ಸಾಧ್ಯವೇ ಇಲ್ಲ.

ಪಾಶ್ಚಿಮಾತ್ಯ ದೇಶಗಳಲ್ಲಿ ಪರಿಕಲ್ಪಿಸಿಕೊಂಡ ಸಮಾಜವಾದದ ಮಾದರಿಯು ನಮ್ಮ ದೇಶದ ಸಂಸ್ಕೃತಿಗೆ ಸರಿಹೊಂದುವುದಿಲ್ಲ. ಹಾಗೆ ಹೊಂದುವುದಿಲ್ಲವೆಂದರೆ ಅದು ದೋಷಯುಕ್ತವೇ ಆಗಿದ್ದು ನಾನು ಈಗಾಗಲೇ ವಿವರಿಸಿದ ಮಾದರಿಯು ಅತ್ಯಂತ ಜೀವಂತಿಕೆಯ ಮತ್ತು ನಿಜವಾದ ಸಮಾಜವಾದವಾಗಿದೆ. ಮತ್ತು ಅದು ನಿಸ್ಸಂದೇಹವಾಗಿ ವರ್ಗ ಸಂಘರ್ಷವನ್ನು ಆಧರಿಸಿರದ ಒಂದು ಆರ್ಥಿಕ ನೀತಿಯೂ ಆಗಿದೆ.

(ಕೃಪೆ: ಕಲೆಕ್ಟೆಡ್ ವರ್ಕ್ಸ್ ಆಫ್ ಮಹಾತ್ಮ ಗಾಂಧಿ)

(ಕನ್ನಡಕ್ಕೆ: ಬಿ.ವಿ.ಸುರೇಂದ್ರ)

◆◆

ಅನುಬಂಧ: ೨

ಒಳ್ಳೆಯತನಕ್ಕೆ ಸ್ಫೂರ್ತಿ ಎಲ್ಲಿಂದ?

ಜಯಪ್ರಕಾಶ್ ನಾರಾಯಣ

(ಸಮಾಜವಾದಿ ಪಕ್ಷದ ಪ್ರಮುಖ ಸಂಸ್ಥಾಪಕರಲ್ಲೊಬ್ಬರೂ, ಪ್ರಖರ ಮಾರ್ಕ್ಸ್‌ವಾದಿಯೂ ಆಗಿದ್ದ ಜೆಪಿ ಎಂದೇ ಪ್ರಸಿದ್ಧರಾಗಿರುವ ಸ್ವಾತಂತ್ರ್ಯ ಹೋರಾಟಗಾರ ಜಯಪ್ರಕಾಶ್ ನಾರಾಯಣರು ಗಾಂಧಿ ನಿಧನದ ನಂತರದ ಕಾಂಗ್ರೆಸ್ ರಾಜಕಾರಣದ ಅಸತ್ಯದ ಮಾರ್ಗದಿಂದಲೂ, ೧೯೫೦ರ ರಾಷ್ಟ್ರದ ಮೊದಲ ಸಾರ್ವತ್ರಿಕ ಚುನಾವಣೆಗಳಲ್ಲಿ ತಮ್ಮ ಸಮಾಜವಾದಿಗಳು ಎದುರಿಸಿದ ಭಾರಿ ಸೋಲಿನ ನಂತರ ಅವರ ಪಕ್ಷದಲ್ಲಿ ಉಂಟಾದ ಕ್ಷೋಭೆಯಿಂದಲೂ ತಾವು ಹಿಡಿದಿದ್ದ ರಾಜಕೀಯ ಮಾರ್ಗದ ಬಗ್ಗೆ ಪುನರಾಲೋಚನೆ ಆರಂಭಿಸಿದರು. ಇದಕ್ಕಾಗಿ ಅವರು ೧೯೫೨ರ ಸೆಪ್ಟಂಬರ್‌ನಲ್ಲಿ ನೈಸರ್ಗಿಕ ಚಿಕಿತ್ಸಾ ಕೇಂದ್ರವೊದರಲ್ಲಿ ಏಳು ವಾರಗಳ ಉಪವಾಸ ಕೈಗೊಂಡರು. ಈ ಸಂದರ್ಭದಲ್ಲಿ ಅವರ ಮನಸ್ಸನ್ನು ಆವರಿಸಿದ ಚಿಂತನೆಗಳನ್ನು ಅವರು 'Incentives for Goodness' ಎಂಬ ಶೀರ್ಷಿಕೆಯಲ್ಲಿ ಒಂದು ಲೇಖನವಾಗಿ ಬರೆದು ತಮ್ಮ ಗೆಳೆಯ ಮಿನೂ ಮಸಾನಿಯವರು ಸಂಪಾದಿಸುತ್ತಿದ್ದ ಫ್ರೀಡಂ ಫಸ್ಟ್' ಮಾಸ ಪತ್ರಿಕೆಯಲ್ಲಿ ಪ್ರಕಟಿಸಿದರು.

ಈ ಲೇಖನ ಜೆಪಿಯವರ ಸಾರ್ವಜನಿಕ ಜೀವನದ ನಿರ್ಣಾಯಕ ತಿರುವೊಂದನ್ನು ನಿರೂಪಿಸುವುದಲ್ಲದೆ, ಭಾರತದ ಸಮಾಜವಾದಿ ಚಿಂತನೆ ಜೆಪಿಯವರ ತಾತ್ವಿಕ ನೇತೃತ್ವದಲ್ಲಿ ಆವರೆಗೆ ನಂಬಿದ್ದ ದ್ವಂದ್ವಮಾನ ಭೌತವಾದದ ಹೆಸರಿನ ಮಾರ್ಕ್ಸವಾದದ ಬಗ್ಗೆ ನಡೆಸಿದ ಮುಖ್ಯ ವಿಮರ್ಶೆಯಾಗಿಯೂ ಗಮನ ಸೆಳೆಯುತ್ತದೆ. ಈ ನಂತರದ ದಿನಗಳಲ್ಲಿ ಜೆಪಿ ಪಕ್ಷ ರಾಜಕಾರಣವನ್ನೇ ತೊರೆದು ಗಾಂಧಿ ಮಾರ್ಗದ ಅನ್ವೇಷಕರಾಗಿ 'ಸರ್ವೋದಯ' ಚಳುವಳಿಯಲ್ಲಿ ಸಕ್ರಿಯರಾದರು.)

ನಮ್ಮ ಹಿಂದಿನ ದಿನಗಳಲ್ಲಿ ಸಮಾಜದಲ್ಲಿನ ಜನಸಮುದಾಯಗಳು ಉನ್ನತವಾದ ನೈತಿಕತೆಯ ಬಾಳುವೆಯಲ್ಲಿ ನಂಬಿಕೆ ಇಟ್ಟು ಒಟ್ಟಾರೆಯಾಗಿ ಒಳ್ಳೆಯತನದ ಬಾಳನ್ನು ಬದುಕಲು ಪ್ರಯತ್ನಿಸುತ್ತಿದ್ದವು. ಒಳ್ಳೆಯವರಾಗಿ ಬಾಳುವುದೆಂದರೆ ಅಥವಾ ಒಳ್ಳೆಯತನದ

ಅಂಶಗಳೆಂದರೆ ಅವರಿಗೆ ಸತ್ಯವಂತಿಕೆ, ಪ್ರಾಮಾಣಿಕತೆ, ದಯೆ, ಕರುಣೆ, ನಿಸ್ವಾರ್ಥತೆ, ವಚನಬದ್ಧತೆ, ವೈಯಕ್ತಿಕ ಪರಿಶುದ್ಧತೆ ಇವುಗಳೇ ಆಗಿದ್ದವು. ಹಾಗೂ ಈ ಒಳ್ಳೆಯತನದ ಅಂಶಗಳು ಸಮಾಜದ ಆರೋಗ್ಯಪೂರ್ಣ ಚಲನೆಗೆ ಮತ್ತು ವೈಯಕ್ತಿಕ ಸಂತೋಷ, ಆನಂದ, ನೆಮ್ಮದಿಗೆ ದಾರಿ ಮಾಡಿಕೊಡುತ್ತದೆ ಎಂದು ನಂಬಿದ್ದರು ಮತ್ತು ಜನರು ಪ್ರಧಾನವಾಗಿ ಒಳ್ಳೆಯವರಾಗಿ ಬದುಕಲು ಪ್ರಯತ್ನಿಸುತ್ತಿದ್ದರು. ಈ ರೀತಿ ಒಳ್ಳೆಯವರಾಗಿ ಬದುಕು ಸಾಗಿಸಲು ಸಂಪೂರ್ಣವಾಗಿ ಯಶಸ್ವಿಯಾದರೋ ಇಲ್ಲವೋ ಎನ್ನುವುದು ಬೇರೆ ಪ್ರಶ್ನೆ. ಆದರೆ ಮುಖ್ಯ ವಿಷಯವೇನೆಂದರೆ ಅಂದಿನ ಸಮಾಜವು ಜನರು ವೈಯಕ್ತಿಕವಾಗಿ ಪರಿಶುದ್ಧವಾಗಿರಲು, ಒಳ್ಳೆಯವರಾಗಿರಲು ಸಾಕಷ್ಟು ಪ್ರೇರಣೆಯನ್ನು ಒದಗಿಸುತ್ತಿತ್ತು. ಅದು ದೇವರು ಮತ್ತು ಧರ್ಮದ ಸಾರವಾಗಿತ್ತು. ವ್ಯಕ್ತಿಯ ಉನ್ನತ ಆಧ್ಯಾತ್ಮಿಕ ಬೆಳವಣಿಗೆಗೆ, ಆತ್ಮ ಸಾಕ್ಷಾತ್ಕಾರಕ್ಕೆ, ಬದುಕಲ್ಲಿ ಶಾಂತಿ, ಸಮಾಧಾನ, ನೆಮ್ಮದಿಗಾಗಿ ಸನ್ನಡತೆಯು ಅಗತ್ಯವಾಗಿತ್ತು. ಮೋಕ್ಷ ಮತ್ತು ಹುಟ್ಟು–ಸಾವಿನ ಚಕ್ರದಿಂದ ಬಿಡುಗಡೆ ಪಡೆಯಲು ಉತ್ತಮ ನಡತೆಯು ಮುಖ್ಯ ಎಂದು ತಿಳಿಯಲಾಗಿತ್ತು.

ಆದರೆ ಇಂದಿನ ಸಮಾಜದಲ್ಲಿ; ಧರ್ಮದ ಮೇಲಿನ ಹಿಡಿತ ಸಡಿಲಗೊಂಡು, ದೇವರ ಮೇಲಿನ ನಂಬಿಕೆ ಅಪವಿತ್ರಗೊಂಡು, ಸಮಾಜವನ್ನು ಆರೋಗ್ಯಪೂರ್ಣವಾಗಿ ಕಾಪಾಡಿಕೊಂಡು ಬಂದಂಥ ನೈತಿಕ ಮೌಲ್ಯಗಳೆಲ್ಲ ನಮ್ಮ ಇತಿಹಾಸದ ಕಪ್ಪು ಯುಗದ ಹೆಣಭಾರದ ಆಚರಣೆಗಳು ಎಂದು ಬಿಸಾಡಿಬಿಟ್ಟಿರುವ ಸಂದರ್ಭದಲ್ಲಿ–ಚುಟುಕಾಗಿ ಹೇಳಬೇಕೆಂದರೆ, ಜನರ ಹೃದಯದಲ್ಲಿ ಭೌತವಾದಿ ವಸ್ತುವಾದದ ಚಿಂತನೆಯೇ ತುಂಬಿರಲು, ಮನುಷ್ಯನಿಗೆ ತಾನು ಒಳ್ಳೆಯವನಾಗಿರಲು ಏನಾದರೂ ಪ್ರೇರಣೆಗಳು ಉಳಿದಿವೆಯೇ? ಅಥವಾ ಇಂದಿನ ಸಮಾಜದ ವಿದ್ಯಮಾನಗಳು, ಆದರ್ಶಗಳಿಗೆ, ಸಮಸ್ಯೆಗಳಿಗೆ ವ್ಯಕ್ತಿ ಒಳ್ಳೆಯವನಾಗಿರಬೇಕಾದ ಪ್ರಶ್ನೆಯೇ ಅಪ್ರಸ್ತುತವೆ?

ನಾನು ಈಗ ಬಲವಾಗಿ ನಂಬಿರುವುದೆಂದರೆ ಇಂದಿನ ದಿನಗಳಲ್ಲಿ ಇದಕ್ಕಿಂತ ಹೆಚ್ಚು ಪ್ರಸ್ತುತವಾದ ಪ್ರಶ್ನೆ ಬೇರೊಂದಿಲ್ಲ. ಇರಲಿ, ಇಂದಿನ ಸಮಾಜದಲ್ಲಿ ಜನರು ಪ್ರಧಾನವಾಗಿ ಭೌತವಾದಿ ವಸ್ತುಪ್ರಪಂಚದ ಅನುಭೋಗದಲ್ಲಿರುವ ವಾತಾವರಣ ವಿದ್ದಾಗ್ಯೂ ಜನರು ತಮ್ಮದೇ ಆದ ರೀತಿಯಲ್ಲಿ ಈ ಸಮಾಜವನ್ನು ಪುನರ್ನಿರ್ಮಾಣ ಮಾಡಲು, ನವೀಕರಿಸಲು ಮತ್ತು ಭೂಮಿಯನ್ನು ಸ್ವರ್ಗ ಸದೃಶ್ಯವನ್ನಾಗಿ ಮಾಡುವ ಪ್ರಯತ್ನದಲ್ಲಿ ಇದ್ದಾನೆ ಎನ್ನಬಹುದು. ಈ ಪ್ರಯತ್ನಗಳಲ್ಲಿ, ಅದರಲ್ಲೂ ಬಹಳ ಆದರ್ಶವಾದಿ ಮತ್ತು ಮಹತ್ವಾಕಾಂಕ್ಷೆಯುಳ್ಳದ್ದು ಎನ್ನಬಹುದಾದ ಸಮಾಜವಾದ/ಕಮ್ಯುನಿಸಂ–ಅದರ ಮೂಲ ಪರಿಕಲ್ಪನೆಯಲ್ಲೂ ಕೂಡ –ಪರಿಣಾಮದಲ್ಲಿ ಮನುಷ್ಯನ ಚ್ಯಾರಿತ್ರ್ಯಹೀನತೆ ಎಂಬ ಮಿಸುಕಾಡದ ಬಂಡೆಗೆ ಬಡಿದು ಚೂರಾದ ಹಡಗಿನ ರೀತಿ ಆಯಿತು ಎನಿಸುತ್ತದೆ. ಹಾಗಾಗಿ ಈಗ ಮನುಷ್ಯ ತಾನು ವೈಯಕ್ತಿಕವಾಗಿ ಪುನರ್ ನಿರ್ಮಾಣಗೊಳ್ಳದ(ಚ್ಯಾರಿತ್ರ್ಯ ಮತ್ತು ನೈತಿಕತೆಯ ನೆಲೆಯಲ್ಲಿ) ಸಮಾಜದ ಪುನರ್

ನಿರ್ಮಾಣ ಅಸಾಧ್ಯವೆಂಬುದು ಎಂದಿಗಿಂತ ಇಂದು ಸುಸ್ಪಷ್ಟವಾಗಿದೆ. ಮನುಷ್ಯ ವೈಯಕ್ತಿಕವಾಗಿ ಒಳ್ಳೆಯವನಾಗಿರದ ಹೊರತು ಸಮಾಜ ಒಳ್ಳೆಯದಾಗಿರಲು ಸಾಧ್ಯವಿಲ್ಲ. ಅದರಲ್ಲೂ ನಿರ್ದಿಷ್ಟವಾಗಿ ಸಮಾಜದ ಯಾವ ಗಣ್ಯ ಜನವರ್ಗ ಎಂಬುದಿದೆಯೋ ಅವರಿಗೆ ಈ ಮಾತು ಹೆಚ್ಚು ಅನ್ವಯಿಸುತ್ತದೆ. ಆಧುನಿಕ ಸಮಾಜದ ಸಮಸ್ಯೆಗಳ ಮೂಲ ಹಾಗಾದರೆ ಇಲ್ಲಿ ಅಡಗಿದೆ ಎನಿಸುತ್ತದೆ. ಹೇಗೆಂದರೆ ಮನುಷ್ಯ ಒಂದು ಯುಟೋಪಿಯನ್ ಆದರ್ಶವಾದಿ ನೆಲೆಯಲ್ಲಲ್ಲದಿದ್ದರೂ ಕನಿಷ್ಠ ಒಂದು ಒಳ್ಳೆಯ ಸಮಾಜದ ನಿರ್ಮಾಣಕ್ಕಾಗಿ ಯಾವಾಗಲೂ ಆಶಿಸುತ್ತಿರುತ್ತಾನೆ. ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನ ಈ ಕೆಲಸವನ್ನು ಎಂದಿಗಿಂತ ಇಂದು ಹಗುರ ಮಾಡಿದೆ ಎಂದು ಹೇಳಬಹುದು. ಆದರೆ ಈ ಪ್ರಯತ್ನದಲ್ಲಿ ಮನುಷ್ಯ ತನ್ನನ್ನು ವ್ಯಕ್ತಿಯ ಮೂಲ ನೆಲೆಯಲ್ಲಿ ತಾನು ನಿರ್ಮಾಣಗೊಳ್ಳುವ ಪರಿಕಲ್ಪನೆಯನ್ನೇ ಹಾಗೂ ಇದನ್ನು ಸಾಧ್ಯಗೊಳಿಸುವ ಉಪಕರಣಗಳನ್ನೇ ಮರೆತುಬಿಟ್ಟಿದ್ದಾನೆ. ಹಾಗಾಗಿ ಇಂದು ಮನುಷ್ಯ ಅಧಿಕಾರಕ್ಕಾಗಿ, ಸ್ಥಾನಮಾನಗಳಿಗಾಗಿ, ಆಸ್ತಿ-ಅಂತಸ್ತುಗಳಿಗಾಗಿ, ತಣಿಯಲಾರದ ವಸ್ತುವೈಭೋಗಗಳ ಉಪಭೋಗಕ್ಕಾಗಿ ಸದಾ ಕಾದಾಡಲಾರಂಭಿಸಿದ್ದಾನೆ. ಹಾಗೂ ಇದರಿಂದ ಒಂದು ಉನ್ನತ ಮೌಲ್ಯಗಳುಳ್ಳ ಸರಳಸುಂದರತೆಯ ಪರಿಕಲ್ಪನೆಯುಳ್ಳ ನವಸಮಾಜದ ಸೌಧವನ್ನೇ ಕೆಡವಿ ಹಾಕಿದ್ದಾನೆ.

ಹಾಗಾಗಿ ಮನುಷ್ಯನ ಒಳ್ಳೆಯತನದ (ಚ್ಯಾರಿತ್ರ್ಯದ) ಅಧಃಪತನದ ಸಮಸ್ಯೆಯೇ ಇಂದು ಬಹು ಮುಖ್ಯ ಪ್ರಶ್ನೆಯಾಗಿದೆ. ಭೌತವಾದಿ ವಸ್ತುಪ್ರಪಂಚದ ವೈಭೋಗದಲ್ಲಿ ಮುಳುಗಿಹೋದ ಯಾವುದೇ ವ್ಯಕ್ತಿ ಕೇಳುತ್ತಿರುವ ಮುಖ್ಯ ಪ್ರಶ್ನೆ ಎಂದರೆ "ನಾನೇಕೆ ಒಳ್ಳೆಯವನಾಗಿರಬೇಕು? ದೇವರೆಂಬುವುದಿಲ್ಲ, ಆತ್ಮವೆಂಬುದಿಲ್ಲ, ನೈತಿಕತೆಗೆ ಆಧಾರವಿಲ್ಲ, ಈ ಜನ್ಮದ ನಂತರ ಬದುಕೆಂಬುದಿಲ್ಲ, ಹುಟ್ಟು-ಸಾವುಗಳೆಂಬ ಚಕ್ರದಲ್ಲಿ ಆತ್ಮ ಸುಳಿದಾಡುತ್ತಿರುವುದರ ಬಗ್ಗೆ ನಂಬಿಕೆ ಇಲ್ಲ. ತಾನೊಬ್ಬ ಕೇವಲ ಆಕಸ್ಮಿಕವಾಗಿ ಜೀವ ತಳೆದು ಬಂದ ಪದಾರ್ಥಗಳ ಸಂಯೋಗ ಹಾಗೂ ಮತ್ತೆ ಭೌತದ್ರವ್ಯದ ಮಹಾಸಾಗರ ದೊಳಗೆ ಕರಗಿಹೋಗುವುದಿದೆ. ತನ್ನ ಸುತ್ತಮುತ್ತಲು ಕೆಡುಕುಗಳೇ-ಭ್ರಷ್ಟಾಚಾರ, ಲಾಭಗಡುಕತನ, ಸುಳ್ಳು, ಮೋಸ, ವಂಚನೆ, ಕ್ರೌರ್ಯ, ಅಧಿಕಾರ ಲಾಲಸೆ, ಹಿಂಸೆ – ವಿಜೃಂಭಿಸುತ್ತಿದೆ. ಹಾಗಾಗಿ ತಾನೊಬ್ಬ ಏಕೆ ಸದ್ಗುಣಸಂಪನ್ನನಾಗಿರಬೇಕು?" ಎಂದು. ಇದಕ್ಕೆ ಇಂದಿನ ನಮ್ಮ ಯಾವ ಸಾಮಾಜಿಕ ಸಂಹಿತೆಗಳು ಹಾಗೂ ಪ್ರಧಾನವಾಗಿ ನೆಲೆಗೊಂಡ ಭೌತವಾದಿ ತತ್ವಮೀಮಾಂಸೆಯು ಸಮಾಜವನ್ನು ಮುನ್ನಡೆಸುತ್ತಿದೆಯೋ ಅವುಗಳ ಮೊರೆ ಹೋದರೆ ಸಿಗುವ ತಾರ್ಕಿಕ ಉತ್ತರ-ವ್ಯಕ್ತಿ ಒಳ್ಳೆಯನಾಗಿರಬೇಕಾಗಿಲ್ಲ ಎಂಬುದೇ ಆಗಿದೆ. ಈ ನಂಬಿಕೆಯಲ್ಲಿರುವ ವ್ಯಕ್ತಿ ಸಮಾಜದಲ್ಲಿ ತಾನು ಹೆಚ್ಚು ಜಾಣನಾದಷ್ಟು, ಹೆಚ್ಚು ಪ್ರತಿಭೆಯುಳ್ಳವನಾದಷ್ಟೂ ಹೆಚ್ಚು ಶಿಕ್ಷಣ ಪಡೆದಷ್ಟೂ ಹೆಚ್ಚು ಧೈರ್ಯದಿಂದ ಅನೈತಿಕ, ಭ್ರಷ್ಟ ಕ್ರಿಯೆಯಲ್ಲಿ ತೊಡಗುತ್ತಾನೆ. ಮತ್ತು ಇಂಥ ದುರ್ನಡತೆಯ

ಮೂಲಕ ಮನುಷ್ಯ ಜನಾಂಗದ ಉನ್ನತವಾದಂಥ ಕನಸುಗಳು ಮತ್ತು ಆಕಾಂಕ್ಷೆಗಳು ಮಸುಕುಗೊಳ್ಳುತ್ತದೆ ಮತ್ತು ತಿರುಚಲ್ಪಡುತ್ತದೆ.

ನಾನು ಸಾಕಷ್ಟು ವರ್ಷಗಳು "ದ್ವಂದ್ವಮಾನ ಭೌತವಾದ" ಎಂಬ ದೇವಿಯ ಗುಡಿಯಲ್ಲಿ ಪೂಜಿಸಿದ್ದೇನೆ ಹಾಗು ಈ ದೇವರು ನನಗೆ ಬೌದ್ಧಿಕವಾಗಿ ಬೇರೆ ಯಾವುದೇ ತತ್ವಚಿಂತನೆಗಿಂತಲೂ ಹೆಚ್ಚು ತೃಪ್ತಿಕರವಾಗಿಯೂ, ಸಂಪೂರ್ಣವಾಗಿಯೂ ಕಂಡಿದ್ದಿದೆ. ಆದರೆ ಕ್ರಮೇಣ ಇದರಲ್ಲಿ ತತ್ವಚಿಂತನೆಯ ಹುಡುಕಾಟ ಅತೃಪ್ತಿಕರವಾಗಿಯೇ ಉಳಿದರೂ ಈ ಭೌತವಾದಿ ಚಿಂತನೆಯು ಮನುಷ್ಯನನ್ನು ಮಾನವೀಯಗೊಳಿಸುವ ಎಲ್ಲ ಸ್ಪೂರ್ತಿಯನ್ನು ನಾಶ ಮಾಡಿಬಿಡುತ್ತದೆ ಎಂಬುದಂತೂ ಸ್ಪಷ್ಟವಾಗಿ ತಿಳಿದುಕೊಂಡಿದ್ದೇನೆ. ಭೌತವಾದಿ ತತ್ವಚಿಂತನೆಯ ಸಮಾಜದಲ್ಲಿ ಮನುಷ್ಯ ಒಳ್ಳೆಯವನಾಗಿರಲು ಯಾವುದೇ ಸಕಾರಣವಾದ ಪ್ರೇರಣೆಗಳಿರುವುದಿಲ್ಲ ಮತ್ತು ಇದರ ಸಾಮ್ರಾಜ್ಯದಲ್ಲಿ ಕಾನೂನಿನ ಭಯವೇ ನೀತಿವಂತನಾಗಿರಲು ಉತ್ತೇಜಕವಾಗಿರುತ್ತದೆ ಹಾಗು ಪಕ್ಷವೇ ದೇವರ ಸ್ಥಾನದಲ್ಲಿ ನೆಲೆಯೂರುತ್ತದೆ. ಆದರೆ ಎಂದಿಗೆ ಆ ಪಕ್ಷದೇವರೇ ದುಷ್ಟಗೊಳ್ಳುತ್ತದೊ ಆಗ ದುಷ್ಟತನವೇ ಸಾರ್ವತ್ರಿಕ ನಿಯಮವಾಗುತ್ತದೆ. ಹಾಗಾಗಿ ನನಗೆ ಈಗ ಮನದಟ್ಟಾಗಿರುವುದೇನೆಂದರೆ ಮನುಷ್ಯ ಒಳ್ಳೆಯವನಾಗಿರಬೇಕಾಗಿರುವುದಕ್ಕೆ ಒಂದು ಪ್ರೇರಣೆಯನ್ನು ಹುಡುಕಿಕೊಳ್ಳಬೇಕಾದರೆ ಅವನು ಭೌತವಾದಿ ಚಿಂತನೆಯ ನೆಲೆಯಿಂದ ಆಚೆಯೇ ಹೋಗಿ ಕಂಡುಕೊಳ್ಳಬೇಕಾಗುತ್ತದೆ. ಮುಂದುವರಿದು ಇದಕ್ಕೆ ಪೂರಕವಾಗಿ ಹೇಳಬೇಕೆಂದರೆ ಈ ಭೌತವಾದಿ ತತ್ವಚಿಂತನೆಯ ಸ್ಪೂರ್ತಿಯಿಂದ ನಾವು ಮನುಷ್ಯತ್ವದ ಉನ್ನತ ಮೌಲ್ಯಗಳುಳ್ಳ, ಸದಾಚಾರವುಳ್ಳ ಸಮಾಜದ ಪುನರ್ನಿರ್ಮಾಣ ಸಾಧ್ಯವೇ ಇಲ್ಲ.

ಹಾಗಾದರೆ ಮನುಷ್ಯ ಒಳ್ಳೆಯವನಾಗಿರಬೇಕಾದರೆ ಅವನು ಸಾಮಾಜಿಕವಾಗಿ ತರಬೇತುಗೊಳ್ಳಬೇಕೆ? ಸಮಾಜದಲ್ಲಿ ಹೆಚ್ಚಿನ ಜನರು ಸಹಜವಾಗಿಯೇ ಸಭ್ಯರಲ್ಲವೇ? ಮನುಷ್ಯ ಸಹಜವಾಗಿಯೇ ಒಳ್ಳೆಯವನಾಗಿಲ್ಲವೇ? ಎಂಬ ಪ್ರಶ್ನೆಯನ್ನು ನೀವು ಕೇಳಬಹುದು. ಇದಕ್ಕೆ ಹೌದು ಮತ್ತು ಇಲ್ಲ ಎಂಬುದೇ ನನ್ನ ಉತ್ತರ.

ಮನುಷ್ಯ ಒಬ್ಬ ಸಮಾಜೋ-ಜೈವಿಕ ಜೀವಿ. ಅವನು ಭಾಗಶಃ ಪ್ರಕೃತಿಯ ಹಾಗು ಭಾಗಶಃ ಸಮಾಜದಿಂದ ನಿರ್ಮಿಸಲ್ಪಟ್ಟ ಜೀವಿ. ಪ್ರಕೃತಿಯ ಸಹಜತೆಯಲ್ಲಿ ಮನುಷ್ಯನ ಗುಣಾವಗುಣಗಳನ್ನು ಹೀಗೆ ಎಂದು ನಿರ್ದಿಷ್ಟವಾಗಿ ಹೇಳುವುದು ಕಷ್ಟ. ಪ್ರಕೃತಿಯಲ್ಲಿ ಒಳ್ಳೆಯದು ಕೆಟ್ಟದ್ದು ಎನ್ನುವ ಪರಿಕಲ್ಪನೆಯೇ ಅಸಹಜ. ಅದರಲ್ಲಿ ಒಳ್ಳೆಯದು ಕೆಟ್ಟದ್ದು ಎಲ್ಲವು ಸಹಜ. ಆದರೆ ಮನುಷ್ಯ ತನ್ನ ಸಹಜ ಪ್ರವೃತ್ತಿಯಾದ ಸ್ವ ಎನ್ನುವ ಪ್ರಜ್ಞೆಯ ಮತ್ತು ಸಂಕುಲ ಉಳಿಸಿಕೊಳ್ಳುವ ಗುಣಗಳ ಹೊರತಾಗಿ ಸಾಮಾಜಿಕ ಪರಿಸ್ಥಿತಿಗಳಿಗನುಗುಣವಾಗಿ ತನ್ನ ನೈತಿಕ ಮೌಲ್ಯಗಳನ್ನು/ಗುಣಗಳನ್ನು ಬೆಳೆಸಿಕೊಳ್ಳುತ್ತಿರುತ್ತಾನೆ.

ಪ್ರತಿಯೊಂದು ಸಮಾಜದಲ್ಲೂ ಹೆಚ್ಚಿನ ಜನರು ಸಭ್ಯರು ಮತ್ತು ಒಳ್ಳೆಯವರೇ ಆಗಿರುತ್ತಾರೆ. ಇಂತಹ ಜನವರ್ಗದವರು ಯಥಾಸ್ಥಿತಿಯಲ್ಲಿ ತಮ್ಮ ಜೀವನವನ್ನು ನಡೆಸುತ್ತಿದ್ದು ಯಾವುದೇ ಪ್ರಮುಖ ನೈತಿಕ ತೀರ್ಮಾನಗಳನ್ನು ತೆಗೆದುಕೊಂಡು ಸಮಾಜದ ಗತಿಯನ್ನು ನಿರ್ಧರಿಸುವಂತಹ ಜವಾಬ್ದಾರಿ ಹೊಂದಿರುವುದಿಲ್ಲ ಮತ್ತು ಅಂತಹ ಸಂದರ್ಭಗಳು ಅವರಿಗೆ ಒದಗಿ ಬರುವುದು ಕಡಿಮೆಯೆ. ಅವರ ದೈನಂದಿನ ಜೀವನ ತಮ್ಮದೇ ಆದ ಒಂದು ಸೀಮಿತ ವಲಯದಲ್ಲಿ ನಡೆಯುತ್ತಿರುತ್ತದೆ ಮತ್ತು ಅವರ ನಡೆನುಡಿಗಳು ಸರಿ ತಪ್ಪುಗಳನ್ನು ಅವರದೇ ಆದ ಸೀಮಿತ ವಲಯದ ಸಂಪ್ರದಾಯ ಮತ್ತು ಪದ್ಧತಿಗಳು ನಿರ್ದೇಶಿಸುತ್ತಿರುತ್ತದೆ. ಆದರೆ, ಇದೇ ಸಭ್ಯ, ನಿರುಪದ್ರವಿ ಜನಗಳು ಬಹಳ ಬೇಗನೆ, ಸುಲಭವಾಗಿ ವಿವೇಚನೆಯನ್ನು ಕಳೆದುಕೊಂಡು ಸಾಮಾಜಿಕ ಪ್ರಚೋದನೆಯಿಂದ ಉಗ್ರತೆ ಮತ್ತು ದುಷ್ಟತೆಯ ಗುಣಗಳನ್ನು ಮೈಗೂಡಿಸಿಕೊಂಡುಬಿಡಬಹುದು.

ಶಾಂತಿ ಮತ್ತು ಸಹಬಾಳ್ವೆಯಿಂದ ಬದುಕನ್ನು ಸಾಗಿಸುತ್ತಿದ್ದ ಹಿಂದೂ ಮತ್ತು ಮುಸಲ್ಮಾನ ಜನರು ತಮ್ಮ ಸಾಮಾಜಿಕ ಭಾವನೆಗಳನ್ನು ಕೆರಳಿಸಿದಾಗ ಅತ್ಯಂತ ಕ್ರೂರ ಹಿಂಸಾ ಕೃತ್ಯಗಳನ್ನು ಪರಸ್ಪರರ ಮೇಲೆ ಎಸಗಿದ್ದನ್ನು ನಾವು ಕಂಡಿಲ್ಲವೆ?

ಎರಡನೆಯದಾಗಿ ಒಂದು ಸಮಾಜದ ಚಾರಿತ್ಯ ಮತ್ತು ಅದರ ಬೆಳವಣಿಗೆಯ ದಿಕ್ಕನ್ನು ನಿರ್ಧರಿಸಲು ಈ ತಟಸ್ಥ ಸಭ್ಯ ಸಾಧು ಜನವರ್ಗದ ಚಾರಿತ್ರ್ಯಕ್ಕಿಂತಲೂ ಸಮಾಜದ ಮುಂಚೂಣಿ ವರ್ಗದ ಜನರ ಚಾರಿತ್ರ್ಯ ಬಹಳ ಮುಖ್ಯವಾಗಿರುತ್ತದೆ. ಈ ಮುಂಚೂಣಿ ಜನವರ್ಗದವರ ಸಾಮಾಜಿಕ ತತ್ವಚಿಂತನೆ ಮತ್ತು ಕ್ರಿಯಾಶೀಲತೆಯೇ ಸಮಾಜದ ವಿಧಿ ಮತ್ತು ಗತಿಯನ್ನು ನಿರ್ಧರಿಸುತ್ತದೆ. ಈ ಜನವರ್ಗದವರು ಎಷ್ಟರ ಮಟ್ಟಿಗೆ ಚಾರಿತ್ರ್ಯಹೀನರಾಗಿರುತ್ತಾರೋ, ಎಷ್ಟರ ಮಟ್ಟಿಗೆ ಅಧ್ಯಾತ್ಮಿಕ ಗುಣಗಳನ್ನು ಕಳೆದುಕೊಂಡಿರುತ್ತಾರೋ ಅಷ್ಟರ ಮಟ್ಟಿಗೆ ಒಟ್ಟಾರೆ ಮನುಷ್ಯ ಸಮಾಜದ ಮೇಲೆ ಕೆಡುಕುಗಳು ಸವಾರಿ ಮಾಡುತ್ತಿರುತ್ತದೆ. ಮನುಷ್ಯ ಸಮಾಜ ತುಕ್ಕು ಹಿಡಿಯುತ್ತಿರುತ್ತದೆ. ಇಲ್ಲಿ ನೀವು ತಪ್ಪಾಗಿ ಗ್ರಹಿಸಿಬಿಡಬಹುದಾದ ಒಂದು ಸಾಧ್ಯತೆಯನ್ನು ಈಗ ಹೇಳಿಬಿಡುತ್ತೇನೆ.

ಭೌತವಾದಿ ತತ್ತ್ವ ಚಿಂತನೆಯನ್ನು ನಂಬಿದವರೆಲ್ಲರೂ ದುಷ್ಟರು ಮತ್ತು ಪಾರಮಾರ್ಥಿಕತೆಯನ್ನು ನಂಬಿಕೊಂಡವರೆಲ್ಲ ಒಳ್ಳೆಯವರು ಎಂದು ಸಾರಾಸಗಟಾಗಿ ಹೇಳಿಬಿಡುವುದು ನನ್ನ ಉದ್ದೇಶವಲ್ಲ. ಆದರೆ ಭೌತವಾದಿ ಚಿಂತನೆಯಲ್ಲಿ ಶ್ರದ್ಧೆ ಇಟ್ಟವರಿಗೆ ಪ್ರಜ್ಞಾಪೂರ್ವಕವಾಗಿ ಸದ್ಗುಣಗಳನ್ನು ಬೆಳಸಿಕೊಂಡು ಆಚರಣೆಗೆ ತರಲು ಯಾವುದೇ ತುಡಿತ ಮತ್ತು ತರ್ಕದ ಆಧಾರಗಳಿರುವುದಿಲ್ಲ. ಅದೇ ಭೌತವಾದಿ ಚಿಂತನೆಯನ್ನು ಮೀರಿ ಯೋಚಿಸುವವರಿಗೆ ದುಷ್ಟತನವನ್ನು, ಕೆಡುಕನ್ನು ಸಮರ್ಥಿಸಿಕೊಳ್ಳಲೂ ಸಾಧ್ಯವಾಗುವುದಿಲ್ಲ.

ಅಭೌತವಾದ –ಈ ನಕಾರಾತ್ಮಕ ಪದವನ್ನು ಬಳಸುತ್ತಿರುವುದು ಮತ್ತಾವುದೇ ಚಿಂತನ ಪಂಥ ನನ್ನ ಮನಸಿನಲ್ಲಿ ಇಲ್ಲ ಎನ್ನುವ ಕಾರಣದಿಂದ –ಅಂದರೆ ವಸ್ತುವೇ ಆತ್ಯಂತಿಕ ಸತ್ಯ ಎಂಬುದನ್ನು ತಿರಸ್ಕರಿಸುವುದರಿಂದ ವ್ಯಕ್ತಿಯು ಒಂದು ಸಹಜ ನೆಲೆಗೆ ಏರಲ್ಪಟ್ಟು ಅವನು ಹೆಚ್ಚು ತನ್ನ ಅಂತರಂಗದ ಕಡೆಗೆ ದೃಷ್ಟಿ ಹರಿಸಿ ತನ್ನ ಸಹಜ ಪ್ರಕೃತಿಯನ್ನು ತಿಳಿಯಲು ಮತ್ತು ತನ್ನ ಅಸ್ತಿತ್ವದ ನಿಜವಾದ ಉದ್ದಿಶ್ಯವನ್ನು ಅರಿಯಲು ಮತ್ತು ಸಾರ್ಥಕಗೊಳಿಸಿಕೊಳ್ಳಲು ಒತ್ತಾಯಿಸುತ್ತದೆ. ಈ ಹುಡುಕಾಟದ ಪ್ರಯತ್ನವೇ ಮನುಷ್ಯನಿಗೆ ಅವನು ಒಳ್ಳೆಯವನಾಗಲು ಮತ್ತು ಸಹಜವಾಗಿರಲು ಒಂದು ಪ್ರಬಲವಾದ ಚಾಲಕ ಶಕ್ತಿಯಾಗುತ್ತದೆ.

ಎಂದಿಗೆ ಮನುಷ್ಯ ಭೌತವಾದಿ ಚಿಂತನೆಯಿಂದ ದಾಟಿ ತನ್ನ ಅಸ್ತಿತ್ವದ ಉದ್ದೇಶವನ್ನು ತಿಳಿಯಲು ತನ್ನೊಳಗನ್ನು ಕಾಣುವ ಪ್ರಯತ್ನವನ್ನು ಮಾಡುತ್ತಾನೋ ಆಗ ಮಾತ್ರ ನಿಜದ ಅರಿವನ್ನು ಬೆಳೆಸಿಕೊಂಡು ಪರಿಪೂರ್ಣತೆಯೆಡೆಗೆ ಸಾಗಲು ಸಾಧ್ಯವಾಗುತ್ತದೆ.

(ಕನ್ನಡಕ್ಕೆ: ಬಿ.ವಿ.ಸುರೇಂದ್ರ)

◆◆

ಅನುಬಂಧ: ೩

ಕರ್ನಾಟಕದ ಮಿತ್ರ ಕಿಷನ್ ಪಟ್ನಾಯಕ್: ಒಂದು ವೈಯಕ್ತಿಕ ನೋಟ

ಡಿ.ಎಸ್. ನಾಗಭೂಷಣ

ಡಾ. ರಾಮಮನೋಹರ ಲೋಹಿಯಾ ಅವರು ೧೯೬೭ರಲ್ಲಿ ನಿಧನರಾದ ನಂತರ ಅವರ ಸಂಯುಕ್ತ ಸಮಾಜವಾದಿ ಪಕ್ಷ ಅನೇಕ ಅಲ್ಲೋಲ-ಕಲ್ಲೋಲಗಳನ್ನು ಎದುರಿಸಿತು. ಸಮಾಜವಾದಿಗಳ ಏಕತೆಯ ಪ್ರಯತ್ನಗಳು ಮತ್ತು ಅವು ಉಂಟು ಮಾಡಿದ ಗೊಂದಲಗಳು ಮತ್ತು ಪಕ್ಷದಲ್ಲಿನ ಒಳಜಗಳಗಳು ಎಪ್ಪತ್ತರ ದಶಕದ ಆರಂಭದ ವರ್ಷಗಳಲ್ಲಿ ಪಕ್ಷದ ವಿಭಜನೆಗಳಿಗೆ ಕಾರಣವಾಯಿತು. ಇದರ ಪರಿಣಾಮವಾಗಿ ಪಕ್ಷದ ಹಿರಿಯ ನಾಯಕರಲ್ಲೊಬ್ಬರಾಗಿದ್ದ ಕಿಷನ್ ಪಟ್ನಾಯಕ್ ಬೇಸತ್ತು, ನನ್ನೊಂದಿಗೆ ಒಮ್ಮೆ ಮಾತನಾಡುತ್ತಾ ತಿಳಿಸಿದ್ದಂತೆ, ಅಧಿಕಾರ ರಾಜಕಾರಣದಿಂದ ಸ್ವಲ್ಪ ಕಾಲ ದೂರವಿರಲು ನಿಶ್ಚಯಿಸಿ ಲೋಹಿಯಾ ವಿಚಾರಗಳನ್ನು ಯುವಜನರಲ್ಲಿ ಬಿತ್ತಿ ಬೆಳೆಯಲು 'ಲೋಹಿಯಾ ವಿಚಾರ ಮಂಚ್' ಎಂಬ ವೇದಿಕೆಯನ್ನು ಆರಂಭಿಸಿದರು. ಇದಕ್ಕೆ ಕರ್ನಾಟಕದ ಹಲವು ಯುವ ಸಮಾಜವಾದಿಗಳು ಬೆಂಬಲವಾಗಿ ನಿಂತ ಕಾರಣ, ಕರ್ನಾಟಕದೊಂದಿಗೆ ಕಿಷನ್ ಅವರ ಗೆಳೆತನ ಆರಂಭವಾಯಿತು. ಕರ್ನಾಟಕದಲ್ಲಿನ ಅವರ ಮುಖ್ಯ ಬೆಂಬಲಿಗರಾಗಿದ್ದವರೆಂದರೆ, ಟಿ.ಎನ್. ನಾಗರಾಜ್, ಪ್ರೊ. ಎಂ.ಡಿ. ನಂಜುಂಡಸ್ವಾಮಿ. ಕೆ. ರಾಮದಾಸ್, ಬಿ.ಎನ್. ಶ್ರೀರಾಮ. ರವಿವರ್ಮ

ಕುಮಾರ್, ಪೂರ್ಣಚಂದ್ರ ತೇಜಸ್ವಿ, ವೈಜನಾಥ ಪಾಟೀಲ, ಬಿ.ಆರ್. ಪಾಟೀಲ ಮುಂತಾದವರು.

ಕಿಷನ್ ಎಪ್ಪತ್ತರ ದಶಕದ ಆರಂಭದಿಂದಲೂ ವರ್ಷದಲ್ಲಿ ಕನಿಷ್ಠ ಎರಡು ಬಾರಿಯಾದರೂ ಕರ್ನಾಟಕಕ್ಕೆ ಭೇಟಿ ನೀಡುತ್ತಿದ್ದರು. ಇಲ್ಲಿನ ತಮ್ಮ ಸಮಾಜವಾದಿ ಮಿತ್ರರು ಮತ್ತು ಅಭಿಮಾನಿಗಳೊಂದಿಗೆ ಬೆರೆಯುತ್ತಿದ್ದರು. ವಿಶೇಷವಾಗಿ ಅವರ ಭೇಟಿ ಬೆಂಗಳೂರು-ಮೈಸೂರುಗಳಿಗೇ ಹೆಚ್ಚು. ಅವರ ಗೆಳೆಯರು ರಾಜ್ಯದ ವಿವಿಧ ಭಾಗಗಳಲ್ಲಿ ಅವರಿಗಾಗಿ ಸಣ್ಣಪುಟ್ಟ ಸಭೆಗಳನ್ನು ಏರ್ಪಡಿಸುತ್ತಿದ್ದರು. ಆ ಕಾಲದಲ್ಲೇ ಕರ್ನಾಟಕದ ಯುವಜನರಲ್ಲಿ ಲೋಹಿಯಾ ವಿಚಾರಗಳು ಹೆಚ್ಚು ಪ್ರಚಾರಕ್ಕೆ ಬಂದು, ವಿವಿಧ ನೆಲೆಗಳಲ್ಲಿ ಪ್ರಭಾವವನ್ನೂ ಬೀರತೊಡಗಿದ್ದು.

ನಾನು ವೈಯಕ್ತಿಕವಾಗಿ ಕಿಷನ್ ಪಟ್ನಾಯಕ್ ಅವರನ್ನು ಮೊದಲ ಬಾರಿಗೆ ನೋಡಿದ್ದು ೧೯೭೭ರ ಚುನಾವಣೆಗಳ ನಂತರ ಬೆಂಗಳೂರಿನ ಗಾಂಧಿ ಭವನದಲ್ಲಿ ನಡೆದ ಸಮಾಜವಾದಿಗಳ ಸಭೆಯಲ್ಲಿ. ನಂತರ ಆತ್ಮೀಯ ಸಂಬಂಧ ಬೆಳೆದದ್ದು, ದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ ಎಪ್ಪತ್ತರ ದಶಕದಲ್ಲಿ ಬಲಿಷ್ಠವಾಗಿ ಬೆಳೆದಿದ್ದ ಸಮಾಜವಾದಿ ಯುವಜನ ಸಭಾದ (ಎಸ್.ವೈ.ಎಸ್) ಸಭೆಗಳಲ್ಲಿ ಅವರನ್ನು ಮತ್ತೆ ಮತ್ತೆ ಭೇಟಿಯಾಗುವ ಸಂದರ್ಭಗಳು ಒದಗಿಬಂದಾಗ. ಹಾಗೆ ನೋಡಿದರೆ, ಅಲ್ಲಿ ಎಸ್.ವೈ.ಎಸ್. ಅಷ್ಟು ಬಲಿಷ್ಠವಾಗಿ ಬೆಳೆದು ಆ ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಸಂಘದ ಚುನಾವಣೆಗಳಲ್ಲಿ ಸಾಕಷ್ಟು ಯಶಸ್ವಿಯಾಗಲೂ ಅವರೇ ಕಾರಣರಾಗಿದ್ದರು. ಆನಂತರ ಅವರು ನನ್ನ ಸಮಾಜವಾದಿ ಗುರುವೇ ಆದರು. ೧೯೭೮ರಲ್ಲಿ ಹಾಸನದ ಸಮಾಜವಾದಿ ಗೆಳೆಯರ ಸಹಕಾರದೊಂದಿಗೆ ನಾನು ಆಯೋಜಿಸಿದ್ದ ತರುಣ ಲೋಹಿಯಾವಾದಿಗಳ ಸಮ್ಮೇಳನಕ್ಕೆ ಅವರು ನನ್ನ ವೈಯಕ್ತಿಕ ಆಹ್ವಾನವನ್ನು ಒಪ್ಪಿ ಬಂದರು. ಅಲ್ಲಿಂದಾಚೆಗೆ ನನ್ನ ಮತ್ತು ಅವರ ಸಂಬಂಧ ಘನಿಷ್ಠವಾಯಿತು.

ಈ ಎಲ್ಲ ಹಿನ್ನೆಲೆಯಿಂದಲೇ ಕಿಷನ್ ಅವರ ಮಹತ್ವಾಕಾಂಕ್ಷೆಯ ಕಾರ್ಯಕ್ರಮವಾಗಿದ್ದ ಒಂದು ಹೊಸ ಸಮಾಜವಾದಿ ಪಕ್ಷವನ್ನು ಸ್ಥಾಪಿಸಲು ಬೆಂಗಳೂರನ್ನು ಆಯ್ಕೆ ಮಾಡಿಕೊಂಡದ್ದು. ೧೯೭೭ರಲ್ಲಿ ಜಯಪ್ರಕಾಶ್ ನಾರಾಯಣರ ಕೋರಿಕೆ ಮತ್ತು ಮಾರ್ಗದರ್ಶನದಲ್ಲಿ ಎಲ್ಲ ಕಾಂಗ್ರೆಸ್ಸೇತರ ಮತ್ತು ಕಮ್ಯುನಿಸ್ಟೇತರ ವಿರೋಧ ಪಕ್ಷಗಳು ಒಂದಾಗಿ ಜನತಾ ಪಕ್ಷ ಸ್ಥಾಪಿತವಾಗಿ ಅದರಲ್ಲಿ ಸಮಾಜವಾದಿ ಪಕ್ಷವೂ ವಿಲೀನವಾದ ಪರಿಣಾಮವಾಗಿ ದೇಶದಲ್ಲಿ ಸಮಾಜವಾದಿ ವಿಚಾರಗಳ ಒಂದು ರಾಜಕೀಯ ವೇದಿಕೆಯೇ ಇಲ್ಲವಾಗಿತ್ತು. ಜೊತೆಗೆ ಆ ಜನತಾ ಪಕ್ಷವೂ ಛಿದ್ರಗೊಂಡು ಅದರಲ್ಲಿದ್ದ ಸಮಾಜವಾದಿ ಶಕ್ತಿಗಳೂ ಆ ವಿವಿಧ ರಾಜಕೀಯ ಛಿದ್ರಗಳಲ್ಲಿ ಹಂಚಿ ಹೋಗಿದ್ದವು. ಅಂತಹ ಸಂದರ್ಭದಲ್ಲಿ ಕರ್ನಾಟಕದ ತಮ್ಮ ಸಮಾಜವಾದಿ ಸಂಗಾತಿಗಳ

ನೆರವಿನೊಂದಿಗೆ ಅವರು 'ಸಮತಾ ಸಂಘಟನೆ' ಎಂಬ ಹೊಸ ಸಮಾಜವಾದಿ ಸಂಘಟನೆಯ ಸ್ಥಾಪನಾ ಸಮ್ಮೇಳನವನ್ನು ಬೆಂಗಳೂರಿನಲ್ಲಿ ಆಯೋಜಿಸಿದರು. ದೇಶದ ವಿವಿಧ ಭಾಗಗಳ ನೂರಾರು ಸಮಾಜವಾದಿಗಳು 'ಸಮತಾ ಸಮ್ಮೇಳನ'ವೆಂದೇ ಹೆಸರಾದ ಆ ಸಮಾವೇಶಕ್ಕೆ ಬಂದು ಕರ್ನಾಟಕದ ಯುವ ಸಮಾಜವಾದಿಗಳ ಮನಸ್ಸಿನಲ್ಲಿ ಅದೊಂದು ಸ್ಮರಣಾರ್ಹ ಘಟನೆಯಾಗಿಯೇ ಉಳಿದಿದೆ.

ಈ ಸಮತಾ ಸಮ್ಮೇಳನ ಸಮಾಜವಾದಿಗಳ ಎಂದಿನ ಕೂದಲು ಸೀಳುವ ಸೈದ್ಧಾಂತಿಕ ವಾದ-ವಿವಾದಗಳಿಂದಾಗಿ ದೊಡ್ಡ ಪರಿಣಾಮವ್ನೇನೂ ಉಂಟು ಮಾಡದೆ ಮುಕ್ತಾಯವಾಯಿತಾದರೂ, ಅದು ಮಲೆನಾಡಿಗೇ ಸೀಮಿತವಾಗಿದ್ದ ಕರ್ನಾಟಕದ ರೈತರ ಸಂಘ ಪ್ರೊ.ಎಂ.ಡಿ. ನಂಜುಂಡಸ್ವಾಮಿಯವರ ನೇತೃತ್ವ ಪಡೆದು ರಾಜ್ಯಾದ್ಯಂತ ಒಂದು ಪರಿಣಾಮಕಾರಿ ಚಳುವಳಿಯಾಗಿ ಬೆಳೆಯಲು ಪ್ರೇರೇಪಣೆ ನೀಡಿತು.

ಕಿಷನ್ ಕರ್ನಾಟಕ ದಲಿತ ಸಂಘರ್ಷ ಸಮಿತಿ ಮತ್ತು ಕರ್ನಾಟಕ ರೈತಸಂಘಗಳೆರಡರ ಜೊತೆಗೂ ನಿಕಟ ಮತ್ತು ಆತ್ಮೀಯ ಸಂಬಂಧ ಹೊಂದಿದ್ದರು.. ಏಕೆಂದರೆ ಈ ಎರಡೂ ಸಂಘಟನೆಗಳ ನಾಯಕರೆಲ್ಲ ಅವರ ಸಮಾಜವಾದಿ ಶಿಷ್ಯ-ಮಿತ್ರರೇ ಆಗಿದ್ದರು. ಅವರು ಈ ಎರಡೂ ಸಂಘಟನೆಗಳ ಸಭೆಗಳು ಮತ್ತು ಅಧ್ಯಯನ ಶಿಬಿರಗಳಿಗೆ ಆಹ್ವಾನಿತ ಸಂಪನ್ಮೂಲ ವ್ಯಕ್ತಿಯಾಗಿ ಬರುತ್ತಿದ್ದರಲ್ಲದೆ ಈ ಸಂಘಟನೆಗಳಲ್ಲಿ ಆಗಾಗ ತಲೆದೋರುತ್ತಿದ್ದ ಭಿನ್ನಾಭಿಪ್ರಾಯಗಳನ್ನು ಪರಿಹರಿಸುವ ಪ್ರಯತ್ನವನ್ನೂ ಮಾಡುತ್ತಿದ್ದರು. ಅವರು ಯಾವುದೇ ವಿಷಯವಾಗಿ ಮಾತನಾಡಿದರೂ ಅದು ತಲಸ್ಪರ್ಶಿಯಾಗಿರುತ್ತಿತ್ತಲ್ಲದೆ ಅತ್ಯಂತ ಸರಳವಾದ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗೂ ಅರ್ಥವಾಗುವಷ್ಟು ಸರಳವಾದ ಇಂಗ್ಲಿಷ್ ಭಾಷೆಯಲ್ಲಿರುತ್ತಿತ್ತು. ಯಾರೇ ಎಂತಹ ಪ್ರಶ್ನೆ ಕೇಳಿದರೂ ಅವುಗಳಿಗೆ ಅತ್ಯಂತ ಸಾವಧಾನದ ಮತ್ತು ವಿವರವಾದ ಉತ್ತರಕೊಡುತ್ತಿದ್ದರು. ಮತ್ತು ಅತ್ಯಂತ ಕಿರಿಯರೊಂದಿಗೂ ಯಾವುದೇ ಹಿರಿತನದ ಭಾರಗಳಿಲ್ಲದೆ ಆತ್ಮೀಯವಾಗಿ ಬೆರೆಯುತ್ತಿದ್ದರು. ತಮ್ಮ ಆತಿಥೇಯರ ಮೇಲೆ ಯಾವುದೇ ವಿಶೇಷ ಬೇಡಿಕೆಗಳ ಭಾರ ಹೊರಿಸದ ಕನಿಷ್ಟ ಅಗತ್ಯಗಳ ವಾಸ್ತವ್ಯ ಅವರದ್ದು.

ತೊಂಬತ್ತರ ದಶಕದ ಆರಂಭದಲ್ಲಿ ಈ ದಲಿತ ಮತ್ತು ರೈತ ಸಂಘಟನೆಗಳು ರಾಜ್ಯದ ಇತರ ಪ್ರಗತಿಪರ ಶಕ್ತಿಗಳ ಜೊತೆಗೂಡಿ ಒಂದು ಪರ್ಯಾಯ ರಾಜಕೀಯ ಪಕ್ಷವನ್ನು ರಚಿಸಲು ಮಾಡಿದ ಪ್ರಯತ್ನಗಳಲ್ಲಿ ಕಿಷನ್ ಕೂಡ ತಮ್ಮ ಹಿರಿತನದ ಕೊಡುಗೆ ನೀಡಿದ್ದರು. ಆದರೆ ಈ ಪ್ರಯತ್ನ ಎರಡೂ ಕಡೆಯ ಕೆಲವು ನಾಯಕರ ಹಠಮಾರಿತನಗಳಿಂದಾಗಿ ವಿಫಲವಾಯಿತೆಂಬುದು ಬೇರೆ ವಿಷಯ. ಅದೇನೇ ಇರಲಿ ಈ ಸಂದರ್ಭದಲ್ಲಿ ಅವರು ಹಾಸನದಲ್ಲಿದ್ದ ನಮ್ಮ ಮನೆಯಲ್ಲಿ ಒಂದು ವಾರ ತಂಗಿದ್ದು ಅಲ್ಲಿನ ಯುವ ಗೆಳೆಯರೊಂದಿಗೆ ನಡೆಸಿದ ಹಲವು ಸಂವಾದಗಳು ನನ್ನ ಜೀವನದಮೂಲ್ಯ ನೆನಪಿನ ಗುಚ್ಛವಾಗಿದೆ ಎಂಬುದನ್ನು ಇಲ್ಲಿ ದಾಖಲಿಸಬೇಕು.


ನಂತರ ಅವರು ೨೦೦೨ರ ಮಾರ್ಚ್‌ನಲ್ಲಿ ಮೈಸೂರಿನಲ್ಲಿ ಡಾ. ರಾಮಮನೋಹರ ಲೋಹಿಯಾ ಟ್ರಸ್ಟ್‌ನ ಉದ್ಘಾಟನೆಗೆ ಬಂದಾಗ ರಾಮದಾಸ್ ಅವರ ಮನೆಯಲ್ಲಿ ಒಂದೆರಡು–ಮೂರು ದಿನ ಅವರ ಜೊತೆಯಲ್ಲಿ ಕಾಲ ಕಳೆದ ಮತ್ತು ಅವರೊಂದಿಗೆ ಜಾಗತೀಕರಣದ ಪರಿಣಾಮಗಳ ಬಗ್ಗೆ ವ್ಯಾಪಕವಾಗಿ ಚರ್ಚಿಸಿದ ನೆನಪು ನನ್ನ ಮನಸ್ಸಿನಲ್ಲಿ ಹಸಿರಾಗಿದೆ.

ನಂತರದ ದಿನಗಳಲ್ಲೂ ಕಿಷನ್ ಹಲವಾರು ಬಾರಿ ನಮ್ಮ ಮನೆಯಲ್ಲಿ ತಂಗಿ ಹೋಗಿದ್ದಾರೆ. ಕವಿ ಮನಸ್ಸಿನ ಅವರು (ತಾವೂ ಕೆಲವು ಕವಿತೆಗಳನ್ನು ಬರೆದಿರುವುದಾಗಿ ಅವರು ಹೇಳುತ್ತಿದ್ದರು) ನನ್ನ ಶ್ರೀಮತಿಯ ಪದ್ಯಗಳನ್ನು ನನ್ನಿಂದ ಹಿಂದಿ–ಇಂಗ್ಲಿಷ್‌ಗೆ ಅನುವಾದಿಸಿಕೊಂಡು ಮೆಚ್ಚಿ ಅವಳನ್ನು ಹರಸಿ ಹೋಗಿದ್ದಾರೆ. ನಾನೂ ಅವರನ್ನು ಒರಿಸ್ಸಾದಿಂದ ಆಹ್ವಾನಿಸಿ ಅವರ ನೇತೃತ್ವದಲ್ಲಿ ಒಂದೆರಡು ಅಧ್ಯಯನ ಶಿಬಿರಗಳನ್ನು ಏರ್ಪಡಿಸಿದ್ದೇನೆ. ೨೦೦೨ರಲ್ಲಿ ಶಿವಮೊಗ್ಗದಲ್ಲಿ ಆಯೋಜಿಸಲಾಗಿದ್ದ ಇಂತಹ ಒಂದು ಶಿಬಿರದಲ್ಲಿ ನನ್ನ ವೈಯಕ್ತಿಕ ಪ್ರಯತ್ನವಾಗಿ ಕರ್ನಾಟಕದ ಕಿಷನ್ ಹಿತೈಷಿಗಳಿಂದ ಸಂಗ್ರಹಿಸಿದ್ದ ಒಂದು ಲಕ್ಷಕ್ಕೂ ಹೆಚ್ಚಿನ ಮೊತ್ತದ ಹಮ್ಮಿಣಿಯನ್ನು ಅವರಿಗೆ ಅರ್ಪಿಸಿದ ಧನ್ಯತಾ ಭಾವ ನನ್ನಲ್ಲಿದೆ. ಅದಕ್ಕಿಂತ ಹೆಚ್ಚಾಗಿ ಆ ಶಿಬಿರದ ಸಮಾರೋಪವಾಗಿ ಅವರು ಮಾಡಿದ ದೀರ್ಘ ಭಾಷಣ ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ. ಇಡೀ ಸಮಾಜವಾದಿ ಚರಿತ್ರೆಯ ಇತಿಹಾಸವನ್ನು ಸಮೀಕ್ಷಿಸಿದ ಕಿಷನ್, ಸಮಾಜವಾದ ಇಂದು ಭಾರತದ ಅಧ್ಯಾತ್ಮಿಕತೆಯಿಂದ ಕಲಿಯಬೇಕಾದ ಪಾಠಗಳು ಹಲವಾರಿವೆ ಎಂದು ಹೇಳಿ ಅಲ್ಲಿನೆರೆದಿದ್ದ ಯುವ ಸಮಾಜವಾದಿಗಳ ಮನಸ್ಸಿನಲ್ಲಿನ ಸಮಾಜವಾದದ ಚಿತ್ರವನ್ನೇ ಬದಲಿಸಿದರು ಎಂದೇ ಹೇಳಬೇಕು.


ಆನಂತರ ನಾನು ಮೈಸೂರಿನಲ್ಲಿದ್ದಾಗ ಒಂದೆರಡು ಬಾರಿ ಅವರು ನಮ್ಮ ಮನೆಗೆ ಬಂದು ಹೋಗಿದ್ದಾರೆ. ಬಹುಶಃ ೨೦೦೪ರಲ್ಲಿ ನಾನು ಅವರನ್ನು ಕೊನೆಯ ಬಾರಿಗೆ ನೋಡಿದ್ದು, ಮಾತನಾಡಿದ್ದು. ಆನತಿ ಕಾಲದಲ್ಲೇ ಅವರ ಅಕಾಲಿಕ ಮರಣದ ಸುದ್ದಿ ಬಂತು. ಕರ್ನಾಟಕದ ಸಮಾಜವಾದಿಗಳು ತಾಯಿ ಹೃದಯದ ತಮ್ಮ ಈ ಮಾರ್ಗ ದರ್ಶಕನನ್ನು ಕಳೆದುಕೊಂಡು ಅನಾಥವಾಯಿತು. ಆದರೆ ಕರ್ನಾಟಕದ ಅವರ ಸಮಾಜವಾದಿ ಮಿತ್ರರ ಮನಸ್ಸಿನಲ್ಲಿ ಅವರ ನೆನಪು ಸದಾ ಹಸಿರಾಗಿರುತ್ತದೆ.

◆◆


ಸಮಾಜವಾದದ ಸಾಲುದೀಪಗಳು:
ಚಿತ್ರಸಂಪುಟ




ಆಚಾರ್ಯ ನರೇಂದ್ರ ದೇವ




ಜಯಪ್ರಕಾಶ್ ನಾರಾಯಣ



ರಾಮಮನೋಹರ ಲೋಹಿಯಾ




ಅಶೋಕ ಮೆಹ್ತಾ




ಅಚ್ಯುತ ಪಟವರ್ಧನ್




ಕಮಲಾದೇವಿ ಚಟ್ಟೋಪಾಧ್ಯಾಯ




ನಾನಾ ಸಾಹೇಬ್ ಗೋರೆ




ಯೂಸುಫ್ ಮೆಹರಲಿ




ಎಸ್.ಎಂ.ಜೋಶಿ




ಮಧು ಲಿಮಯೆ




ಜಾರ್ಜ್ ಫರ್ನಾಂಡೀಸ್




ಕಿಷನ್ ಪಟ್ನಾಯಕ್




ನಾಥ್ ಪೈ




ಮಧು ದಂಡವತೆ




ರಬಿ ರಾಯ್




ಸುರೇಂದ್ರ ಮೋಹನ್




ರಾಜ್‌ನಾರಾಯಣ




ಕರ್ಪೂರಿ ಠಾಕೂರ್



ಸಿಜಿಕೆ. ರೆಡ್ಡಿ



ಮೃಣಾಲ್ ಗೋರೆ



ಪ್ರಮೀಳಾ ದಂಡವತೆ

ಲೋಹಿಯಾ ಪ್ರಕಾಶನ

'ಕ್ಷಿತಿಜ', ಕಪ್ಪಗಲ್ಲು ರಸ್ತೆ, ಗಾಂಧಿನಗರ, ಬಳ್ಳಾರಿ 583 102
08392-257412, 99007 50549

ಒಟ್ಟು ಪ್ರಕಟಣೆಗಳು 185, ಲಭ್ಯವಿರುವವು 33

1.	ಲೋಹಿಯಾ	ಅನು: ಹಸನ್ ನಯೀಂ ಸುರಕೋಡ	ರೂ.150
2.	ಅಮೃತ ಮತ್ತು ವಿಷ	ರಂಜನಾ ದರ್ಗಾ	ರೂ.125
3.	ಖರೇ ಖರೇ ಸಂಗ್ಯಾ-ಬಾಳ್ಯಾ	ಡಾ.ಎಂ.ಎಂ.ಕಲಬುರ್ಗಿ	ರೂ.30
4.	ಶಿವಾಜಿ ಮೂಲ ಕನ್ನಡ ನೆಲ	ಡಾ. ಸರಜೂ ಕಾಟ್ಕರ್	ರೂ.125
5.	ಕರ್ನಾಟಕ ಏಕೀಕರಣ ಬಳ್ಳಾರಿ ಜಿಲ್ಲೆ ಹಿನ್ನೆಲೆಯಲ್ಲಿ	ಕೋ.ಚೆನ್ನಬಸಪ್ಪ	ರೂ.60
6.	ನಾನು ಪಾಟೀಲ ಪುಟ್ಟಪ್ಪ(ಭಾಗ-1)	ನಿರೂಪಣೆ: ಡಾ.ಸರಜೂ ಕಾಟ್ಕರ್	ರೂ.250
7.	ನಾನು ಪಾಟೀಲ ಪುಟ್ಟಪ್ಪ(ಭಾಗ-2)	ನಿರೂಪಣೆ: ಡಾ.ಸರಜೂ ಕಾಟ್ಕರ್	ರೂ.250
8.	ಎರಡು ಕಿರು ನಾಟಕಗಳು	ಎಸ್.ಮಾಲತಿ	ರೂ.25
9.	ನೆನಪುಗಳು: ಚಂಪಾ ಲಿಮಯೆ	ಅನು: ಡಾ.ಸರಜೂ ಕಾಟ್ಕರ್ ಪ್ರೊ.ಎ.ಬಿ.ಘಾಟಗೆ	ರೂ.60
10.	ಅರ್ಥನೀತಿ	ಡಾ.ಹ.ಸೋಮಶೇಖರ	ರೂ.75
11.	ಸೌಹಾರ್ದ ಸೌರಭ	ರಂಜನಾ ದರ್ಗಾ	ರೂ.50
12.	ಇವರು ನಮ್ಮ ಜನರು	ನಾಡೋಜ ಡಾ.ಪಾಟೀಲ ಪುಟ್ಟಪ್ಪ	ರೂ.60
13.	ಗೊಂದಲಿಗ್ಯಾ	ಎ.ಎಂ.ಮದರಿ	ರೂ.150
14.	ಗಾಂಧಿಗೆ ಸಾವಿಲ್ಲ	ಅನು: ಹಸನ್ ನಯೀಂ ಸುರಕೋಡ	ರೂ.50
15.	ಚಾತುರ್ವರ್ಣ ಧರ್ಮದರ್ಶನ	ಕುಮಾರ ಕಕ್ಕಯ್ಯ ಪೋಳ	ರೂ.100

ಚಿಕ್ಕಗೌಡ್ರ ನಾಗನಗೌಡ-ಶಿವಮ್ಮ-ದತ್ತಿಯ ಪ್ರಕಟಣೆಗಳು

೧.	ಬಸವಪ್ರಜ್ಞೆ	ರಂಜನಾ ದರ್ಗಾ	ರೂ.೧೫
೨.	ಬಸವಣ್ಣನವರ ದೇವರು	ರಂಜನಾ ದರ್ಗಾ	ರೂ.೧೫
೩.	ಬಸವಧರ್ಮದ ವಿಶ್ವಸಂದೇಶ	ರಂಜನಾ ದರ್ಗಾ	ರೂ.೧೫
೪.	ಲಿಂಗವಪೂಜಿಸಿ ಫಲವೇನಯ್ಯಾ?	ರಂಜನಾ ದರ್ಗಾ	ರೂ.೨೫
೫.	ನಡೆನುಡಿ ಸಿದ್ಧಾಂತ	ರಂಜನಾ ದರ್ಗಾ	ರೂ.೨೫
೬.	ಜಾತಿವ್ಯವಸ್ಥೆಗೆ ಸವಾಲಾದ ಶರಣರು	ರಂಜನಾ ದರ್ಗಾ	ರೂ.೩೦
೭.	ಶರಣರ ಸಮಗ್ರ ಕ್ರಾಂತಿ	ರಂಜನಾ ದರ್ಗಾ	ರೂ.೯೦
೮.	ಸಲ್ಲಿಲಿತ ಸನ್ಮಾರ್ಗ	ಚೆನ್ನಬಸವಪ್ಪ ಬೆಟ್ಟದೂರು	ರೂ.೩೦
೯.	ಜಯದೇವಿ ತಾಯಿ ಲಿಗಾಡೆ	ಡಾ.ರಾಮಕೃಷ್ಣ ಮರಾಠೆ	ರೂ.೪೫
೧೦.	ಸೇನೆಯಿಲ್ಲದ ಕದನ	ಡಾ.ರಂಗನಾಥ ಕಂಟನಕುಂಟೆ	ರೂ.೫೦
೧೧.	ಗಾಂಧಿಯೊಂದಿಗೆ ಒಬ್ಬ ನಾಸ್ತಿಕ	ವೆಂಕಟೇಶ ಮಾಚಕನೂರ	ರೂ.೩೦
೧೨.	ನನ್ನ ಬದುಕು	ಎ.ಎಸ್.ಹಿಪ್ಪರಗಿ	ರೂ.೩೦
೧೩.	ಅವಿಶ್ರಾಂತ	ಡಾ.ಲಕ್ಷ್ಮಣ ಕೌಂಟೆ	ರೂ.೨೦೦
೧೪.	ಮೌಢ್ಯಾಚರಣೆ ನಿಷೇಧ ಕಾಯ್ದೆ ಔಚಿತ್ಯ	ಡಾ.ಕೋಚೆ	ರೂ.೪೦
೧೫.	ಲಿಂಗಾಯತ ಹಿಂದೂ ಅಲ್ಲ ವೀರಶೈವವು ಅಲ್ಲ	ಡಾ.ಕೋಚೆ	ರೂ.೧೮
೧೬.	ಮಹಾತ್ಮಗಾಂಧಿ ರಾಮಮನೋಹರ ಲೋಹಿಯಾ ಅವರು ಕಂಡಂತೆ	ಅನು: ಬಿ.ಎ.ಸನದಿ	ರೂ.೨೨
೧೭.	ರಸಿಕ ರುದ್ರತಪಸ್ವಿ ಲೋಹಿಯಾ	ಸಂ: ಡಿ.ಎಸ್.ನಾಗಭೂಷಣ	ರೂ.೫೧
೧೮.	ಸಾಮಾಜವಾದದ ಸಾಲುದೀಪಗಳು	ಸಂ: ಡಿ.ಎಸ್.ನಾಗಭೂಷಣ	ರೂ.೫೧

...ಸಮಾಜವಾದಿ ಆಂದೋಲನವೆಂಬುದು ಇಂದು ಹೆಚ್ಚೂ ಕಡಿಮೆ ಇಲ್ಲವಾಗಿದೆ. ಆದರೂ ತಮ್ಮನ್ನು ಸಮಾಜವಾದಿಗಳೆಂದು ಹೆಮ್ಮೆಯಿಂದ ಗುರುತಿಸಿಕೊಳ್ಳಬಯಸುವ ರಾಜಕಾರಣಿಗಳಿಗೇನೂ ಇಂದಿನ ರಾಜಕಾರಣದಲ್ಲಿ ಕೊರತೆ ಇಲ್ಲ. ಇದಕ್ಕೆ ಕಾರಣ, ಭಾರತದ ರಾಜಕಾರಣದಲ್ಲಿನ ಸಮಾಜವಾದಿ ಆಂದೋಲನದ ಉಜ್ವಲ ಚರಿತ್ರೆ. ಅಷ್ಟೇ ಉಜ್ವಲವೆನ್ನಿಸುವ ಅದರ ನಾಯಕ ಗಣ. ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಭಾರತ ಈ ಎರಡರಲ್ಲೂ ಚಿಂತನೆ ಮತ್ತು ಹೋರಾಟಗಳೆರಡರಲ್ಲೂ ಅನನ್ಯ ಪಾತ್ರ ವಹಿಸಿದ ನಾಯಕರು ಅನೇಕ. ಇವರಲ್ಲಿ ಕೆಲವರು ಭಾರತದಲ್ಲಿ ಸಮಾಜವಾದಿ ತತ್ವ, ಆಂದೋಲನ ಮತ್ತು ಪಕ್ಷಗಳ ಸ್ಥಾಪಕರು.

ಇಂತಹ ಉಜ್ವಲ ಇತಿಹಾಸವನ್ನು ಹೊಂದಿರುವ ವ್ಯಕ್ತಿತ್ವಗಳ ಒಂದು ಸಾಲು ದೀಪವನ್ನು ಪ್ರಸ್ತುತಪಡಿಸುವ ಮೂಲಕ ಸಂಕ್ಷಿಪ್ತವಾಗಿಯಾದರೂ ಆ ವ್ಯಕ್ತಿತ್ವಗಳ ಪರಿಚಯಗಳನ್ನು ನಿರೂಪಿಸುವ ಪ್ರಯತ್ನವಾಗಿ ಈ ಪುಸ್ತಕವನ್ನು ರೂಪಿಸಲಾಗಿದೆ,. ಇಲ್ಲಿ ಪರಿಚಿತವಾಗಿರುವ ವ್ಯಕ್ತಿತ್ವಗಳ ವೈಖರಿಗಳೇ ಸಮಾಜವಾದಿ ಆಂದೋಲನದ ತಾತ್ವಿಕತೆ, ಹೋರಾಟ ಮತ್ತು ರಾಜಕಾರಣಗಳ ಸಂಕೀರ್ಣತೆಯನ್ನು ಸೂಚಿಸುವಂತಿದೆ.

(ಸಂಪಾದಕರ ಮಾತುಗಳಿಂದ)

ಲೋಹಿಯಾ ಪ್ರಕಾಶನ, ಬಳ್ಳಾರಿ
ಬೆಲೆ ರೂ. 51/-
ISBN-978-81-87731-61-0
9 788187 731610

